# ಕೆಂಧೂಳಿ

ಹೊಸ ಸವಾಲುಗಳ ಕನಸು

ಪ್ರಧಾನ ಸಂಪಾದಕ: ತುರುವನೂರು ಮಂಜುನಾಥ

**KENDHOOLI** *Kannada Weekly*

kendhooli.com/e-paper/

**ಪದಚ್ಯುತಿಯ ಹೊಸ್ತಿಲಲ್ಲಿ ಪಾಕ್ ಪ್ರಧಾನಿ ಇಮ್ರಾನ್ ಖಾನ್**



ಡಿ. ಉಮಾಪತಿ ಅವರ ಲೇಖನದಲ್ಲಿ...

ಸಂಪುಟ - 02 | ಸಂಚಿಕೆ - 71 | ಪುಟ - 16 | ರೂ. 16/- | ಮಾರ್ಚ್ 24 ರಿಂದ ಮಾರ್ಚ್ 30, 2022

KARKAN/2018/76310



# ಸೋನಿಯಾಗೆ ಧೃತರಾಷ್ಟ್ರ ಪ್ರೇಮದ ಕುರುಡು

## ಅನ್ಯಾಯದ ವಿರುದ್ಧ ಧ್ವನಿಯೆತ್ತದ ಜನ


ಸನತ್‌ಕುಮಾರ ಬೆಳಗಲಿ ಅವರ ಅಂಕಣದಲ್ಲಿ...

ಭಾರತೀಯರ ಪ್ರಾಣ ಹಿಂಡುತ್ತಿರುವ

## ಲೈಂಗಿಕ ಸುಲಿಗೆಯೆಂಬ ಬ್ಲಾಕ್‌ಮೇಲ್ ಬಿಸಿನೆಸ್!

## ಬಿಜೆಪಿ ಅಧ್ಯಕ್ಷರ ಬದಲಾವಣೆಗೆ ಹೈ ಸಿದ್ಧತೆ

# ವಿವಾದಗಳು ಮಕ್ಕಳ ಮನಸ್ಸಿನ ಮೇಲೆ ಬೀರುವ ಪ್ರಭಾವ..!?




ಮಕ್ಕಳ ಕಲಿಕಾ ಸಮಯದಲ್ಲಿ ಯಾವುದೇ ಪ್ರಭಾವಗಳು ಅವರ ಮೆದುಳಿಗೆ ಹೋಗಬಾರದು. ಶಿಕ್ಷಣ ಮತ್ತು ಅದರ ಉದ್ದೇಶಗಳಷ್ಟೆ ಮುಖ್ಯವಾಗಬೇಕು, ಒಂದು ವೇಳೆ ಅದರ ಹೊರತಾಗಿ ಈ ಸಮಾಜದಲ್ಲಿ, ಶಿಕ್ಷಣದಲ್ಲಿ ಏನಿರಬೇಕು ಏನಿರಬಾರದು ಎನ್ನುವುದನ್ನು ಶಿಕ್ಷಣ ತಜ್ಞರ ಸಮಿತಿ ಸಲಹೆ ನೀಡುತ್ತದೆ ಮತ್ತು ವರದಿಗಳನ್ನು ಜಾರಿಗೆ ತರಲು ಪ್ರಯತ್ನಿಸುತ್ತದೆ. ಆದರೆ ಅದರ ಹೊರತಾಗಿ ಯಾವುದೇ ವಿಷಯಗಳು ರಾಜಕೀಯವಗಿ ಚರ್ಚೆಯಗಬಾರದು, ಚರ್ಚೆಯಾದರೂ ಅದು ಕೇವಲ ನಾಲ್ಕು ಗೋಡೆಯ ಮಧ್ಯೆ ಚರ್ಚೆಗಳನ್ನು ಮಾಡಿ ಗುಣಾತ್ಮಕ ಶಿಕ್ಷಣವನ್ನು ತರಲು ಪ್ರಯತ್ನಿಸಬೇಕು. ಅದನ್ನು ಹೊರೆತು ಪಡಿಸಿ ರಾಜಕೀಯ ಲಾಭ ಪಡೆಯಲು ಬೀದಿ ರಂಪ ಮಾಡುವ ಮೂಲಕ ಮತಗಳಿಕೆಯ ಅಸ್ತ್ರವನ್ನಾಗಿ ಪರಿವರ್ತಿಸುವ ಕಾರ್ಯ ಆಗಬಾರದು .ಆದರೆ ದುರಾದೃಷ್ಟ ಈಗ ಆಗಿರುವುದೇ ಹಾಗೆ..!?

ಮಕ್ಕಳ ಮುಗ್ದ ಮನಸ್ಸಿನ ಮೇಲೆ ಇಂತ ರಾಜಕೀಯ ಬಿರುಗಾಳಿಗಳು ಬಿದ್ದು ಕಲಿಕೆಯಲ್ಲಿ ವ್ಯತ್ಯಯಗಳಾಗುತ್ತಿವೆ. ಮಾನಸಿಕವಾಗಿ ತೀರ ಸೂಕ್ಷ್ಮಮತಿಗಳಾದ ಮಕ್ಕಳ ಮೆಲೆ ಬೀಳುವ ಪ್ರಭಾವಗಳಿಂದ ಕಲಿಕೆಯ ಮೇಲೆ ಸಾಕಷ್ಟು ಪರಿಣಾಮ ಬೀರುತ್ತವೆ,ಅದರಿಂದ ಗೊಂದಲಕ್ಕೊಳಗಾದ ಮಕ್ಕಳು ಕಲಿಕೆಯ ಬದಲಿಗೆ ರಾಜಕಾರಣಿಗಳು ಮತ್ತು ಮತೀಯ ಚಿಂತನೆಗಳತ್ತ ಮುಖಮಾಡುವ ಸಾಧ್ಯತೆಗಳೂ ಇವೆ ಈ ಬಗ್ಗೆ ಯಾಕೆ ರಾಜಕಾರಣಿಗಳು ಆಲೋಚನೆ ಮಾಡುತ್ತಿಲ್ಲ ಕೇವಲ ಅವರಿಗೆ ರಾಜಕಾರಣ ಮತ್ತು ಮತಗಳಿಕೆಯೇ ಮುಖ್ಯವೇ? ಈ ಬಗ್ಗೆ ನಿಜಕ್ಕೂ ಸಾಮಾಜಿಕ ಕಾಳಜಿ ಇದ್ದರೆ ರಾಜಕಾರಣಿಗಳು ಇದರ ಬಗ್ಗೆ ಚಿಂತಿಸಬೇಕು.

ಶಿಕ್ಷಣ ತಜ್ಞ ಡಾ.ಎಚ್.ನರಸಿಂಹಯ್ಯ ಅವರು ಹೀಗೆ ಹೇಳಿದ್ದಾರೆ: "ಶಿಕ್ಷಣ ಎನ್ನುವುದು ಒಂದು ಪವಿತ್ರ ಕಾರ್ಯ ಶಿಕ್ಷಣದಲ್ಲಿ ಜಾತಿ–ಧರ್ಮ ಬಿಂಬಿಸುವ ಓಲೈಸುವ ಯಾವುದೇ ಪ್ರಭಾವವೂ ಇರಬಾರದು, ಅಲ್ಲದೆ ಶಿಕ್ಷಣದಲ್ಲಿ ರಾಜಕೀಯ ಉದ್ದೇಶಗಳಿಗಾಗಿ ಏನನ್ನೂ ಹೇರುವ ಕೆಲಸವಾಗಬಾರದು. ಒಂದು ವೇಳೆ ಆ ರೀತಿಯ ಕಾರ್ಯಗಳು ಮುಂದುವರೆದರೆ ಮಕ್ಕಳ ಸೂಕ್ಷ್ಮ ಮನಸ್ಸುಗಳ ಮೇಲೆ ಪ್ರಭಾವ ಬೀರಿದರೆ ಕಲಿಕೆಗೆ ತೊಂದರೆಯಾಗುತ್ತದೆ. ಆ ವಿದ್ಯಾರ್ಥಿ ಶಿಕ್ಷಣ ಗುಣಮಟ್ಟಕ್ಕಿಂತ ವಿವಾದಗಳತ್ತ ಗಮನಹರಿಸಿ ಬದಲಿಮಾರ್ಗ ಹಿಡಿಯುತ್ತಾನೆ"

ಹೌದು ಹಲವಾರು ಶಿಕ್ಷಣ ತಜ್ಞರು ಅಭಿಪ್ರಾಯ ಪಟ್ಟಂತೆ ಮಗು ಕಲಿಕೆಯ ಸಂದರ್ಭದಲ್ಲಿ ಪಠ್ಯದಲ್ಲಿ ಅಳವಡಿಸುವ ಪಾಠ ದ ಕುರಿತು ವಿವಾದಗಳು ಉಂಟಾದಾಗ ಮಕ್ಕಳ ಮನಸ್ಸು ಆ ವಿವಾದಗಳ ಸುತ್ತಲಿನ ಘಟನೆಗಳ ಕರಿತು ಯೋಚಿಸುತ್ತಾರೆ ಯಾಕೆ? ಎನ್ನು ಪ್ರಶ್ನೆಗಳು ಅದರ ಮೂಲವನ್ನು ಹುಡುಕುತ್ತಾ ರಾಜಕಾರಣದ ಸುತ್ತಲಿನ ವಿಷಯಗಳತ್ತ ಮುಖಮಾಡಿಬಿಡುತ್ತಾರೆ. ಸಹಜವಾಗಿಯೇ ಕಲಿಕೆಯ ಬದಲಿಗೆ ರಾಜಕಾರಣದ ಜಾತಿ–ಧರ್ಮಗಳ ಬಲವಾದ ನಂಬಿಕೆಗಳ ಕುರಿತು ಯೋಚಿಸುವಷ್ಟರ ಮಟ್ಟಿಗೆ ವಿದ್ಯಾರ್ಥಿಗಳ ಯೋಚನಾ ಲಹರಿ ಹರಿದುಬಿಡುತ್ತದೆ. ಇದರ ಪರಿಣಾಮವಾಗಿ ವಿದ್ಯಾರ್ಥಿಗಳು ಅಡ್ಡದಾರಿಗೆ ಬೀಳುತ್ತಾರೆ. ರಾಜಕಾರಣದ ಗೀಳಿಗೆ ಇಳಿಯುತ್ತಾರೆ,



ಧರ್ಮದ ಕುರಿತು ಯೋಚಿಸುತ್ತಾ ಧರ್ಮಾಂಧತೆಯತ್ತ ಜಾತಿ ಯತ್ತ ಸೆಳೆತವಾಗಿ ಆ ಕಡೆ ಗಮನಹಿರಿಸುವ ಮೂಲಕ ಶಿಕ್ಷಣ ಕಲಿಕೆಯತ್ತ ಗಮನ ಕಡಿಮೆಯಾಗಿ ಬಿಡುತ್ತದೆ.

ಇದು ಸಹಜವಾಗಿಯೇ ಈ ಸಮಾಜದಲ್ಲಿ ಇಂದು ಆಗುತ್ತಿರುವ ಪ್ರಿಕ್ರಿಯೆ. ಈ ಮೂಲಕವೆ ರಾಜಕೀಯಕ್ಕೆ ವಿದ್ಯಾರ್ಥಿಗಳು ಪ್ರವೇಶ ಮಾಡಿ ಕಾಲೇಜುಗಳಲ್ಲಿ ಪಕ್ಷಗಳ ಪರ ವಕಾಲತ್ತು ವಹಿಸುತ್ತಾರೆ. ಅಲ್ಲಿಗೆ ಆ ವಿದ್ಯಾರ್ಥಿಯ ಶಿಕ್ಷಣ ಮುಗಿದಂತೆ. ಇದು ಇಂದಿನ ಪರಿಸ್ಥಿತಿ ಇದನ್ನು ರಾಜಕಾರಣಿಗಳು ಮಾಡುತ್ತಿರುವ ಮತ ಶಿಕ್ಷಣದ ಒಂದು ಝಲಕ್ ಎಂದೆ ಹೇಳಬಹುದು.

ಇತ್ತೀಚೆಗೆ ಮೂರು ವಿವಾದಗಳು ರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಗೆ ಗ್ರಾಸವಾದವು; ಹಿಜಾಬ್,ಶಿಕ್ಷಣದಲ್ಲಿ ಭಗವದ್ಗೀತೆ ಮತ್ತು ರಾಷ್ಟ್ರೀಯ ಶಿಕ್ಷಣ ನೀತಿ ಆದರೆ ಹಿಜಾಬ್ ಮತ್ತು ಭಗವದ್ಗೀತೆ ಹೆಚ್ಚು ವಿವಾದಕ್ಕೊಳಗಾದವು. ಇಲ್ಲಿ ಎರಡು ಪ್ರಶ್ನೆಗಳು ಬಹುಮುಖ್ಯವಾಗುತ್ತವೆ; ಯಾವುದೇ ಜಾತಿ–ಧರ್ಮದವರಾಗಲಿ ಶಿಕ್ಷಣ ವಿಷಯ ಬಂದಾಗ ವಿವಾದಗಳಿಗೆ ಮುಖಕೊಡಬಾರದು. ಏಕೆಂದರೆ ನಮ್ಮ ಮನೆಯ ಮಕ್ಕಳು ಕಲಿಯುವ ವಿದ್ಯಾಭ್ಯಾಸ ಜಾತ್ಯಾತೀತವಾಗಿರಬೇಕು. ಶಿಕ್ಷಣದಲ್ಲಿ ಏಕತೆ ಇರಬೇಕು ಮೇಲು–ಕೀಳು ಎಂಬ ಭಾವಗಳು ಬರಬಾರದು. ಹಾಗಾಗಿಯೇ ಸಮವಸ್ತ್ರತೊಡಬೇಕು ಮತ್ತು ಧರ್ಮ ಪಾಲಿಸುವ ಶಿಕ್ಷಣ ಅದು ಸಂವಿಧಾನಾತ್ಮವಾಗಿದ್ದರೆ ಅದನ್ನು ಒಪ್ಪಿ ಸುಮ್ಮನಾಗಬೇಕು. ಆದರೆ ಅದನ್ನೇ ದೊಡ್ಡ ವಿವಾದವನ್ನಾಗಿ ಮಾಡಿ ಮಕ್ಕಳ ಮನಸ್ಸಿನ ಮೇಲೆ ಪರಿಣಾಮ ಬೀರುವ ರೀತಿಯಲ್ಲಿ ಸಂಘರ್ಷಕ್ಕೆ ಎಡೆ ಮಾಡಿಕೊಟ್ಟರೆ ನಮ್ಮಮಕ್ಕಳೇ ಬೀದಿಗೆ ಬರುವುದು ಎನ್ನುವುದನ್ನು ನಾವು ಅರಿತುಕೊಳ್ಳಬೇಕಿದೆ.

ಹಿಜಾಬ್ ಬಗ್ಗೆ ಇಲ್ಲಿ ಒಂದೆರಡು ಮಾತು ಪ್ರಸ್ತಾಪ ಮಾಡಲೇ ಬೇಕಾಗುತ್ತದೆ ಯಾಕೆಂದರೆ ಒಂದು ಉಡುಗೆ ಇಂದು ದೊಡ್ಡ ವಿವಾದವಾಗುತ್ತದೆ ಎಂದರೆ ಶಿಕ್ಷಣದಲ್ಲಿ ಸ್ತ್ರೀ ಸ್ವಾತಂತ್ರ್ಯದ ಬಗ್ಗೆ ಪ್ರಶ್ನೆ ಎತ್ತಿದಂತಾಗುತ್ತದೆ, ಮತಶ್ರದ್ಧೆ ಮತ್ತು ಧಾರ್ಮಿಕ ನಂಬಿಕೆಗಳಿಗೆ ಜೋತುಬಿದ್ದ ಒಂದು ಸಾಂಪ್ರದಾಯಿಕ ಸಮಾಜ ಮಹಿಳೆಯನ್ನು ತನ್ನ ನಿರ್ಬಂಧಗಳಿಂದ ಸಡಿಲಗೊಳಿಸಲಿಚ್ಚಿಸುವುದಿಲ್ಲ. ಬೌದ್ಧಿಕವಾಗಿ ಎಲ್ಲ ರೀತಿಯ ಭೌತಿಕ ತಡೆಗೋಡೆಗಳನ್ನೂ ಕೆಡವಿಹಾಕಿರುವ ಈ ಅತ್ಯಾಧುನಿಕ ಡಿಜಿಟಲ್ ಯುಗದಲ್ಲೂ ತನ್ನದೇ ಆದ ಶಾಸ್ತ್ರ ನಿಯಮಗಳ ಮೂಲಕ, ಸಂಹಿತೆಗಳ ಮೂಲಕ ಮತ್ತು ಸಾಂಪ್ರದಾಯಿಕ ಆಚರಣೆಗಳ ಮೂಲಕ ಮಹಿಳಾ ಸಮುದಾಯವನ್ನು ನಾಲ್ಕು ಗೋಡೆಗಳ ನಡುವೆ ಬಂಧಿಸುವ ಪ್ರಯತ್ನವನ್ನು ಧಾರ್ಮಿಕ ಮೂಲ ಭೂತವಾದಿಗಳು ಮಾಡುತ್ತಲೇ ಇದ್ದಾರೆ. ತಮ್ಮ ಬದುಕಿನ ಪಯಣವನ್ನು ಸುಗಮವಾಗಿಸುವ ನಿಟ್ಟಿನಲ್ಲಿ ಅರಿವಿನ ಪಯಣವನ್ನು ವಿಸ್ತರಿಸಿಕೊಳ್ಳುತ್ತಲೇ ನಡೆದಿರುವ ಮಹಿಳಾ ಸಮೂಹಕ್ಕೆ, ಜಾತಿ, ಧರ್ಮ, ಆಚಾರ, ಆಚರಣೆ ಮತ್ತು ನಂಬಿಕೆಗಳ ಅಡ್ಡಬೇಲಿಗಳನ್ನು ನಿರ್ಮಿಸುವ ಮೂಲಕ ಧರ್ಮ ಪ್ರಚಾರಕರು ಮತ್ತು ಸಂಸ್ಕೃತಿ ನಿರೂಪಕರು ಪುರುಷಾಧಿಪತ್ಯದ ನೆಲೆಗಳನ್ನು ಭದ್ರಪಡಿಸುತ್ತಿದ್ದಾರೆ. ಈ ಒಂದು ಪ್ರಕ್ರಿಯೆಯನ್ನು ಈಗ ತೀವ್ರಗೊಳ್ಳುತ್ತಿರುವ ಹಿಜಾಬ್ ಪ್ರಕರಣದಲ್ಲೂ ಕಾಣಬಹುದು.

ಆದರೆ ಇಲ್ಲಿ ಒಂದು ಧರ್ಮ ಹೇಗೆ ಸ್ತ್ರೀಯನ್ನು ಬಂಧಿಸಿದೆ ಎನ್ನುವುದು ಮುಖ್ಯವಾಗುತ್ತದೆ. ಆ ಬಂಧವನ್ನು ಸಡಿಲಿಸಲು ಧರ್ಮ ಅಡ್ಡಿಉಂಟು ಮಾಡುತ್ತದೆ ಎನ್ನುವುದು ಆ ಧರ್ಮದ ಪುರುಷರು, ಧರ್ಮಗುರುಗಳ ಬಲವಾದ ನಂಬಿಕೆ ಈ ಆಧುನಿಕ ಯುಗದಲ್ಲೂ ಇಂತ ಗೊಡ್ಡು ಸಂಪ್ರದಾಯಗಳು ಬೇಕೆ? ಈ ಪ್ರಶ್ನೆ ಹಾಗಿರಲಿ ಆದರೆ ಇಲ್ಲಿ ಅನಾವಶ್ಯಕವಾಗಿ ಈ ವಿವಾದವನ್ನು ಮುನ್ನಲೆಗೆ ತಂದಿದ್ದು ಮತ್ತು ರಾಜಕಾರಣದ ದಾಳವನ್ನು ಉರುಳಿಸಿದ್ದು ಪ್ರಮುಖವಾಗಿ ಕಾಣುತ್ತದೆ. ಅ ಮೂಲಕ ಮಕ್ಕಳ ಮೇಲೆ ವಿದ್ಯಾರ್ಥಿಗಳ ಮೇಲೆ ಆದ ಪ್ರಭಾವ ಇದೆಯಲ್ಲ ಅದು ನಿಜಕ್ಕೂ ದೊಡ್ಡ ಅಘಾತವೇ! ಅದರಿಂದ ಹೊರಬರಲಾರದೆ ಅವಿನಾರ್ಯವಾಗಿ ಆ ಮಹಿಳೆಯರು ಹೋರಾಟಕ್ಕಿಳಿದು ಇನ್ಯಾರದ್ದೋ ದಾಳವಾಗಿದ್ದು ಆ ಮೂಲಕ ಶಿಕ್ಷಣದ ಬದಲಿಗೆ ಹೋರಾಟದ ಕಿಚ್ಚಿಗೆ ಕಿವಿಕೊಟ್ಟು ಹೊರಳಿ ಶಿಕ್ಷಣದ ಹಾದಿಯಲ್ಲಿ ರಜಕೀಯತೆಯ ದಾಳವೇ ಟಿಸಿಲೊಡೆದು ಅವರನ್ನ ಇನ್ನೆಲ್ಲೋ ಸಾಗಿಸುವಂತಾಗುವ ಕೂಪಮಂಡೂಕದ ಬದುಕಿಗೆ ಸಿಲಿಕಿಸುವ ಸ್ಥಿತಿಗೆ ಏನು ಹೇಳಬೇಕು?

ಇನ್ನೂ ಈ ವಿವಾದಗಳಿಂದ ಮುಕ್ತಾವಾಗಿ ಹೊರಬಂದರೆ ಶಿಕ್ಷಣದ ಮಾನದಂಡಗಳಲ್ಲೇ ಆಗುತ್ತಿರುವ ಏರಿಳಿತಗಳು ಒತ್ತಾಯಪೂರ್ವಕವಾಗಿ ಶಿಕ್ಷಣದಲ್ಲಿ ಸೇರಿಸುವ ನೀತಿಗಳು ಕೂಡ ಮಾರಕವಗಬಹುದು. ಇದಕ್ಕೆ ಉದಾಹರಣೆ ಎನ್ನುವಂತೆ ಕಳೆದ ಕೆಲ ವರ್ಷಗಳ ಹಿಂದೆ ಪರೀಕ್ಷಾ ಪದ್ಧತಿಯನ್ನು ಬದಲಿಸಬೇಕು ಎನ್ನುವ ಹೇಳಿಕೆ ದೊಡ್ಡ ವಿಷಯವಾಗಿತ್ತು . ಪರೀಕ್ಷಾ ಪದ್ದತಿಯನ್ನು ಬದಲಿಸಬೇಕು ಎನ್ನುವುದು ಅಂದರೆ ಓಪನ್ ಬುಕ್‌ಪರೀಕ್ಷಾ ಪದ್ಧತಿ ಮಾಡಬೇಕು ಎನ್ನುವ ಆಗಿದ್ದ ಶಿಕ್ಷಣ ಸಚಿವರ ಹೇಳಿಕೆ ಒಂದು ವಿವಾದವಾಗಿತ್ತು. ಸಹಜವಾಗಿಯೇ ಇದು ವಿದ್ಯಾರ್ಥಿಗಳಿಗೆ ಅನುಕೂಲಕರವೇ ಆಗಿರಬಹುದು ಆದರೆ ಮಕ್ಕಳ ಗುಣಮಟ್ಟ ಕ್ಷೀಣಿಸುತ್ತದೆ ಅವರ ಬೌದ್ಧಿಕ ಶಕ್ತಿ ಕುಂದಿಬಿಡುತ್ತದೆ ಸ್ಮರಣ ಶಕ್ತಿಗೆ ತೊಂದರೆಯಾಗುತ್ತದೆ. ಈಗ ಇರುವ ಪರೀಕ್ಷಾ ಪದ್ಧತಿ ಸ್ಮರಣಾ ಶಕ್ತಿ ಇದನ್ನು ವೃದ್ಧಿಸಲೆಂದೆ ಮಡಲಾದ ಈಪರೀಕ್ಷಾ ಪದ್ಧತಿ ಬದಲಾಗಿ ಈ ವ್ಯವಸ್ಥೆಯನ್ನು ಜಾರಿಗೆ ತಂದರೆ ಅದು ಮಕ್ಕಳ ಮೇಲೆ ಸಾಕಾಷ್ಟು ಪ್ರಭಾವ ಬೀರುತ್ತದೆ ಕಲಿಕೆಯ ಗುಣಮಟ್ಟ ಕ್ಷೀಣಿಸಿಬಿಡುತ್ತದೆ.


ಈ ವ್ಯವಸ್ಥೆಯನ್ನು ಜಾರಿಗೆ ತರಲು ಪ್ರಮುಖ ಕಾರಣಗಳು ಇರಬಹುದು ಖಾಸಗಿ ಶಾಲೆಗಳಲ್ಲಿ ತಮ್ಮ ಶಾಲೆ ಹೆಚ್ಚು ಅಂಕಗಳಿಸಬೇಕು ಮತ್ತು ಹೆಚ್ಚು ವಿದ್ಯಾರ್ಥಿಗಳು ಪಾಸ್ ಆಗುವ ಮೂಲಕ ಶಲೆಗೆ ಒಳ್ಳೆ ಹೆಸರು ಬರುವ ಮೂಲಕ ವರ್ಷ ವರ್ಷವೂ ಮಕ್ಕಳ ಸಂಖ್ಯೆ ಹೆಚ್ಚಾದಂತೆ ಆರ್ಥಿಕ ಬಲವೂ ಶಿಕ್ಷಣ ಸಂಸ್ಥೆಗೆ ಬರುತ್ತದೆ ಎಂಬ ಕಾರಣಕ್ಕೆ ಇಂತ ವ್ಯವಸ್ಥೆಯನ್ನು ಜಾರಿಗೆ ತರುವ ಚಿಂತೆ ಬಂದಿತ್ತೇನೋ ಆದರೆ ಅದು ಸರಿಯಾದ ಮಾರ್ಗ ಅಲ್ಲ.

ಈಗಿನ ಪರೀಕ್ಷಾ ವ್ಯವಸ್ಥೆಯು ವಿದ್ಯಾರ್ಥಿಗಳ ನೆನಪಿನ ಶಕ್ತಿಯನ್ನು ಆಧರಿಸಿದ್ದಾಗಿದೆ. ಆದ್ದರಿಂದ ವಿದ್ಯಾರ್ಥಿಗಳು ಕಂಠಪಾಠ ಮಾಡುತ್ತಾರೆ. ಈ ಕಂಠಪಾಠವೇ ಗ್ರಹಿಕೆ, ಆಲೋಚನೆಗಳ ಜಾಗವನ್ನು ಆಕ್ರಮಿಸಿಕೊಂಡಿದೆ. ಇದರಿಂದ ವಿದ್ಯಾರ್ಥಿಗಳ ಬೌದ್ಧಿಕ ಮತ್ತು ಭಾವನಾತ್ಮಕ ಬೆಳವಣಿಗೆಗೂ ಅಡ್ಡಿಯಾಗಿದೆ. ಈ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳು ಆಲೋಚನಾಹೀನರಾಗಿಯೂ ಉತ್ತಮ ಅಂಕ ಪಡೆಯುವ ಸಾಧನೆ ಮಾಡಬಹುದು. ಇಂತಹ ಪದ್ಧತಿಯಿಂದ ಸಕಾರಾತ್ಮಕ ಸಾಮಾಜಿಕ ಬದಲಾವಣೆಯನ್ನು ಬಯಸುವುದು ಭ್ರಮೆಯಲ್ಲವೇ?

ಇಂತ ವಿವಾದಗಳಿಂದ ರಾಜಕಾರಣಿಗಳು ಶಿಕ್ಷಣ ವ್ಯವಸ್ಥೆಯನ್ನು ಕುಲಗೆಡಸಲು ಕಾರಣರಾಗುತ್ತಿದ್ದಾರೆ ಶಿಕ್ಷಣಕ್ಕೆ ಸಂಬಂಧಿಸಿದಂತೆ ಯಾವುದೇ ವಿವಾದವಿರಬಹುದು ಅದನ್ನು ಒಂದು ಸೌಹಾರ್ದಯುತವಾಗಿ ಬಗೆಹರಿಸಿಕೊಳ್ಳಬೇಕು, ಅದಕ್ಕೆ ಪ್ರಚೋದನಕಾರಿ ಹೇಳಿಕೆಗಳು ನೀಡಬಾರದು ನಿಜವಾಗಿಯೂ ಶಿಕ್ಷಣದ ಬಗ್ಗೆ ಗೌರವ ಇದ್ದರೆ ಈ ರಾಜಕಾರಣಿಗಳು ಇಂದ ವಿವಾದಗಳನ್ನು ಸೃಷ್ಟಿಸುತ್ತಿರಲಿಲ್ಲ ಹಾಗೆ ಸೃಷ್ಟಿಯಾದ ವಿವಾದಗಳನ್ನು ಮೊಟಕು ಹಾಕುತ್ತಿದ್ದರು ಆದರೆ ರಾಜಕಾರಣದ ಲಾಭಕ್ಕೆ ಮಕ್ಕಳನ್ನು ಅಡ್ಡ ದಾರಿಯತ್ತ ಸಾಗಿಸಲು ಮುಂದಾಗುತ್ತಿವೆ ಇದು ಈ ದೇಶದ ದುರಂತವೇ ಸರಿ.

# ನಿಜ ದನಿಯ ಕಾಯಕ ಯೋಗಿ ಬಸವಲಿಂಗ ಸ್ವಾಮೀಜಿ

ಇಂಥವರು



ರಾಜ್ಯದ ಗಡಿ ಭಾಗದ ಚಿನ್ನಹಗರಿ ನದಿ ತಟದಲ್ಲಿ ನೆಲೆ ಕಂಡಿರುವ ಸಿದ್ದಯ್ಯನ ಕೋಟೆಯ ಚಿತ್ತರಗಿ ವಿಜಯ ಮಹಾಂತೇಶ್ವರ ಶಾಖಾ ಮಠದ ಬಸವಲಿಂಗ ಸ್ವಾಮೀಜಿ ಮಠದ ದಾಸೋಹಕ್ಕೆ ಅಗತ್ಯವಾದ ದವಸವನ್ನು ಸ್ವತಃ ತಾವೇ ಉತ್ತು ಬೆಳೆಯುವುದರ ಮೂಲಕ ನಿಜ ದನಿಯ ಕಾಯಕ ಸ್ವಾಮೀಜಿಯಾಗಿ ಹೊರಹೊಮ್ಮಿದ್ದಾರೆ.

ಜಂಗಮ ಜೋಳಿಗೆ ಹಾಕಿಕೊಂಡು ಜನರ ಬಳಿಗೆ ಹೋಗಿ ದುಶ್ಚಟಗಳ ಬಿಡುವ ಜಾಗೃತಿ ಕಾರ್ಯಕ್ರಮಗಳ ಏರ್ಪಡಿಸಿ ಅರಿವು ಮೂಡಿಸುವ ಕೆಲಸ ಮಾಡುತ್ತಿರುವ ಸ್ವಾಮೀಜಿ, ಬಿಡುವಿನ ಸಮಯದಲ್ಲಿ ಕೃಷಿಯಲ್ಲಿ ತೊಡಗುತ್ತಿದ್ದಾರೆ. ಪ್ರತಿ ವರ್ಷ ನೂರಾರು ಕ್ವಿಂಟಾಲ್ ದವಸ ಬೆಳೆಯುತ್ತಾರೆ.

1994 ಬೀದರ್ ನಡೆದಿದ್ದ ರಾಜ್ಯಮಟ್ಟದ ಶರಣ ಸಾಹಿತ್ಯ ಸಮ್ಮೇಳನದಲ್ಲಿ ರಾಮವಿಲಾಸ್ ಪಾಸ್ವಾನ್ ಅವರು ಭಾಷಣದ ಮಧ್ಯದಲ್ಲಿ ಬಸವಣ್ಣನ ಆಶಯಗಳಂತೆ ಲಿಂಗಾಯಿತ ಮಠಕ್ಕೆ ದಲಿತ ವಟುವೊಬ್ಬರನ್ನು ಪೀಠಾಧ್ಯಕ್ಷರನ್ನಾಗಿಸುತ್ತೀರಾ ಎಂಬ ಪ್ರಶ್ನೆ ಎತ್ತಿದ್ದರು. ಸಭೆಯಲ್ಲಿದ್ದ ಇಳಕಲ್ ಡಾ.ಮಹಾಂತ ಸ್ವಾಮೀಜಿ ಉತ್ತಮ ವಟುವೊಬ್ಬರು ಸಿಕ್ಕರೆ ನಮ್ಮ ಪೀಠಕ್ಕೆ ನೇಮಿಸುತ್ತೇನೆ ಎಂದಿದ್ದರು. ನಂತರ ಮಾತಿಗೆ ತಪ್ಪದ ಮಹಾಂತಪ್ಪ ಸ್ವಾಮೀಜಿ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಕಣಗಲ ಗ್ರಾಮದ ಛಲವಾದಿ ಸಮುದಾಯದ ಯುವಕನಿಗೆ ಲಿಂಗ ದೀಕ್ಷೆ, ಸಂಸ್ಕಾರ ನೀಡಿ ಸಿದ್ದಯ್ಯನ ಕೋಟೆ ಶಾಖಾ ಮಠಕ್ಕೆ ಪೀಠಾಧ್ಯಕ್ಷರನ್ನಾಗಿಸಿ ಕಳಿಸಿಕೊಟ್ಟಿದ್ದಾರೆ.

ಎರಡು ಪಾತ್ರೆ, ಅಕ್ಕಿ, ಬೇಳೆಯೊಂದಿಗೆ ಸಿದ್ದಯ್ಯನ ಕೋಟೆಗೆ ಆಗಮಿಸಿದ ಶ್ರೀಗಳು ಅಲ್ಲಿದ್ದ ಸಿಮೆಂಟ್ ಶೀಟಿನ ಸಣ್ಣ ಮನೆಯಿಂದ ಕಾಯಕ ಆರಂಭಿಸಿ ನಿಧಾನವಾಗಿ ಮಠವನ್ನು ಬೆಳೆಸುತ್ತಾ ಸಾಗಿದರು. ಮಠದ ಅಂಗಳದಲ್ಲಿಯೇ ಶೇಂಗಾ, ಜೋಳ, ರಾಗಿ ಬೆಳೆಯುತ್ತಾ, ತೀರಾ ಸಂಕಷ್ಟದ ನಡುವೆಯೂ ಛಲ ಬಿಡದೆ ಮಠವನ್ನು ರಾಜ್ಯಮಟ್ಟಕ್ಕೆ ಪರಿಚಯಿಸಿದರು. ನಿತ್ಯ ಮುಂಜಾನೆ 4 ಗಂಟೆಗೆ ಏಳುವ ಬಸವಲಿಂಗ ಸ್ವಾಮೀಜಿ, ಪೂಜಾ ಕಾರ್ಯ ಮುಗಿಸಿಕೊಂಡು ಜಮೀನಿಗೆ ಹೋಗಿ ಕೆಲಸದಲ್ಲಿ ತೊಡಗುತ್ತಾರೆ. ವಾಪಾಸಾಗಿ ಇಲ್ಲಿನ ವಿದ್ಯಾರ್ಥಿಗಳ ದಾಸೋಹಕ್ಕೆ ಅಣಿಯಾಗುತ್ತಾರೆ. ತಾವೇ ಅಡುಗೆ ಮಾಡಿ ಮಕ್ಕಳಿಗೆ ಬಡಿಸುತ್ತಾರೆ. ಸರಳತೆಯೊಂದಿಗೆ ಭಕ್ತರನ್ನು ನಗು ಮುಖದಿಂದ ಉಪಚರಿಸುತ್ತಾರೆ. ಇದು ಕಳೆದೆರಡು ದಶಕದಿಂದ ನಡೆಯುತ್ತಿದೆ.

ಮಠಕ್ಕೆ ಸೇರಿದ 3 ಎಕರೆ ಮತ್ತು ಗ್ರಾಮದ ರೈತರಿಗೆ ಸೇರಿದ 5 ಎಕರೆ ಜಮೀನನ್ನು ದಾನ ಪಡೆದು ಅಲ್ಲಿನ ಕೊಳವೆ ಬಾವಿಗಳನ್ನು ಬಳಸಿಕೊಂಡು ಸಾವಯವ ಕೃಷಿ ಪದ್ದತಿಯಡಿ ರಾಗಿ, ಜೋಳ, ಬತ್ತ, ನವಣೆ, ಸಜ್ಜೆ, ಗೋಧಿ, ತೊಗರಿ, ಹಲಸಂದೆ, ಹೆಸರು, ಶೇಂಗಾ ಸೇರಿದಂತೆ ತರಕಾರಿ ಬೆಳೆಗಳನ್ನು ಬೆಳೆಯುತ್ತಾರೆ. ಇಲ್ಲಿರುವ ಮೂರು ಹಸುಗಳ ಹಾಲು ಮೊಸರನ್ನು ಮಠದ ದಾಸೋಹಕ್ಕೆ, ಗೊಬ್ಬರವನ್ನು ಜಮೀನಿಗೆ ಬಳಸಿಕೊಳ್ಳುತ್ತಿದ್ದಾರೆ.

ಕಾವಿ ತೊಟ್ಟರೂ ಕೃಷಿಯ ಎಲ್ಲಾ ಕೆಲಸಗಳನ್ನು ತಾವೇ ನಿರ್ವಹಿಸುವ ಶ್ರೀಗಳ ಕಾರ್ಯವನ್ನು ಮೆಚ್ಚಿ ಇಳಕಲ್ ಮಠ ಸೇರಿದಂತೆ ವಿವಿಧ ಮಠಗಳು ಭಕ್ತಿ ಭೂಷಣ, ಕಾಯಕಯೋಗಿ, ಕಾಯಕ ಜ್ಯೋತಿ ಸೇರಿದಂತೆ ಹತ್ತು ಹಲವಾರು ಪ್ರಶಸ್ತಿಗಳನ್ನು ನೀಡಿ ಗೌರವಿಸಿವೆ.




ಪ್ರಧಾನ ಸಂಪಾದಕ
ತುರುವನೂರು ಮಂಜುನಾಥ

ಪುಟ ವಿನ್ಯಾಸ
ಸೂರ್ಯಕುಮಾರ್ ಜಿ.ಎನ್.


ಅಭಿಮತ

**ಪತ್ರಿಕೆಗೆ ಚಂದಾದಾರರಾಗಿ ಮತ್ತಷ್ಟು ಬೆಳೆಯಲು ತಾವೂ ಭಾಗಿಯಾಗಿ ಚಂದಾದಾರರ ವಿವರ**

| | |
|---|---|
| ವಾರ್ಷಿಕ | 1100 |
| ಅರ್ಧವಾರ್ಷಿಕ | 600 |
| ಎರಡು ವರ್ಷ | 2200 |
| ಆರು ವರ್ಷ | 6600 |
| ಪೋಷಕರು | 10,000 |
| ಮಹಾಪೋಷಕರು | 20,000 |

# ಖಾಲಿ ಸದನ ಶಾಸಕರ ಕಾಳಜಿಗೆ ಕೈಗನ್ನಡಿ..!

ತಾವು ಪ್ರತಿನಿಧಿಸುವ ಕ್ಷೇತ್ರದ ಸಮಸ್ಯೆಗಳನ್ನು ಅಧಿವೇಶನದಲ್ಲಿ ಚರ್ಚಿಸಬೇಕಾದ ಪರಿಹಾರ ಕೇಳಬೇಕಾದ ಶಾಸಕರೇ ಸದನದಲ್ಲಿ ಇಲ್ಲ ಅಂದ್ರೆ ಹೇಗೆ..? ಇದು ಸದ್ಯ ಸದನದ ಪರಿಸ್ಥಿತಿ .ಇದು ಇಂದು ನಿನ್ನೆಯದಲ್ಲ ಕಳೆದ 15 ವರ್ಷಗಳಿಂದಲೂ ನಡೆದುಕೊಂಡು ಬರುತ್ತಲೇ ಇದೆ ಇದಕ್ಕೆ ಮೂಲ ಕಾರಣ ಶಾಸಕರಿಗೆ ಅಧಿವೇಶನಕ್ಕಿಂತ ಅವರ ವ್ಯಯಕ್ತಿಕ ವಿಷಯಗಳೇ ಹೆಚ್ಚು..ಅವರ ವ್ಯಾಪಾರವೇ ಹೆಚ್ಚು ಹೀಗಾಗಿ ಸದನಕ್ಕೆ ಬಂದು ಸಹಿ ಹಾಕಿದ್ದರೂ ಅವರು ಗೈರಾಗಿರುತ್ತಾರೆ ಆ ದಿನದ ಎಲ್ಲಾ ಬತ್ಯೆಯನ್ನು ಪಡೆಯುತ್ತಾರೆ ಈ ಮೂಲಕ ಕ್ಷೇತ್ರದ ಜನರಿಗೂ ವಂಚಿಸಿ ಸದನಕ್ಕೂ ವಂಚಿಸುವ ಮೂಲಕ ಕೋಟಿಗಟ್ಟಲೆ ಹಣವನ್ನು ವ್ಯಯಮಾಡುತ್ತಿದ್ದಾರೆ ಆದರೆ ದುರದೃಷ್ಟ ವಷಾತ್ ಇದಕ್ಕೊಂದು ನಿರ್ಧಿಷ್ಟ ನಿಲುವನ್ನು ತರಲಾಗುತ್ತಿಲ್ಲ ಎನ್ನುವುದೇ ನೋವಿನ ಸಂಗತಿ.

ಕೋಟಿಗಟ್ಟಲೇ ಖರ್ಚು ಮಾಡಿ ವಿಧಾನಮಂಡಲ ಅಧಿವೇಶನ ನಡೆಸುತ್ತಾರೆ. ಜನರ ತೆರಿಗೆ ದುಡ್ಡು ಮಾತ್ರ ಖಾಲಿ ಆಗುತ್ತೆ, ಅಧಿವೇಶನಕ್ಕೆ ಮಾತ್ರ ಶಾಸಕರು ಡೋಂಟ್ ಕೇರ್ ಅಂತಾರೆ. ವಿಧಾನಸಭೆ ಕಲಾಪಕ್ಕೆ ಶಾಸಕರ ನಿರಾಸಕ್ತಿ ಎದ್ದು ಕಾಣುತ್ತಿದೆ ಕಲಾಪದಲ್ಲಿ ಆಡಳಿತ ಮತ್ತು ವಿಪಕ್ಷಗಳ ಶಾಸಕರ ಹಾಜರಾತಿಗೆ ಬರ ಬಂದಂತಿದೆ.ಈಗ ನಡೆಯುತ್ತಿರುವ ಕಲಾಪದಲ್ಲಿ ಶಾಸಕರ ಸಂಖ್ಯೆ ತೀರಾ ಕಡಿಮೆಯಾಗುತ್ತಿದೆ ಇಲಾಖೆಗಳಮೇಲಿನ ಚರ್ಚೆಗಳು ನಡೆದರೂ ಕೂಡ ಶಾಸಕರು ಬಂದು ಹಾಜರಿಗೆ ಸಹಿ ಹಾಕಿ ಗೈರು ಹಾಜರಾಗುತ್ತಿರುವುದು ಕಾಣುತ್ತಿದೆ.

ಇಲ್ಲಿ ಬಂದಿರುವುದು ಶಾಸಕರಿಗೆ ಹೊಣೆಗಾರಿಕೆ ಎನ್ನುವುದು ಇಲ್ಲ, ಬದ್ದತೆ ಇಲ್ಲ ಶಾಸಕರ ನಿಜವಾದ ಕರ್ತವ್ಯದ ಅರಿವು ಇಲ್ಲ. ಯಾಕೆಂದರೆ ಈಗ ಆರಿಸಿ ಬರುತ್ತಿರುವ ಎಲ್ಲಾ ಜನಪ್ರತಿನಿಧಿಗಳು ಒಂದಲ್ಲಾ ಒಂದು ಉದ್ಯಮದವರು ಎನ್ನುವುದು ವಿಶೇಷ ಅವರಿಗೆ ಜನರ ಸಮಸ್ಯೆ ಬೇಕಿಲ್ಲ ಕೇವಲ ಶೋಕಿಗೆ ಬರುತ್ತಿದ್ದಾರೆ ಸಾಮಾಜಿಕ ಹೊಣೆಗಾರಿಕೆ, ಹೋರಾಟಗಳ ಅರಿವು ಇಲ್ಲದ ಇವರು ತಮ್ಮ ಆಸ್ತಿ–ಪಾಸ್ತಿ ಉಳಿಸಿಕೊಳ್ಳಲು ಉದ್ಯಮವನ್ನು ಕಾಪಾಡಿಕೊಳ್ಳಲು ಹಣ ಚೆಲ್ಲಿ ಬರುವ ಇವರು ಜನರಿಗಾಗಿ ಏನು ಮಾಡುತ್ತಾರೆ ಹೇಳಿ? ಹೇಳಿ ಕೇಳಿ ಜನರಿಗೆ ಹಣ ಕೊಟ್ಟು ಮತ ಹಾಕಿಸಿಕೊಂಡವರು ಹೀಗಾಗಿಯೇ ಅವರಿಗೆ ಜನರ ಮೇಲಿನ ಪ್ರೀತಿಯೂ ಇಲ್ಲ ಕಾಳಜಿಯೂ ಇಲ್ಲ ಸಮಸ್ಯೆಗಳಿಗಂತೂ ಮೊದಲೆ ತಲೆಕೆಡಿಸಿಕೊಳ್ಳುವುದಿಲ್ಲ.

ಒಂದು ಕಾಲದಲ್ಲಿ ಅಧಿವೇಶನದ ಚರ್ಚೆಗಳು ಎಂದರೆ ಜನಸಾಮಾನ್ಯರು ಕೂಡ ನೋಡಲು ಆತುವರೆಯುತ್ತಿದ್ದರು ಹಾಗೆ ಚರ್ಚೆಗಳು ನಡೆಯುತ್ತಿದ್ದವು. ಆದರೆ ಕಳೆದ ಹದಿನೈದು ವರ್ಷಗಳಿಂದ ಈಚೆಗೆ ಆ ಎಲ್ಲಾ ಚರ್ಚೆಗಳು ಮಾಯವಾಗಿವೆ ಇನ್ನೂ ಮುಂದಿನ ದಿನಗಳಲ್ಲಿ ಯಾವ ಗತಿ ಬರುತ್ತದೆ ಎನ್ನುವ ಆತಂಕ ಕೂಡ



ಮೂಡಿದೆ .ಯಾಕೆಂದರೆ ಈಗ ಒಂದಿಷ್ಟು ಶಾಸಕರು ರಾಜಕಾರಣ ಮಾದರಿಯಾದವರು ಇದ್ದಾರೆ ಅವರು ರಾಜಕೀಯದಿಂದ ನಿವೃತ್ತಿ ಹೊಂದಿದ ಮೇಲೆ ಅವರು ಆಯ್ಕೆಯಾಗದೆ ಇದ್ದರೆ ಮುಂದಿನ ಗತಿ ನಿಜಕ್ಕೂ ಅಯೋಮಯ ಈ ರಾಜ್ಯದ ದೇಶದ ರಾಜಕಾರಣದ ಸ್ಥಿತಿಯಾವಮಟ್ಟಕ್ಕೆ ತಲುಪುತ್ತದೆ ಎನ್ನುವ ಭಯವೂ ಇದೆ.

ಕಳೆದ ಅಧಿವೇಶನದಲ್ಲಿ ವಿಧಾನಸಭೆ ಸ್ಪೀಕರ್ ಆಗಿದ್ದ ರಮೇಶ್ ಕುಮಾರ್

"ಬಹುಶಃ ಯಾವ ಸಭಾಧ್ಯಕ್ಷರಿಗೂ ಭಾರತ ದೇಶದಲ್ಲಿ ಸ್ವಾತಂತ್ರ್ಯ ಬಂದ ನಂತರ ನನಗೆ ಬಂದಿರುವ ದಯನೀಯ ಸ್ಥಿತಿ ಬಂದಿರಲು ಸಾಧ್ಯವಿಲ್ಲ ಅಂತ ಬೇಸರ ವ್ಯಕ್ತಪಡಿಸಿದ್ರು. ಚುನಾಯಿತ ಸದಸ್ಯರು ಸಭೆಗೆ ಬರೋದಿಲ್ಲ, ಮತ್ತೊಬ್ಬರು ಸದಸ್ಯರು ಅವರ ಮೇಲೆ ಮಾಡೋ ಆರೋಪಕ್ಕೆ ಸಮರ್ಥನೆ ನೀಡಲು ಅವರೇ ಇರೋದಿಲ್ಲ. ಇದೆಲ್ಲಾ ಕಡತಕ್ಕೆ ಹೋಗುತ್ತೆ. ಇಷ್ಟ ಪಟ್ಟು ಚುನಾಯಿಸಿದ್ದ ಜನ ಅನಾಥರಾಗ್ತಾರಲ್ಲ, ಇಡೀ ಪ್ರಜಾತಂತ್ರ ಅನಾಥವಾಗುತ್ತಲ್ಲ, ಎಲ್ಲಿಗೆ ಹೋಗಿ ತಲುಪುತ್ತೇವೆ ಅನ್ನೋದು ನನ್ನ ಕಳಕಳಿ. ನಾವು ಇಂದು ಇರ್ತೇವೆ, ನಾಳೆ ಹೊರಟು ಹೋಗ್ತೇವೆ. ಆದ್ರೆ ನಾವೇನು ದಾಖಲೆ ಬಿಟ್ಟು ಹೋಗ್ತಿವಿ ಅಂತ ಪ್ರಶ್ನಿಸಿದ ಸ್ಪೀಕರ್, ಇದು ನಮಗ್ಯಾರಿಗೂ ಗೌರವ ತರುವುದಿಲ್ಲ ಅಂತ ವಿಷಾದ ವ್ಯಕ್ತಪಡಿಸಿದ್ರು.

ದುರ್ದೈವ ಅಂದರೆ ಆಗಲೂ ಕೂಡ ಶಾಸಕ ಬಿ.ಸಿ.ಪಾಟೀಲ್ ಹಾಜರಾಗದೇ ಇದ್ದ ಸಂದರ್ಭದಲ್ಲೇ ಸಭಾಧ್ಯಕ್ಷರು ಇಂತ ನೋವಿನ ಮಾತನಾಡಿದ್ದರು.

ಈಗ ಸದನ ನಡೆಯುತ್ತಿದೆ ಸದನದಲ್ಲಿ ಉತ್ತರಿಸಲು ಕೃಷಿ ಸಚಿವ ಬಿ.ಸಿ.ಪಾಟೀಲ್ ಇಲ್ಲ ಪಾಪ ಅವರ ಮೂಲ ವೃತ್ತಿ ಚಲನಚಿತ್ರದ ಚಿತ್ರೀಕರಣಕ್ಕೆ ತೆರಳಿದ್ದಾರೆ. ಅವರಿಗೆ ಸದನಕ್ಕಿಂತ ಆ ವೃತ್ತಿಯೇ ಹೆಚ್ಚಾಗಿದೆ ಒಂದು ಪ್ರಶ್ನೆಗೆ ಉತ್ತರಿಸುವ ಜವಾಬ್ದಾರಿ ಇಲ್ಲದ ಮೇಲೆ ಸಚಿವರಾಗಿ ಇರಬೇಕು ಯಾಕೆ? ಇಂತ ನಾಲಾಯಕ್ ಸಚಿವರು ಶಾಸಕರನ್ನು ಮತದಾರರು ತಿರಸ್ಕರಿಸಬೇಕು ಆಗಲೆ ಇಂತವರಿಗೆ ಬುದ್ಧಿ ಬರುವುದು ಕೇವಲ ಶೋಕಿಗೆ ರಾಜಕಾರಣ ಮಾಡುವ ಇಂತವರ ವಿರುದ್ಧ ಒಂದು ದಿಕ್ಕಾರ ಇರಲಿ.

ಹೀಗೆ ಅಧಿವೇಶನ ಕತೆಯಾಗಿದೆ. ಇನ್ನೊಂದೆಡೆ ಭೋಜನ ನಂತರ ಕಲಾಪ ಆರಂಭಕ್ಕೆ ಮುಕ್ಕಾಲು ಗಂಟೆ ಬೆಲ್ ಹೊಡೆಯುವ ಪರಿಸ್ಥಿತಿ ನಿರ್ಮಾಣ ಆಗಿತ್ತು. ಮೂಕ್ಕಾಲು ಗಂಟೆ ಬೆಲ್ ಹೊಡೆದ್ರೂ ಕೋರಂಗೆ ಅಗತ್ಯ ಇರುವಷ್ಟು ಶಾಸಕರು ಕೂಡ ಇರುವುದಿಲ್ಲ ಎನ್ನುವುದು ಕೂಡ ಇಲ್ಲಿ ಮುಖ್ಯವಾಗುತ್ತದೆ ಮಧ್ಯಾಹ್ನದ ಬಳಿಕವೂ ಕಲಾಪದಲ್ಲೂ ಶಾಸಕರ ನಿರಾಸಕ್ತಿ ಇತ್ತು. ಆಡಳಿತ, ವಿಪಕ್ಷಗಳ ಶಾಸಕರ ಹಾಜರಾತಿ ಸಂಖ್ಯೆ 60ಅನ್ನು ದಾಟಿರಲಿಲ್ಲ. ಇನ್ನು ಕಲಾಪದಲ್ಲಿ ಮಂತ್ರಿಗಳು ಕೂಡ ಗೈರಾಗಿದ್ದಾರೆ. ಮಾರ್ಚ್ 22 ರ ಮಂಗಳವಾರ ಇದು ಮತ್ತಷ್ಟು ಚರ್ಚೆಗೆ ಕಾರಣವಾಗಿತ್ತು ಮಧ್ಯಾಹ್ನದ ಬಳಿಕ ಕಲಾಪ ಆರಂಭವಾದಾಗ ಕೇವಲ ಇಬ್ಬರು ಮಂತ್ರಿಗಳು ಮಾತ್ರ ಇದ್ದಾರೆ ಎಂದು ಕಾಂಗ್ರೆಸ್ ಉಪನಾಯಕ ಖಾದರ್ ತಿವಿದ್ರು. ಆಗ ಮಧ್ಯಪ್ರವೇಶ ಮಾಡಿದ ಸಚಿವ ಆರ್.ಅಶೋಕ್ ವಿರೋಧ ಪಕ್ಷದವರು ಆಡಳಿತ ಪಕ್ಷದವರ ಕಿವಿ ಹಿಂಡಬೇಕು. ಆದರೆ ಕಿವಿ ಹಿಂಡುವ ಕೈಗಳೇ ಇಲ್ಲ ಎಂದು ಮಂತ್ರಿಗಳ ಗೈರು ಹಾಜರಿಯನ್ನ ಹಾಸ್ಯದ ರೂಪದಲ್ಲಿ ಸಮರ್ಥನೆ ಮಾಡಿಕೊಂಡಿದ್ದು ವಿಪಾರ್ಯಸವಾಗಿತ್ತು.


ಇನ್ನೊಂದೆಡೆ ಸಚಿವರ ಗೈರಿಗೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಗರಂ ಆಗಿದ್ರು. ಮಾಜಿ ಸಿಎಂ ಯಡಿಯೂರಪ್ಪ ಹಾಜರಾತಿಗೆ ಭೇಷ್ ಎಂದು ಸಚಿವರನ್ನ ತರಾಟೆಗೆ ತೆಗೆದುಕೊಂಡರು. ಯಡಿಯೂರಪ್ಪ ಬಿಟ್ರೆ ಇನ್ಯಾರಿಗೂ ಜವಾಬ್ದಾರಿ ಇಲ್ಲ, ಸದಸ್ಯರು ಚರ್ಚೆ ಮಾಡುವಾಗ ಸಚಿವರು ಇರಬೇಕು, ಬರೆದುಕೊಳ್ಳಬೇಕು. ಸಂಬಂಧಪಟ್ಟ ಸಚಿವರಿಲ್ಲದಿದ್ರೆ ಬೇರೆ ಸಚಿವರು ಬರೆದುಕೊಳ್ಳಬೇಕು. ಇಲ್ಲದಿದ್ರೆ ಸಚಿವರು ಹೇಗೆ ಉತ್ತರ ಕೊಡ್ತಾರೆ..? ಸಚಿವರೇ ಇಲ್ಲದೆ ಮೇಲೆ ಏಕೆ ಚರ್ಚೆ ಮಾಡ್ಬೇಕು. ಯಡಿಯೂರಪ್ಪ ಮಾತ್ರ ಕಲಾಪದಲ್ಲಿ ಇರ್ತಾರೆ. ಯಡಿಯೂರಪ್ಪಗೆ ಇರುವ ಜವಾಬ್ದಾರಿ ಬೇರೆಯವ್ರಿಗೆ ಇಲ್ಲ ಅಂತಾ ಸಿದ್ದರಾಮಯ್ಯ ಗುಡುಗಿದ್ದು ಒಂದಿಷ್ಟು ಸದ್ದಾಗಿತ್ತಷ್ಟೆ.

ಶಾಸಕರಿಗೆ ಆಸಕ್ತಿ ಇಲ್ಲ ಅನ್ನುವುದೇ ಇಲ್ಲಿ ಮುಖ್ಯ ಮೇಲೆ ವಿಧಾನಸಭೆ ಕಲಾಪ ಏಕೆ..? ಇಲಾಖೆಗಳ ಬೇಡಿಕೆಗಳ ಮೇಲಿನ ಚರ್ಚೆಯನ್ನಾದ್ರೂ ಮಾಡಿ ಕ್ಷೇತ್ರದ ಸಮಸ್ಯೆಗಳ ಬಗ್ಗೆ ಗಮನ ಸೆಳೆಯಬಾರದಾ..? ಕೋಟಿಗಟ್ಟಲೇ ಖರ್ಚು ಮಾಡಿ ಅಧಿವೇಶನ ನಡೆಸುವುದು ಯಾರಿಗಾಗಿ..? ಈಪ್ರಶ್ನೆಗಳಿಗೆ ಉತ್ತರ ಸಿಗುವುದು ಕಷ್ಟ ಯಾಕೆಂದರೆ ಇನ್ನೂ ಮುಂದಿನ ದಿನಗಳಲ್ಲಿ ಮತ್ತೊಂದಿಷ್ಟು ಸಮಸ್ಯೆಗಳು ಆಗುವ ಲಕ್ಷಣಗಳು ಇವೆ ಆದರೆ ಶಾಸಕರೆನಿಸಿಕೊಂಡವರಿಗೆ ಜವಾಬ್ದಾರಿಯಂತೂ ಇಲ್ಲ ಜನರಪ ಕಾಳಜಿಯಂತೂ ಮೊದಲೇ ಇಲ್ಲ ಕೇವಲ ಶೋಕಿಯೇ ಇವರ ಬದುಕು ಅಷ್ಟೆ.

# ಊರಿನವರಿಗೆಲ್ಲ ಒಂದು ನ್ಯಾಯ, ಇವರಿಗೆ ಒಂದು ನ್ಯಾಯ!

ಊರಿಗೆಲ್ಲ ನ್ಯಾಯ ಹೇಳುವ ಇವರು ಈಗ ತಮ್ಮದೆ ಸಹೋದ್ಯೋಗಿಗಳು ಮಾಡಿರುವ ಅಪರಾಧಗಳಿಗೆ ಬಾಯಮುಚ್ಚಿಕೂತುಕೊಂಡಿದ್ದಾರೆ. ಈಗಾಗಲೇ ಪಬ್ಲಿಕ್ ಟಿವಿ ಬೆಂಗಳೂರು ನಗರ ಮುಖ್ಯಸ್ಥನೊಬ್ಬ ವೈದ್ಯರನ್ನು ಬ್ಲಾಕ್ ಮೇಲ್ ಮಾಡಲು ಹೋಗಿ ಜೈಲು ಕಂಬಿ ಎಣಿಸಿ ಬಂದಾಯ್ತು , ಮತ್ತೇ ಆತ ಅದೇ ಹೆಸರು ಹೇಳಿಕೊಂಡು ಮತ್ತೊಬ್ಬರನ್ನು ಬ್ಲಾಕ್‌ಮೇಲ್ ಮಾಡಲು ಹೋಗಿ ಸಿಕ್ಕಿಹಾಕಿಕೊಂಡಿದ್ದ.

ಇನ್ನೂ ಜಿಲ್ಲೆಗಳಲ್ಲಿ ಪಬ್ಲಿಕ್ ಟಿವಿ ವರದಿಗಾರರ ಕಾಟವೂ ಜಾಸ್ತಿಯಾಗಿದೆಯಂತೆ ಹಲವಾರು ಮಂದಿ ಈ ಕುರಿತು ದೂರುಗಳ ಕೇಳಿ ಬರುತ್ತಿವೆ ಹಾಗಂತ ಪಬ್ಲಿಕ್ ಟಿವಿ ವರದಿಗಾರರು ಮಾತ್ರವಲ್ಲ ಇತರೆ ಚಾನೆಲ್‌ಗಳ ವರದಿಗಾರರ ಕಾಟವೂ ಮಿತಿ ಮೀರಿದೆ ಎನ್ನುವ ಮಾತುಗಳು ಜಿಲ್ಲೆಗಳಲ್ಲಿ ಕೇಳಿ ಬರುತ್ತಿವೆ. ಇಂತ ಹೊತ್ತಿನಲ್ಲೆ ಗದಗಿನ ಬೆಟಗೇರಿ ಪೊಲೀಸ್ ಠಾಣೆಯ ಪೇದೆಯೊಬ್ಬನನ್ನು ಪಬ್ಲಿಕ್ ಟಿವಿ ವರದಿಗಾರ ಸೇರಿದಂತೆ ಕೆಲ ಪತ್ರಕರ್ತರು ಜೀವವನ್ನೇ ಬಲಿತಗೆದುಕೊಂಡಿದ್ದಾರೆ. ಆದರೆ ಅವರೆಲ್ಲರೂ ಬಂಧವಾಗದೆ ಸೇಫ್ ಆಗಿದ್ದಾರೆ ಎಂದರೆ ಅವರ ಹಿಂದೆ ಬಲವಾದ ಕೈಗಳೆ ಇರಬೇಕು ಎನ್ನುವುದು. ಇರಲಿ ದಿನವೂ ಒಂಬತ್ತುಗಂಟೆಗೆ ಸಿಕ್ಕಾಪಟ್ಟೆ ರಾಜಕಾರಣಿಗಳನ್ನು ಇತರೆ ವ್ಯಕ್ತಿಗಳ ವಿರುದ್ಧ ಬೈದಾಡುವ ನಾವೇ ನ್ಯಾಯವಂತರೂ ನಾವೆಲ್ಲ




ಹಿಟ್ & ರನ್

ಹರಿಶ್ಚದ್ರನ ತುಂಡು ಎನ್ನುವ ರೀತಿಯಲ್ಲಿ ಬೊಬ್ಬೆ ಹಾಕುವ ಎಲ್ಲರ ಅಣ್ಣ ಯಾಕೆ ಬಾಯಿಮುಚ್ಚಿಕೂತುಕೊಂಡಿದ್ದಾರೆ ಗೊತ್ತಿಲ್ಲ. ಈ ಪೇದೆಯ ಸುದ್ದಿಯನ್ನು ಯಾಕೆ ರೋಚಕವಾಗಿ ಪ್ರಸಾರ ಮಾಡಲಿಲ್ಲ ನಮ್ಮ ವರದಿಗಾರನ ಕಿರುಕುಳದಿಂದಲೇ ಆತ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಯಾಕೆ ಸುದ್ದಿ ಹೋಗಲಿಲ್ಲ ? ಇಂತ ಪ್ರಶ್ನೆಗಳಿಗೆ ಉತ್ತರ ನೀಡಬೇಕು. ಇನ್ನೂ ಕೆಲವರು ತಮ್ಮ ಚಾನೆಲ್‌ನಲ್ಲಿ ಅದೇನೋ ಬೆದರು ಬಂದಂತೆ ಬಡೆದುಕೊಳ್ಳುವ ಹಲ್ಲು ಬಿಟ್ಟುಕೊಂಡು ಪ್ರಶ್ನೆಗಳ ಮೇಲೆ ಪ್ರಶ್ನೆ ಕೇಳುವ ನಾವೇ ಶುದ್ಧವಂತರು ಎಂದು ಹೇಳಿಕೊಳ್ಳುವ ಆ ಆಂಕರ್ ಯಾಕೆ ಇಂತ ಸುದ್ದಿಗಳಿಗೆ ಮಾನ್ಯತೆ ಕೊಡಲಿಲ್ಲ ? ಊರಿಗೆ ಒಂದು ನ್ಯಾಯ ತಮಗೆ ಒಂದು ನ್ಯಾಯನಾ? ಆ ಸುದ್ದಿಯನ್ನು ರೋಚಕವಾಗಿ ಬಿಂಬಿಸಿ ಯಾಕೆ ಹೀಗಾಯಿತು ಅನ್ಯಾಯವಾಗಿ ಒಂದು ಜೀವ ಬಲಿಯಾಗಿದೆ ಆ ಜೀವಕ್ಕೆ ನ್ಯಾಯಕೊಡಿಸುವ ಒಂದಿಷ್ಟು ಮಾನವೀಯತೆ ಈ ಚಾನೆಲ್ ಮುಖ್ಯಸ್ಥರಿಗೆ ಇಲ್ಲವೇ? ಒಬ್ಬ ರಾಜಕಾರಣಿ ಮಗನೋ ಅಥವ ಚಿತ್ರರಂಗದವರೋ ಆದರೆ ಅ ಸುದ್ದಿಗಳನ್ನು ರೋಚಕವಾಗಿ ಬಿಂಬಿಸಿ ಯಾಕೆ ಆರೋಪಿಗಳನ್ನು ಬಂಧಿಸಲ್ಲ ಎಂದು ಪ್ರಶ್ನಿಸುವವರು ಯಾಕೆ ಈ ಪೊಲೀಸ್ ಪೇದೆ ಆತ್ಮಹತ್ಯೆಗೆ ಕಾರಣರಾದವನರನ್ನು ಬಂಧಿಸಿಲ್ಲ ಎನ್ನುವ ಪ್ರಶ್ನೆ ಬರಲಿಲ್ಲ.ಹಲ್ಲು ಗಿಂಜಿಕೊಂಡು ಕೂತುಕೊಳ್ಳುವ ಆಂಕರ್ ಒಬ್ಬ ಇಂತ ಅಪರಾಧ ಎಸಗಿದವರ ವಿರುದ್ಧ ಅಷ್ಟು ಹಲ್ಲುಗಳು ಕಾಣುವಂತೆ ಅರಚಿ ಅರಚಿ ನ್ಯಾಯ ಕೇಳುವ ವ್ಯಕ್ತಿ ಯಾಕೆ ಈ ಪೇದೆಗೆ ನ್ಯಾಯ ಕೊಡಿಸಲಿಲ್ಲ ,ಎಲ್ಲರೂ ಕೇವಲ ಪರದೆಯ ಮೇಲೆ ಅಷ್ಟೆ ವೀಕ್ಷಕರಿಗೆ ನಾವು ಹೀಗೆ ನ್ಯಾಯವಂತರು ನಾವು ಸತ್ಯ ಹರಿಶ್ಚಂದ್ರ ತುಂಡಿನ ವಂಶದವರು ಎಂದು ಪೋಜು ಕೊಡುವವರ ಚಾನೆಲ್‌ನಲ್ಲೇ ಇಂತವರು ತುಂಬಿ ತುಳುಕುತ್ತಿದ್ದಾರೆ. ಒಂದು ಎರಡಲ್ಲ ಹಲವಾರು ವರದಿಗಾರರು ಇವರ ಚಾನೆಲ್‌ನಲ್ಲಿ ಇರುವವರ ವಿರುದ್ಧವೇ ವಿವಿದ ಜಿಲ್ಲೆಗಳಲ್ಲಿ ಆರೋಪಗಳು ಕೇಳಿ ಬಂದಿವೆ ಬೆಂಗಳೂರಿನಲ್ಲಿ ಇರುವ ಹಲವಾರು ಮಂದಿ ಏನೇನು ಮಾಡುತ್ತಿದ್ದಾರೆ ಎನ್ನುವುದು ರಾಜಕಾರಣಿಗಳಿಗೂ ಗೊತ್ತಿದೆ ಆದರೆ ಆ ಒಂಬತ್ತು ಗಂಟೆಯ ಬೊಬ್ಬೊಹಾಕುವ ವ್ಯಕ್ತಿಗೆ ಎದುರಿ ಸುಮ್ಮನಿದ್ದಾರೆ. ಏನೇ ಆಗಲಿ ಮೊದಲು ನಿಮ್ಮ ಚಾನೆಲ್‌ನಲ್ಲಿ ಸ್ವಚ್ಚವಾಗಿಡಿ ಅಷ್ಟೆ..!

# ಪದಚ್ಯುತಿಯ ಹೊಸ್ತಿಲಲ್ಲಿ ಪಾಕ್ ಪ್ರಧಾನಿ ಇಮ್ರಾನ್ ಖಾನ್

ದೆಹಲಿ ದೃಷ್ಟಿ

ಡಿ.ಉಮಾಪತಿ
ಹಿರಿಯ ಪತ್ರಕರ್ತರು



ಧಾರ್ಮಿಕ ಕಟ್ಟರ್ ವಾದಿಗಳ ಜಿಹಾದಿ ಸಂಘಟನೆಗಳು ಮತ್ತು ಸರ್ವಶಕ್ತ ಪಾಕಿಸ್ತಾನಿ ಸೇನೆ ಹಾಗೂ ಅಮೆರಿಕೆಯ ಪರೋಕ್ಷ ನಿಯಂತ್ರಣಕ್ಕೆ ತುತ್ತಾಗಿರುವ ಪಾಕಿಸ್ತಾನದಲ್ಲಿ 'ಜನರು ಆರಿಸಿದ' ಸರ್ಕಾರಗಳು ನಿಜವಾಗಿಯೂ ಅಸಹಾಯಕ ಎಂಬ ಮಾತು ಮತ್ತೊಮ್ಮೆ ರುಜುವಾತಾಗಿದೆ.

ಜಗದ್ವಿಖ್ಯಾತ ಕ್ರಿಕೆಟ್ ಆಟಗಾರನಾಗಿ ನಿವೃತ್ತರಾದ ನಂತರ ರಾಜಕಾರಣಕ್ಕೆ ಕಾಲಿಟ್ಟು ನಾಲ್ಕು ವರ್ಷಗಳ ಹಿಂದೆ ಪಾಕಿಸ್ತಾನದ ಪ್ರಧಾನಿ ಗದ್ದುಗೆ ಏರಿದ್ದರು ಇಮ್ರಾನ್ ಖಾನ್. ತೀವ್ರ ಆರ್ಥಿಕ ಸಂಕಟಕ್ಕೆ ಸಿಕ್ಕಿ ತೊಳಲಾಡಿರುವ ಪಾಕಿಸ್ತಾನ ಆಂತರಿಕ ಕ್ಷೋಭೆಗಳಲ್ಲಿ ಮುಳುಗಿದೆ. ಪ್ರತಿಪಕ್ಷಗಳು ಇಮ್ರಾನ್ ಸರ್ಕಾರದ ವಿರುದ್ಧ ತೋಳೇರಿಸಿ ನಿಂತಿವೆ. ಯುಕ್ರೇನ್ ಸಮರಕ್ಕೆ ಅಮೆರಿಕೆ ಮತ್ತು ಐರೋಪ್ಯ ಕೂಟವನ್ನು ದೂಷಿಸಿ ದಾಳಿ ನಡೆಸಿರುವ ಖಾನ್ ನಡೆ ಅಮೆರಿಕೆ ಮತ್ತು ಪಾಕ್ ಸೇನೆಯನ್ನು ಸಿಟ್ಟಿಗೆಬ್ಬಿಸಿದೆ.



ಕೈಗೊಂಬೆ ಪ್ರಧಾನಿಗಳನ್ನು ಕುರ್ಚಿ ಮೇಲೆ ಕೂರಿಸಿ ತನ್ನ ಇಚ್ಛೆಗೆ ಅನುಗುಣವಾಗಿ ಕುಣಿಸುವ ಪಾಕಿಸ್ತಾನಿ ಸೇನೆಗೆ ಇದೀಗ ಇಮ್ರಾನ್ ಖಾನ್ ಬೇಕಿಲ್ಲ.

ನವಾಜ್ ಷರೀಫ್ ಅವರ ಪಾಕಿಸ್ತಾನ ಮುಸ್ಲಿಮ್ ಲೀಗ್ (ಎನ್), ಆಸೀಫ್ ಅಲಿ ಝರ್ದಾರಿ ಅವರ ಪಾಕಿಸ್ತಾನ್ ಪೀಪಲ್ಸ್ ಪಾರ್ಟಿ ಹಾಗೂ ಮೌಲಾನಾ ಫಜ್ಲುರ್ ರೆಹಮಾನ್ ಅವರ ಜಮಾತ್ ಉಲೇಮಾ ಇಸ್ಲಾಮ್ (ಎಫ್) ಸೇರಿದಂತೆ ಪ್ರತಿಪಕ್ಷಗಳ ಒಕ್ಕೂಟವು ಪ್ರಧಾನಿ ಇಮ್ರಾನ್ ಖಾನ್ ವಿರುದ್ಧ ಅವಿಶ್ವಾಸ ನಿರ್ಣಯವನ್ನು ಸಲ್ಲಿಸಿದೆ. ಇಮ್ರಾನ್ ಅವರ ಸಮ್ಮಿಶ್ರ ಸರ್ಕಾರವನ್ನು ಬೆಂಬಲಿಸಿದ್ದ ಪಕ್ಷಗಳೂ ಹಿಂದೆ ಸರಿದಿವೆ. ತಮ್ಮದೇ ಪಕ್ಷ ಪಾಕಿಸ್ತಾನ್ ತೆ?ಹ್ರೀಕ್ ಇನ್ಸಾಫ್ ಪಕ್ಷದ ಅನೇಕ ಸಂಸದರು ಕೂಡ ಇಮ್ರಾನ್ ವಿರುದ್ಧ ತಿರುಗಿ ಬಿದ್ದಿದ್ದಾರೆ.

ಇದೇ 28ರಂದು ಅವರು ನ್ಯಾಷನಲ್ ಅಸೆಂಬ್ಲಿಯಲ್ಲಿ (ಲೋಕಸಭೆ) ಅವಿಶ್ವಾಸ ನಿರ್ಣಯ ಎದುರಿಸಲಿದ್ದಾರೆ. ಬಹುಮತ ರುಜುವಾತು ಮಾಡಲು 12ರಿಂದ 24 ಮಂದಿ ಸದಸ್ಯರ ಕೊರತೆಯನ್ನು ಇಮ್ರಾನ್ ಪಕ್ಷ ಎದುರಿಸಿದೆ. ಅವಿಶ್ವಾಸ ನಿರ್ಣಯವನ್ನು ಚರ್ಚೆಗೆ ತೆಗೆದುಕೊಳ್ಳುವ ಹಿಂದಿನ ದಿನ ನ್ಯಾಷನಲ್ ಅಸೆಂಬ್ಲಿಯ ಹೊರಗೆ ಆಡಳಿತ ಪಕ್ಷ ಮತ್ತು ಪ್ರತಿಪಕ್ಷಗಳು ಬಲಾಬಲ ಪ್ರದರ್ಶನಕ್ಕೆ ತೋಳೇರಿಸಿವೆ. ಭಾರೀ ಹಿಂಸಾಚಾರ ಮತ್ತು ರಕ್ತಪಾತದ ಶಂಕೆಯಿದೆ.

ತಮ್ಮ ಸರ್ಕಾರ ಮತ್ತು ಪಾಕಿಸ್ತಾನಿ ಸೇನೆಯ ನಡುವೆ ಒಮ್ಮತವಿರುವ ಕಾರಣ ತಮ್ಮ ಸರ್ಕಾರ ಸುಸ್ಥಿರವಾಗಿದ್ದು ಅಭಿವೃದ್ಧಿಯ ಮೇಲೆ ಹೆಚ್ಚಿನ ಗಮನ ಹರಿಸುತ್ತಿದೆ ಎಂಬ ಮಾತನ್ನು ಇಮ್ರಾನ್ ಖಾನ್ ಮೊದಲ ಒಂದೆರಡು ವರ್ಷ ಆಡಿದ್ದುಂಟು. ಖಾನ್ ಅವರ ಚುನಾವಣೆಗೆ ಸೇನೆ ಮತ್ತು ಐ.ಎಸ್.ಐ. ಬಹುವಾಗಿ ಶ್ರಮಿಸಿದ್ದುಂಟು. ಆಸೀಫ್ ಝರ್ದಾರಿ ಮತ್ತು ನವಾಜ್ ಷರೀಫ್ ಪಕ್ಷಗಳ ಗೆಲ್ಲುವ ಅಭ್ಯರ್ಥಿಗಳನೇಕರನ್ನು ಇಮ್ರಾನ್ ಪಕ್ಷಕ್ಕೆ ಸೆಳೆದದ್ದುಂಟು.

ಪಾಕಿಸ್ತಾನದ ನ್ಯಾಷನಲ್ ಅಸೆಂಬ್ಲಿಯ ಒಟ್ಟು 342 ಸೀಟುಗಳ ಪೈಕಿ ಇಮ್ರಾನ್ ಅವರ ಪಾಕಿಸ್ತಾನ್ ತೆಹ್ರೀಕ್ ಇನ್ಸಾಫ್ ಪಕ್ಷ ಗೆದ್ದದ್ದು 155 ಸೀಟುಗಳು. ಮಿತ್ರಪಕ್ಷಗಳ ಬೆಂಬಲದಿಂದ ಸರಳ ಬಹುಮತವನ್ನೂ (176) ಒಟ್ಟುಗೂಡಿಸಿಕೊಂಡಿತ್ತು. ಈ ಕಸರತ್ತಿನ ಹಿಂದೆ ಸೇನೆಯ ಬೆಂಬಲವಿತ್ತು. ಮಿಲಿಟರಿಯ ಹಿಡಿತದಿಂದ ಬಿಡಿಸಿಕೊಳ್ಳಬೇಕೆಂಬ ತಹತಹ ಇಮ್ರಾನ್ ಪಕ್ಷಕ್ಕೆ ಇರಲೇ ಇಲ್ಲ. ಆಡಳಿತ ಮತ್ತು ವಿದೇಶಾಂಗ ನೀತಿಯಲ್ಲಿ ಮಿಲಿಟರಿ ವಹಿಸಿದ್ದ ಸಕ್ರಿಯ ಪಾತ್ರ ಕುರಿತು ಪ್ರಧಾನಿಗೆ ಯಾವ ಕಿರಿಕಿರಿಯೂ ಇರಲಿಲ್ಲ.



ಇಮ್ರಾನ್ ಸರ್ಕಾರ ಎರಡೇ ವರ್ಷಗಳಲ್ಲಿ ಭ್ರಮನಿರಸನ ಮೂಡಿಸಿತು. ಸಾಲದ ಸುಳಿಗೆ ಸಿಕ್ಕಿರುವ ಪಾಕಿಸ್ತಾನ ಆಹಾರ ಮತ್ತು ಊರ್ಜೆಯ ಬಿಕ್ಕಟ್ಟು ಎದುರಿಸಿದೆ. ಪಾಕ್ ಸೇನೆಯ ಮುಂಚೂಣಿ ಅಧಿಕಾರಿಗಳ ವರ್ಗಾವಣೆಯಲ್ಲಿ ಮೂಗು ತೂರಿಸಿದ ಇಮ್ರಾನ್ ಸರ್ಕಾರವನ್ನು ಬೆಂಬಲಿಸುವ ಕುರಿತು ಸೇನೆಯಲ್ಲೇ ಭಿನ್ನಮತ ಮೂಡಿತು. ಇಮ್ರಾನ್ ಸರ್ಕಾರವನ್ನು ಹಣಿಯಲು ಇದೇ ಸರಿಯಾದ ಅವಕಾಶವೆಂದು ಪ್ರತಿಪಕ್ಷಗಳು ಒಟ್ಟಿಗೆ ಬಂದಿವೆ.

''ಹಮ್ ದೇಖೇಂಗೇ'' ಎಂಬುದು ಪಾಕಿಸ್ತಾನದ ಪ್ರಗತಿಪರ ಕವಿ ಫೈಜ್ ಅಹ್ಮದ್ ಫೈಜ್ ಅವರ ಕ್ರಾಂತಿಕಾರಕ ಕವಿತೆಯೊಂದರ ತಲೆಬರೆಹ. 80ರ ದಶಕದಲ್ಲಿ ಅಂದಿನ ಮಿಲಿಟರಿ ಸರ್ವಾಧಿಕಾರಿ ಜನರಲ್ ಝಿಯಾವುಲ್ ಹಖ್ ಆಡಳಿತದ ವಿರುದ್ಧ ಪ್ರತಿಭಟನೆಯ ಗೀತೆಯಾಗಿ ಪಾಕಿಸ್ತಾನದಲ್ಲಿ ಮಾರ್ದನಿಸಿತ್ತು. ''..ರಾಜ್ಯಗಳಳಿಯಲಿ, ರಾಜ್ಯಗಳುಳಿಯಲಿ, ಹಾರಲಿ ಗದ್ದುಗೆ ಮುಕುಟಗಳು....'' ಎಂಬ ನಮ್ಮ ಕ್ರಾಂತಿಕಾರಿ ಕವಿ ಕುವೆಂಪು ಅವರ ''ನೇಗಿಲಯೋಗಿ'' ಕವಿತೆಯ ಸಾಲನ್ನೇ ಹೋಲುವ ಪದಗಳು ಫೈಜ್ ಅವರ ಈ ಕವಿತೆಯಲ್ಲೂ ಇವೆ. ''ಸಬ್ ತಾಜ್ ಉಛಾಲೇ ಜಾಯೇಂಗೇ...ಸಬ್ ತಖ್ತ್ ಗಿರಾಯೇ ಜಾಯೇಂಗೇ'' (ತೂರಾಡಲಾದೀತು ಮುಕುಟಗಳನು ಗಾಳಿಗೆಸೆದು, ಕೆಡವಲಾದೀತು ಸಿಂಹಾಸನಗಳನ್ನು ಕುಟ್ಟಿ ನೆಲಕ್ಕೆ..).


ಪಾಕಿಸ್ತಾನದಲ್ಲಿ ಯಾರ ಗದ್ದುಗೆ ಮುಕುಟಗಳು ಹಾರಿದರೇನಂತೆ. ಅಲ್ಲಿನ ಸರ್ವಶಕ್ತ ಸೇನೆಯ ಗದ್ದುಗೆ ಮುಕುಟಗಳು ಸದಾ ಕಾಯಂ.

ಕಳೆದ ಎಪ್ಪತ್ತು ವರ್ಷಗಳಲ್ಲಿ ಹೆಚ್ಚೂ ಕಡಿಮೆ ಅರ್ಧದಷ್ಟು ಕಾಲ ಪಾಕಿಸ್ತಾನವನ್ನು ಸೇನೆಯೇ ಆಳಿದೆ. ಜನರೇ ಆಯ್ಕೆ ಮಾಡಿದ ಸರ್ಕಾರದಿಂದ ಜನರಿಂದ ಆಯ್ಕೆಯಾದ ಮತ್ತೊಂದು ಸರ್ಕಾರಕ್ಕೆ ಅಧಿಕಾರದ ಶಾಂತಿಯುತ ಹಸ್ತಾಂತರ ನಡೆದಿರುವುದು ಎರಡೇ ಬಾರಿ. ಚುನಾವಣೆಯ ಮೂಲಕ ಆರಿಸಿ ಬಂದ ಹಲವು ಸರ್ಕಾರಗಳನ್ನು ಕೆಡವಿ ಅಧಿಕಾರ ಕಬಳಿಸಿದೆ ಪಾಕ್ ಸೇನೆ.




ನೆರೆ ಹೊರೆಯನ್ನು ಆಯ್ದುಕೊಳ್ಳುವುದು ಅಸಾಧ್ಯ ಎಂಬ ಮಾತೊಂದಿದೆ. ಹಿಂಸೆ, ರಕ್ತಪಾತ, ಭಯೋತ್ಪಾದನೆಗಳಲ್ಲೇ ಬದುಕಿರುವ ನಮ್ಮ ನೆರೆಯ ದೇಶ ಪಾಕಿಸ್ತಾನ ಸುಖ ಸಮ?ದ್ಧಿ ಶಾಂತಿಯಿಂದ ಬದುಕಿದಷ್ಟೂ ಭಾರತಕ್ಕೆ ನೆಮ್ಮದಿ. ಇಲ್ಲವಾದರೆ ಅಲ್ಲಿನ ಉತ್ಪಾತಗಳು ಇಲ್ಲಿ ಕಂಪನ ಹುಟ್ಟಿಸುವುದನ್ನು ಕಾಣುತ್ತಲೇ ಬಂದಿದ್ದೇವೆ. ಅಲ್ಲಾಹು, ಆಮಿ9 ಹಾಗೂ ಅಮೆರಿಕಾ ಆಳಿಕೊಂಡು ಬಂದಿರುವ ಪಾಕಿಸ್ತಾನ ನಿರಂತರ ರಾಜಕೀಯ ಅಸ್ಥಿರತೆಗೆ ಸದಾ ಜೋಲಿ ಹೊಡೆದ ದೇಶ. ಕಳೆದ ಆರೂವರೆ ದಶಕಗಳ ತನ್ನ ಇತಿಹಾಸದಲ್ಲಿ ಈ ದೇಶದ ಜನತಂತ್ರ ಎಂಬ ಸಸಿ ಗಿಡವಾಗಿ ಮರವಾಗಿ ಹೂವು ಕಾಯಿ ಕಟ್ಟಿ ಹಣ್ಣು ಮಾಗಲೇ ಇಲ್ಲ.

ಪಾಕಿಸ್ತಾನ ಹುಟ್ಟಿದ ಒಂದೇ ವರ್ಷದಲ್ಲಿ ಆ ದೇಶದ ಜನಕನೆಂದೇ ಹೆಸರಾದ ಮೊಹಮ್ಮದಾಲಿ ಜಿನ್ನಾ ನಿಧನರಾಗುತ್ತಾರೆ. ಮೊದಲ ಒಂಬತ್ತು ವರ್ಷಗಳ ಕಾಲ ಪಾಕಿಸ್ತಾನಕ್ಕೆ ಸಂವಿಧಾನವೇ ಇರಲಿಲ್ಲ. ಜಿನ್ನಾ ನಿಧನ ಅಧಿಕಾರ ಹಿಡಿಯುವ ಹಣಾಹಣಿಗೆ ದಾರಿ ಮಾಡುತ್ತದೆ. 1958ರ ಹೊತ್ತಿಗೆ ಮೊದಲ ಕ್ಷಿಪ್ರಕ್ರಾಂತಿ ನಡೆದು 1971ರ ತನಕ ಸೇನೆ ಅಧಿಕಾರ ಹಿಡಿಯುತ್ತದೆ. ತನ್ನ ಪಟ್ಟಭದ್ರ ಹಿತಾಸಕ್ತಿಗೆ ಅಡಚಣೆಗಳು ಒದಗಿದಾಗಲೆಲ್ಲ ಮಿಲಿಟರಿ ಜನರಿಂದ ಆಯ್ಕೆಯಾದ ಸರ್ಕಾರಗಳಲ್ಲಿ ಹಸ್ತಕ್ಷೇಪ ನಡೆಸುತ್ತ ಬಂದಿದೆ. 1977ರಿಂದ 88 ಮತ್ತು 1999ರಿಂದ 2008ರ ತನಕ ಸೇನೆಯದೇ ನೇರ ಆಡಳಿತ. ಜನತಾಂತ್ರಿಕ ಆಡಳಿತವನ್ನು ಗಟ್ಟಿಗೊಳಿಸುತ್ತ ಬಂದಿದ್ದ ನವಾಜ್ ಷರೀಫ್ ಮಾಜಿ ಸೇನಾ ಮುಖ್ಯಸ್ಥ ಪರ್ವೇಜ್ ಮುಷರ್ರಫ್ ವಿರುದ್ಧ ದೇಶದ್ರೋಹದ ಆರೋಪ ಹೇರಲು ಮುಂದಾಗಿದ್ದರು. ಈ ಕಾರಣಕ್ಕಾಗಿಯೇ ಅವರನ್ನು ''ಪನಾಮಾ ಪೇಪರ್ಸ್ ಆರ್ಥಿಕ ಹಗರಣ''ದ ನೆವದಲ್ಲಿ ಉರುಳಿಸಿ ಸೆರೆಗೆ ತಳ್ಳಲಾಯಿತು. ಶತ್ರುದೇಶ ಭಾರತ ಕುರಿತು ಮೆದು ಧೋರಣೆ ತಳೆದು ಗೆಳೆತನಕ್ಕೆ ಹಾತೊರೆಯುತ್ತಿದ್ದಾರೆ ಎಂದು ಆರೋಪ ಹೊರಿಸಲಾಯಿತು. ಸೇನೆಯನ್ನು ಬೆಂಬಲಿಸುವ ಮತ್ತು ಸೇನೆಯ ಮಾತು ಕೇಳುವ ಜನಪ್ರಿಯ ನಾಯಕ ಇಮ್ರಾನ್ ಅವರನ್ನು ಮುಂದೆ ತರಲಾಯಿತು.



ಪಾಕಿಸ್ತಾನದ ಉದ್ದಗಲದ 'ನೆಚ್ಚಿನ ಪ್ರಧಾನಿ ಅಭ್ಯರ್ಥಿ'ಯಾಗಿ ಇಮ್ರಾನ್ 2018ರ ಚುನಾವಣೆಗಳಲ್ಲಿ ಹೊರಹೊಮ್ಮಿದ್ದರು. ಈ ಹಿಂದೆ 70ರ ದಶಕಗಳಲ್ಲಿ ಇಂತಹ ಬೆಂಬಲ ದೊರೆತದ್ದು ಝುಲ್ಫಿಕರ್ ಅಲಿ ಭುಟ್ಟೋ ಅವರಿಗೆ. ಪಾಕಿಸ್ತಾನದ ರಾಷ್ಟ್ರೀಯ ಶಾಸನಸಭೆ ಚುನಾವಣೆಗಳಲ್ಲಿ ಯಾರು ಗೆಲ್ಲಬೇಕು ಎಂಬುದು ಮತದಾನಕ್ಕೆ ಮೊದಲೇ ನಿರ್ಧಾರ ಆಗಿರುತ್ತದೆ. ಈ ನಿರ್ಧಾರವನ್ನು ಆಧರಿಸಿ ಫಲಿತಾಂಶಗಳು ಹೊರಬೀಳುತ್ತವೆ ಎಂಬುದು ಜನಜನಿತ ಭಾವನೆ. ಪಾಕಿಸ್ತಾನದ ಸೇನೆಯ ಆಶೀರ್ವಾದ ಇದ್ದವರೇ ಗೆಲ್ಲುತ್ತಾರೆ ಎಂಬುದೂ ನಿಶ್ಚಿತ. ಆದರೆ ಇಮ್ರಾನ್ ಗೆಲುವಿನ ಹಿಂದಿನ ಶಕ್ತಿ ಕೇವಲ ಪಾಕ್ ಸೇನೆ ಅಲ್ಲ, ವೈಯಕ್ತಿಕ ವರ್ಚಸ್ಸೂ ಕೆಲಸ ಮಾಡಿತ್ತು. ನವಾಜ್ ಷರೀಫ್ ಅವರ ಪಾಕಿಸ್ತಾನ್ ಮುಸ್ಲಿಂ ಲೀಗ್ ಪಕ್ಷಕ್ಕೆ ಸೇರಿದ ಗೆದ್ದೇ ಗೆಲ್ಲುವ 61 ಮಂದಿ ಅಭ್ಯರ್ಥಿಗಳು ಇಮ್ರಾನ್ ಪಕ್ಷ ಸೇರಿದ್ದೂ, ಮಾಜಿ ಕ್ರಿಕೆಟಿಗನ ಯಶಸ್ಸಿಗೆ ದಾರಿ ಮಾಡಿತ್ತು. ಅದೇ ಹಳೆಯ ಪಕ್ಷಗಳನ್ನು ನೋಡಿ ಬೇಸತ್ತಿರುವ ಜನರಿಗೆ ಬದಲಾವಣೆ ಬೇಕಿತ್ತು. ಸೇನಾ ಜನರಲ್ ಗಳು ಮನಸ್ಸು ಮಾಡದಿದ್ದರೆ ಇಮ್ರಾನ್ ಪ್ರಧಾನಿ ಹುದ್ದೆಯ ಸನಿಹ ಸಾರುವುದು ಕೂಡ ಶಕ್ಯವಿರಲಿಲ್ಲ. ಹೀಗಾಗಿ ಸೇನೆಯ ಇಷಾರೆಯನ್ನು ಮೀರಿ ಇಮ್ರಾನ್ ಮುಂದಿನ ಹೆಜ್ಜೆ ಇಡುವುದು ಅಸಾಧ್ಯವಿತ್ತು. ಭಾರತದೊಂದಿಗೆ ಗೆಳೆತನ– ಹಗೆತನ ಮತ್ತು ಕಾಶ್ಮೀರ ಕುರಿತ ನೀತಿ ನಿರ್ಧಾರಗಳು ಅವರ ಕೈಯಲ್ಲಿ ಇರುವುದಿಲ್ಲ. ಪಾಕ್ ಪ್ರಧಾನಿಗಳು ಏನನ್ನಾದರೂ ಹೇಳಲಿ, ನಡೆಯುವುದು ತನ್ನ ಮಾತೇ ಎಂಬ ಸಂದೇಶವನ್ನು ಅಲ್ಲಿನ ಮಿಲಿಟರಿ ಮುಖ್ಯಸ್ಥರು ತಾವು ಸಾಕಿಕೊಂಡಿರುವ ಜಿಹಾದಿಗಳು ಇಲ್ಲವೇ ಸೇನೆಯ ಬಂದೂಕಿನ ನಳಿಕೆಯ ಮೂಲಕ ಭಾರತಕ್ಕೆ ಸಾರಿ ಹೇಳಿದ್ದಾರೆ. ವಾಜಪೇಯಿ ಪ್ರಧಾನಿಯಾಗಿದ್ದಾಗ ಹಠಾತ್ತನೆ ಬಡಿದೆಬ್ಬಿಸಿದ ಕಾರ್ಗಿಲ್ ಯುದ್ಧ ಮತ್ತು ಸಂಸದ್ ಭವನದ ಮೇಲೆ ನಡೆದ ದಾಳಿ ಹಾಗೂ ಯುಪಿಎ ಅವಧಿಯಲ್ಲಿ ಮುಂಬಯಿ ಮೇಲೆ ಜಿಹಾದಿ ಭಯೋತ್ಪಾದಕರ ಲಗ್ಗೆಯ ಪ್ರಕರಣಗಳು ಈ ಮಾತಿಗೆ ಉದಾಹರಣೆಗಳು. ಈ ಎಲ್ಲ ಪ್ರಕರಣಗಳ ಸೂತ್ರಧಾರ ಪಾಕಿಸ್ತಾನದ ಸೇನೆಯೇ ವಿನಾ ಅಲ್ಲಿನ ಚುನಾಯಿತ ಸರ್ಕಾರಗಳು ಅಲ್ಲ. ಚುನಾಯಿತ ಸರ್ಕಾರಗಳಿಗೆ ಈ ದಾಳಿಗಳ ಪೂರ್ವ ಮಾಹಿತಿ ಕೂಡ ಇರಲಿಲ್ಲ.

ಭಾರತಕ್ಕೆ ಸಂಬಂಧಿಸಿದಂತೆ ಪಾಕಿಸ್ತಾನದ ವಿದೇಶಾಂಗ ವ್ಯವಹಾರ ನೀತಿ ನಿರ್ಧಾರಗಳು ಕಳೆದ ಏಳು ದಶಕಗಳ ಅವಧಿಯಲ್ಲಿ ಅಲ್ಲಿನ ಸೇನೆಯ ಬಿಗಿಮುಷ್ಟಿಯಲ್ಲೇ ಉಳಿದಿವೆ. ಈ ಸ್ಥಿತಿಯಲ್ಲಿ ಯಾವುದೇ ದೊಡ್ಡ ಬದಲಾವಣೆ ಅಸಾಧ್ಯ.

ಪಕ್ಷಾಂತರ ಮಾಡುವ ಸಂಸದರನ್ನು ಅನರ್ಹಗೊಳಿಸುವ ಅವಕಾಶವಿರುವ ಪಾಕಿಸ್ತಾನೀ ಸಂವಿಧಾನದ 63–ಎ ಅನುಚ್ಛೇದವನ್ನು ವ್ಯಾಖ್ಯಾನಿಸುವಂತೆ ಸರ್ಕಾರ ಪಾಕಿಸ್ತಾನಿ ಸುಪ್ರೀಮ್ ಕೋರ್ಟಿಗೆ ಮನವಿ ಮಾಡಿದೆ. ನ್ಯಾಯಮೂರ್ತಿಗಳ ಪಂಚ ಸದಸ್ಯರ ಪೀಠವೊಂದು ಈ ಅಹವಾಲಿನ ವಿಚಾರಣೆಯನ್ನು ಮಾರ್ಚ್ 24ರಂದು ಮುಂದುವರೆಸಲಿದೆ.

ಸುಪ್ರೀಮ್ ಕೋರ್ಟ್ ತಮ್ಮ ನೆರವಿಗೆ ಬರುವುದೆಂಬ ನಿರೀಕ್ಷೆಯನ್ನು ಇಮ್ರಾನ್ ಇಟ್ಟುಕೊಂಡಿದ್ದಾರೆ. ಆದರೆ ಸದನದಲ್ಲಿ ಬಲಾಬಲ ಪರೀಕ್ಷೆಗೆ ಮುನ್ನವೇ ಕೋರ್ಟ್ ತೀರ್ಪು ಹೊರಬರುವ ಸಾಧ್ಯತೆ ವಿರಳ.

**ಸ್ವಾತಂತ್ರ್ಯ ಬಂದ ಬಳಿಕ ಸತತ ಐವತ್ತು ವರ್ಷ ಕೇಂದ್ರ ಮತ್ತು ರಾಜ್ಯಗಳನ್ನಾಳಿದ ಕಾಂಗ್ರೆಸ್ಸು ಈಗ ಶೋಚನೀಯ ಹಂತಕ್ಕೆ ಬಂದಿದೆ. ಎಐಸಿಸಿ ಹೊಂದಿರುವ ಅಗಾಧ ಸಂಪತ್ತಿನ ಒಡೆತನವನ್ನು ಬಿಟ್ಟುಕೊಡುವುದಕ್ಕೆ ಸೋನಿಯಾ ಅಂಡ್ ಚಿಲ್ಡ್ರನ್ಸ್ ಸಿದ್ಧವಿಲ್ಲ. ಪ್ರಧಾನಿ ಪಟ್ಟವನ್ನಾದರೂ "ತ್ಯಾಗ" ಮಾಡಬಹುದು ಆದರೆ ಎಐಸಿಸಿ ಅಧ್ಯಕ್ಷ ಸ್ಥಾನವನ್ನಲ್ಲ ಎಂದು ಕೂತಿರುವ ಸೋನಿಯಾ, ಧೃತರಾಷ್ಟ್ರ ಪ್ರೇಮದ ಅಮಲಿನಲ್ಲಿ ಕುರುಡಾಗಿದ್ದಾರೆ.**

# ಸೋನಿಯಾಗೆ ಧೃತರಾಷ್ಟ್ರ ಪ್ರೇಮದ ಕುರುಡು



ರಾಜಸೂತ್ರ



ಎಂ.ಕೆ. ಭಾಸ್ಕರ ರಾವ್
ಹಿರಿಯ ಪತ್ರಕರ್ತರು

ದೇಶದಲ್ಲಿ ಪ್ರಜಾಪ್ರಭುತ್ವ ಉಳಿಯಬೇಕು, ಸಂವಿಧಾನದ ಆಶಯದಂತೆ ಎಲ್ಲರನ್ನೂ ಒಳಗೊಂಡ ಭಾರತ ವಿಕಾಸವಾಗಬೇಕು. "ಸರ್ವ ಜನಾಂಗದ ಶಾಂತಿಯ ತೋಟ"ದ ಮಾದರಿಯಲ್ಲಿ ಜನತಂತ್ರ ಗಟ್ಟಿಯಾಗುವುದಕ್ಕೆ ಬಲಿಷ್ಠವಾದ ವಿರೋಧ ಪಕ್ಷ ಅಗತ್ಯ. ಸದ್ಯದ ಈ ಕೊರತೆಯನ್ನು ತುಂಬುವ ಸಾಮರ್ಥ್ಯ ಕಾಂಗ್ರೆಸ್ ಪಕ್ಷಕ್ಕಿದೆ. ಆದರೆ ಅದರ ದುರ್ಬಲ ಅಸಮರ್ಥ ನಾಯಕತ್ವ ಆ ಪಕ್ಷಕ್ಕೆ ಗ್ರಹಣದಂತೆ ಆವರಿಸಿದೆ. ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಹೀಗೆ ಮೂವರೂ ಪಕ್ಷವನ್ನು ಮುನ್ನಡೆಸುವಲ್ಲಿ ವಿಫಲರಾಗಿರುವುದು ಚುನಾವಣೆಯಿಂದ ಚುನಾವಣೆಗೆ ಸಾಬೀತಾಗಿದೆ. ಮೂವರೂ ಪಕ್ಷದ ನಾಯಕತ್ವದಿಂದ ದೂರ ಉಳಿದು ಜನತಂತ್ರದ ರಕ್ಷಣೆಗೆ ಮುಂದಾಗಬೇಕು ಎನ್ನುತ್ತಾರೆ ಪ್ರಸಿದ್ಧ ಇತಿಹಾಸಕಾರ ರಾಮಚಂದ್ರ ಗುಹಾ.


ಕೊಲ್ಕತ್ತಾದಿಂದ ಪ್ರಕಟವಾಗುವ "ಸ್ಟೇಟ್ಸ್‌ಮನ್" ಇಂಗ್ಲಿಷ್ ದೈನಿಕದಲ್ಲಿ ಪ್ರಕಟವಾದ ಅವರ ಲೇಖನ ಪ್ರಸ್ತುತದ ನಾಯಕತ್ವ ಕಾಂಗ್ರೆಸ್ ಪಕ್ಷವನ್ನು ಬೇರು ಸಹಿತ ನಾಶ ಮಾಡುತ್ತಿರುವ ಪರಿಯನ್ನು ವಿಶ್ಲೇಷಿಸುತ್ತದೆ. ಲೇಖನ ಹೊಮ್ಮಿಸುವ ಖಾರ ಸಂಚಲನ ಮೂಡಿಸುತ್ತಿದ್ದಂತೆ ರಾಜಕೀಯ ವಿಶ್ಲೇಷಕ ಕರಣ್ ಥಾಪರ್ ಗುಹಾರನ್ನು "ವೈರ್" ಟಿವಿಗೆ ಸಂದರ್ಶಿಸುತ್ತಾರೆ.




ಗುಹಾ ಬಳಸಿದ ವಾಕ್ಯಗಳ ವಿಚಾರದಲ್ಲಿ ಕೆದಕುವ ಪ್ರಶ್ನೆಗಳನ್ನು ಹಾಕುತ್ತಾರೆ. ತಾವು ಆ ಲೇಖನವನ್ನು ಆಳವಾದ ಯೋಚನೆ ಬಳಿಕ ಬರೆದಿದ್ದು ಪ್ರಕಟವಾದ ಪ್ರತಿ ಶಬ್ದವೂ ತಮ್ಮ ಯೋಚನೆಯ ಫಲಶ್ರುತಿಯೇ ಆಗಿದೆ ಎಂದು ಗುಹಾ ದೃಢೀಕರಿಸುತ್ತಾರೆ.

ಎನ್‌ಡಿಎ/ಬಿಜೆಪಿ 2014ರ ಲೋಕಸಭಾ ಚುನಾವಣೆ ಗೆದ್ದು ನರೇಂದ್ರ ಮೋದಿ ಪಟ್ಟಕ್ಕೆ ಬಂದಾರಭ್ಯದಿಂದ ಆ ಒಕ್ಕೂಟದ ಆಡಳಿತ ವೈಖರಿಯನ್ನು ಸೂಕ್ಷ್ಮ ದರ್ಶಕವಿಟ್ಟು ನೋಡುತ್ತಿರುವ ದೇಶದ ಕೆಲವು ಪ್ರಜ್ಞಾವಂತರಲ್ಲಿ ಗುಹಾ ಒಬ್ಬರು. ಐದು ದಶಕಕ್ಕೂ ಹೆಚ್ಚು ಕಾಲ ಕೇಂದ್ರವನ್ನೂ, ಬಹುತೇಕ ರಾಜ್ಯಗಳನ್ನೂ ಆಳಿದ ಕಾಂಗ್ರೆಸ್ಸು ಜನತಂತ್ರದ ಕಾವಲುಗಾರನಾಗಿ ಹೊಣೆ ನಿರ್ವಹಿಸುವ ಕೆಲಸವನ್ನು ಮರೆತಂತೆ ವರ್ತಿಸುತ್ತಿರುವುದು ಗುಹಾರ ಕೋಪಕ್ಕೆ ಅಸಲಿ ಕಾರಣ. ಉತ್ತರ ಪ್ರದೇಶ, ಪಂಜಾಬ್, ಗೋವಾ, ಮಣಿಪುರ, ಉತ್ತರಖಂಡ ರಾಜ್ಯ ವಿಧಾನ ಸಭೆಗಳಿಗೆ ಇತ್ತೀಚೆಗೆ ನಡೆದ ಚುನಾವಣಾ ಪರಾಭವವೂ ಸೇರಿದಂತೆ 2014ರಿಂದ ಸತತ ಎಂಬಂತೆ ಕಾಂಗ್ರೆಸ್ ಸೋಲುತ್ತಿರುವ ರೀತಿ ಮತ್ತು ಅದಕ್ಕೆ ಕಾರಣವಾಗಿರುವ ದುರ್ಬಲ ನಾಯಕತ್ವ ಅವರನ್ನು ಕೆರಳಿಸಿ "ಕುರ್ಚಿ ಬಿಟ್ಟು ತೊಲಗಿ" ಎಂದು ಸೋನಿಯಾ ಮತ್ತು ಅವರಿಬ್ಬರು ಮಕ್ಕಳ ಬಗ್ಗೆ ಹೇಳುವಂತೆ ಮಾಡಿರಲು ಸಾಕು.

ಪ್ರತಿ ಚುನಾವಣೆಯನ್ನು ಸೋತಾಗಲೂ ಸೋಲಿಗೆ ಕಾರಣ ಹುಡುಕುವ ಕೆಲಸವನ್ನು ಕಾಂಗ್ರೆಸ್ ಮಾಡಿಕೊಂಡು ಬಂದಿದೆ. ಕರಾಳ ತುರ್ತು ಪರಿಸ್ಥಿತಿ ಕಾಯ್ದೆಯನ್ನು ಹಿಂತೆಗೆದುಕೊಂಡ ತರುವಾಯದಲ್ಲಿ ನಡೆದ ಚುನಾವಣೆಯಲ್ಲಿ ಪ್ರಧಾನಿ ಇಂದಿರಾ ಗಾಂಧಿ ಸೇರಿದಂತೆ ಅವರ ನೇತೃತ್ವದ ಪಕ್ಷವನ್ನು ಮತದಾರರು ಗುಡಿಸಿ ಕಸದ ಬುಟ್ಟಿಗೆ ಹಾಕಿದ್ದರು. ಆ ನಂತರದಲ್ಲಿ ಅಂಥದೇ ಘನಘೋರ ಸೋಲನ್ನು ಆ ಪಕ್ಷ ಕಂಡಿದ್ದು 2014ರಲ್ಲಿ. ಸೋತ ಇಂದಿರಾ ಗಾಂಧಿ ಮುಲುಗುತ್ತ ಮೂಲೆ ಹಿಡಿದು ಕೂರಲಿಲ್ಲ. ದೇಶವನ್ನು ಸುತ್ತಿದರು. "ನಾವು ಸೋತಿದ್ದೇವೆ ನಿಜ, ಆದರೆ ಸತ್ತಿಲ್ಲ" ಎನ್ನುವುದನ್ನು ದೇಶವಾಸಿಗಳಿಗೆ ಮನವರಿಕೆ ಮಾಡಿಕೊಟ್ಟರು. ಜೊತೆಗೆ ದೇವರಾಜ ಅರಸುರಂಥ ದೈತ್ಯ ನಾಯಕರು ಪಕ್ಷದಲ್ಲಿದ್ದರು. ಅರಸು ಕಾರಣವಾಗಿ ಇಂದಿರಾ ಚಿಕ್ಕಮಗಳೂರು ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾದರು ಮಾತ್ರವಲ್ಲ, ಕಳೆದುಕೊಂಡಿದ್ದ ಅಧಿಕಾರವನ್ನು ಎರಡೇ ವರ್ಷದಲ್ಲಿ ಪುನಃ ಕೈವಶಪಡಿಸಿಕೊಂಡರು.



ಈಗ ಇಂದಿರಾ ಗಾಂಧಿಯೂ ಇಲ್ಲ, ಅರಸು ಕೂಡಾ ಇಲ್ಲ. ಕಾಂಗ್ರೆಸ್ ಕೊರಳಲ್ಲಿ ಸೋಲಿನ ಸರಮಾಲೆ ತೂಗುತ್ತಿದೆ. ಚುನಾವಣಾ ಜಯಕ್ಕೆ ಕಾರಣ ಇರುವಂತೆ ಸೋಲಿಗೂ ಕಾರಣ ಇರುತ್ತದೆ. ಬಿಜೆಪಿ ಗೆದ್ದ ಕಾರಣ ಕಾಂಗ್ರೆಸ್ ಸೋತು ಹೋಯಿತು ಎನ್ನುವುದರಲ್ಲಿ ಅರ್ಥವಿಲ್ಲ. ಮೋದಿ ಗೆದ್ದರು ಆ ಕಾರಣವಾಗಿ ಸೋನಿಯಾ ಸೋಲಬೇಕಾಯಿತು; ಹಾಗಿಲ್ಲವಾದರೆ ಕಾಂಗ್ರೆಸ್ ಸೋಲುತ್ತಿರಲಿಲ್ಲ ಎನ್ನುವಂಥ ಹೊಗಳು ಭಟರು ಸೋನಿಯಾ ಸುತ್ತ ಸೇರಿಕೊಂಡಿದ್ದಾರೆ. "ಸೋಲಿಗೆ ನೀವಲ್ಲ ಕಾರಣ, ಈ ದೇಶದ ಜನ" ಎನ್ನುತ್ತ ನೀವಿಲ್ಲದೆ ಪಕ್ಷವೇ ಇಲ್ಲ ಎಂಬಂಥ ಭ್ರಮಾಲೋಕವನ್ನು ಸೃಷ್ಟಿಸಿದ್ದಾರೆ. ಇಂಥ ಭ್ರಮೆಯನ್ನು ಸೃಷ್ಟಿಸುವ ಜನರು ಎಲ್ಲೆಡೆಯೂ ಎಲ್ಲಾ ಕಾಲದಲ್ಲೂ ಇರುತ್ತಾರೆ. ವಿಪರ್ಯಾಸವೆಂದರೆ ಸೋನಿಯಾ ಅಂಡ್ ಚಿಲ್ಡ್ರನ್ಸ್ ಕಂಪೆನಿ ಮನುಷ್ಯ ನಿರ್ಮಿತ ಭ್ರಮೆಯನ್ನು ನಂಬಿದೆಯಲ್ಲ ಎನ್ನುವುದು. 2014ರಲ್ಲಿ, 2019ರಲ್ಲಿ ಲೋಕಸಭಾ ಚುನಾವಣಾ ಪರಾಭವಕ್ಕೆ ಕಾರಣ ಕಂಡುಹಿಡಿಯಲು ಎಐಸಿಸಿ ರಚಿಸಿದ್ದ ಸತ್ಯ ಶೋಧಕ ಸಮಿತಿ ತನ್ನ ವರದಿಯನ್ನು ಒಪ್ಪಿಸಿದೆ. ಈ ನಡುವಿನ ಅವಧಿಯಲ್ಲಿ ನಡೆದ ಬೇರೆಬೇರೆ ಮಹತ್ವದ ಚುನಾವಣಾ ಸೋಲಿಗೆ ಕಾರಣವನ್ನೂ ಆಯಾ ಸಂದರ್ಭಕ್ಕೆ ರಚನೆಯಾದ ಸಮಿತಿಗಳು ವಿಶ್ಲೇಷಿಸಿವೆ. ಅಂಥ ವರದಿಗಳಲ್ಲಿ ಒಂದರ ವಿಚಾರದಲ್ಲೂ ಎಐಸಿಸಿ ಅಧ್ಯಕ್ಷರು ತೀರ್ಮಾನ ತೆಗೆದುಕೊಂಡಿಲ್ಲ. 2014ರಲ್ಲಿ ಸ್ವತಃ ಸೋನಿಯಾ ಎಐಸಿಸಿ ಅಧ್ಯಕ್ಷರಾಗಿದ್ದರು. 2019ರಲ್ಲಿ ರಾಹುಲ್ ಗಾಂಧಿ ಎಐಸಿಸಿ ಅಧ್ಯಕ್ಷರಾಗಿದ್ದರು. ಮೊನ್ನೆ ಮೊನ್ನೆ ನಡೆದ ಪಂಚ ರಾಜ್ಯ ವಿಧಾನ ಸಭಾ ಚುನಾವಣೆ ಸಮಯದಲ್ಲಿ ಎಐಸಿಸಿ ಹಂಗಾಮಿ ಅಧ್ಯಕ್ಷರಾಗಿ ಪಕ್ಷವನ್ನು ಮುನ್ನಡೆಸಿದವರು ಸೋನಿಯಾ ಗಾಂಧಿಯವರೇ. ಉತ್ತರ ಪ್ರದೇಶದ ಉಸ್ತುವಾರಿ ಪ್ರಧಾನ ಕಾರ್ಯದರ್ಶಿಯಾಗಿದ್ದುಕೊಂಡು ತಾವೇ ಭವಿಷ್ಯದ ಮುಖ್ಯಮಂತ್ರಿ ಎಂದು ಬಿಂಬಿಸಿಕೊಂಡವರು ಪ್ರಿಯಾಂಕಾ ಗಾಂಧಿ. ಈ ಮೂವರನ್ನೊಳಗೊಂಡ ನಾಯಕತ್ವ, ವರದಿಯನ್ನು ಮುಚ್ಚಿಡುವುದಕ್ಕೆ ಏನು ಕಾರಣವಿರಬಹುದು...? ಅದೆಂಥ ಸತ್ಯವನ್ನು ವರದಿ ತನ್ನ ಗರ್ಭದಲ್ಲಿ ಬಚ್ಚಿಟ್ಟುಕೊಂಡಿರಬಹುದು...? (ಅಂದಹಾಗೆ ಪಂಚರಾಜ್ಯ ವಿಧಾನಸಭಾ ಚುನಾವಣಾ ಸೋಲಿನ ಪರಾಮರ್ಶೆಗೆ ಸಮಿತಿ ಇನ್ನೂ ನೇಮಕವಾಗಿಲ್ಲ, ಇಂದಲ್ಲ ನಾಳೆ ಅಂಥ ಸಮಿತಿ ಅಸ್ತಿತ್ವಕ್ಕೆ ಬರಬಹುದೆಂಬ ವಿಚಾರದಲ್ಲಿ ಭರವಸೆಯೂ ಇಲ್ಲ).



ಚುನಾವಣೆಯನ್ನು ಗೆದ್ದರೆ ನಾಯಕರ ಕಿರೀಟಕ್ಕೆ ಮತ್ತೊಂದು ಪುಕ್ಕ ಸೇರಿಸುವ, ಸೋತರೆ ಸ್ಥಳೀಯ ನಾಯಕರ ಮೇಲೆ ಗೂಬೆ ಕೂರಿಸುವ ಪ್ರವೃತ್ತಿ ಎಲ್ಲ ಪಕ್ಷಗಳಲ್ಲೂ ಇದೆ. ಕಾಂಗ್ರೆಸ್‌ನಲ್ಲಿ ಈ ಪ್ರವೃತ್ತಿ ಇತರ ಪಕ್ಷಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿದೆ. ಅದಕ್ಕೆ ಇರುವ ಕಾರಣವೆಂದರೆ ಹೈಕಮಾಂಡ್ ಎಂದೂ ತಪ್ಪು ಮಾಡುವುದಿಲ್ಲ ಎಂಬ ಅಲಿಖಿತ ನಿಯಮ. ಪಕ್ಷದಲ್ಲಿರುವ ದೊಡ್ಡ ದೊಡ್ಡ ನಾಯಕರಿಂದ ಶುರುಗೊಂಡು ನಾಲ್ಕಾಣೆ ಸದಸ್ಯತ್ವ ಹೊಂದಿರುವ ಸಾಮಾನ್ಯ ಕಾರ್ಯಕರ್ತರವರೆಗೆ ಎಲ್ಲರೂ ಈ ನಿಯಮಕ್ಕೆ ಸದಾಕಾಲಕ್ಕೂ ಬದ್ಧರಾಗಿರಬೇಕು ಎನ್ನುವುದು ಮತ್ತೊಂದು ಅಲಿಖಿತ ನಿಯಮ. ಈ ನಿಯಮವನ್ನು ಇತ್ತೀಚಿನ ವರ್ಷಗಳಲ್ಲಿ ಹಲವರು ಪ್ರಶ್ನಿಸಲಾರಂಭಿಸಿ ತಥಾಕಥಿತ ಹೈಕಮಾಂಡ್‌ನ ತಲೆ ಬಿಸಿಗೆ ಕಾರಣವಾಗಿದ್ದಾರೆ. ಇತ್ತೀಚಿನ ಬಂಡಾಯವನ್ನು "ಗ್ರೂಪ್-23" ಎಂದು ಹೆಸರಿಸಲಾಗಿದೆ. ಪಕ್ಷದಲ್ಲಿ ಕ್ರಾಂತಿಕಾರಕ ಬದಲಾವಣೆ ಆಗಬೇಕು; ಒಂದು ಕುಟುಂಬದ ಖಾಸಗಿ ಆಸ್ತಿಯಾಗಿ ಕಾಂಗ್ರೆಸ್ ಇರಕೂಡದು; ಪಕ್ಷದ ಕಾರ್ಯಕ್ರಮಗಳು ಪಾರದರ್ಶಕವಾಗಿರಬೇಕು; ಪಕ್ಷದ ಸಂಘಟನೆಗೆ ಬೇರೆಬೇರೆ ಹಾಗೂ ನಿರಂತರ ಕಾರ್ಯ ಯೋಜನೆಗಳನ್ನು ರೂಪಿಸುವ ಮೂಲಕ "ಜನರೊಂದಿಗೆ ನಾವಿದ್ದೇವೆ" ಎಂಬ ಸಂದೇಶ ರವಾನೆಯಾಗಬೇಕು ಎಂದು "ಜಿ-23" ಸದಸ್ಯರು ಹೇಳಿದರೆ ಅದನ್ನು ನಾಯಕತ್ವ ಬದಲಾವಣೆಗೆ ಬಂದಿರುವ ಒತ್ತಾಯ ಎಂದು ಭಯಗೊಂಡಿರುವ ಸೋನಿಯಾ ಪರಿವಾರ ಪ್ರಶ್ನೆ ಕೇಳುವವರೆಲ್ಲರ ಬಾಯಿ ಮುಚ್ಚಿಸುವ ಮಾರ್ಗೋಪಾಯಗಳ ಹುಡುಕಾಟದಲ್ಲಿದೆ.



ಪ್ರಧಾನಿಯಾಗಿದ್ದ ಅಟಲ್ ಬಿಹಾರಿ ವಾಜಪೇಯಿ ಸರ್ಕಾರ ತನ್ನ ಅವಧಿ ಇನ್ನೂ ಆರು ತಿಂಗಳು ಇರುವಾಗಲೆ 2004ರಲ್ಲಿ ಚುನಾವಣೆಯನ್ನು ಮೈಮೇಲೆ ಎಳೆದುಕೊಂಡು ಸೋತು ಹೋಯಿತು. ಆಗ ಅಧಿಕಾರಕ್ಕೆ ಬಂದುದು ಕಾಂಗ್ರೆಸ್/ಯುಪಿಎ. 2009ರಲ್ಲೂ ಜನ ಮತ್ತೆ ಆ ಒಕ್ಕೂಟಕ್ಕೇ ಆಶೀರ್ವದಿಸಿದರು. ಮನಮೋಹನ್ ಸಿಂಗ್ ಅವರನ್ನು ಪ್ರಧಾನಿ ಪಟ್ಟದಲ್ಲಿ ಕುಳ್ಳಿರಿಸುವ ಮೂಲಕ ಸೋನಿಯಾ ತಮ್ಮನ್ನು ತಾವೇ "ತ್ಯಾಗಿ" ಎಂದು ಬಿಂಬಿಸಿಕೊಂಡರು. ಇಂದಿರಾ ಹತ್ಯೆ ಘಟಿಸಿದಾಗ ಅಂದಿದ್ದ ರಾಷ್ಟ್ರಪತಿ ಜೈಲ್‌ಸಿಂಗ್, ಸಮಯ ವ್ಯರ್ಥಮಾಡದೆ ರಾಜೀವ್ ಗಾಂಧಿಯವರಿಗೆ ಪ್ರಧಾನಿ ಪಟ್ಟಕಟ್ಟಿದರು. ಆ ಸಂದರ್ಭದಲ್ಲಿ ಪಕ್ಷದ ಅನೇಕ ಹಿರಿಯ ತಲೆಗಳು ಬಯಸಿದ್ದು ಪ್ರಣಬ್‌ಕುಮಾರ್ ಮುಖರ್ಜಿ ಪ್ರಧಾನಿಯಾಗಬೇಕೆಂದು. ಜೈಲ್ ಸಿಂಗ್‌ರಿಗೆ ಮಾತ್ರವೇ ಮುಖರ್ಜಿ ಬೇಡವಾಗಿತ್ತು. ವ್ಯಕ್ತಿಗತ ವೈಮನಸ್ಯ ಕಾರಣವಿರಬೇಕು. ಮುಂದೆ 2004ರಲ್ಲಿ ಕೂಡಾ ಪ್ರಣಬ್ ಹೆಸರು ತೇಲಿತ್ತು. ಆದರೆ ಸೋನಿಯಾ ಮತ್ತು ಅವರನ್ನು ಸುತ್ತುವರಿದಿದ್ದ (ದುಷ್ಟ?) ಕೂಟಕ್ಕೆ ಆ ಹೆಸರು ಬೇಡವಾಗಿತ್ತು. ಹಾಗಂತ ಮನಮೋಹನ್‌ಸಿಂಗ್ ಆಯ್ಕೆಯಲ್ಲಿ ತಪ್ಪಿರಲಿಲ್ಲ. ದಕ್ಷ, ಸಮರ್ಥ, ಪ್ರಾಮಾಣಿಕ, ರಾಜಕಾರಣದಲ್ಲಿ ಅಪರೂಪವಾಗಿರುವ ಕೈಬಾಯಿ ಶುದ್ಧದ ಮನುಷ್ಯ ಅವರು. ಅವರಿಗೆ ಪ್ರಧಾನಿ ಪಟ್ಟ ಬಂದಂತೆ ಅದನ್ನು ನಿರ್ವಹಿಸುವ ಸ್ವಾತಂತ್ರ್ಯ ಬರಲಿಲ್ಲ. ಹತ್ತು ವರ್ಷದ ಯುಪಿಎ ಆಡಳಿತಾವಧಿಯಲ್ಲಿ ಎಲ್ಲ ತೀರ್ಮಾನವಾಗುತ್ತಿದ್ದುದು ಸೋನಿಯಾ ಮನೆಯಲ್ಲಿ. ಅದನ್ನು ಹೊರಜಗತ್ತಿಗೆ ತಿಳಿಸುವುದಷ್ಟೆ ಸಂಪುಟದ ಕೆಲಸವಾಗಿತ್ತು. 2014ರಲ್ಲಿ ಮೋದಿ ಹವಾದಲ್ಲಿ ತರಗೆಲೆ ರೀತಿಯಲ್ಲಿ ಯುಪಿಎ ಸರ್ಕಾರ ಕೊಚ್ಚಿ ಹೋಯಿತು. ಕಾಂಗ್ರೆಸ್ ದೂಳೀಪಟವಾಯಿತು.

ಈ ಸಂದರ್ಭದಲ್ಲಿ ಸೋನಿಯಾರಿಗೆ ತಮ್ಮ ಅತ್ತೆಯ ಛಲ ನೆನಪಿಗೆ ಬರಬೇಕಿತ್ತು. ದೇಶಾದ್ಯಂತ ಪ್ರವಾಸ ಮಾಡಿ "ನಾವು ಸೋತಿದ್ದೇವೆ, ನಿಜ ಆದರೆ ಸತ್ತಿಲ್ಲ" ಎಂದು ಜನಕ್ಕೆ ಹೇಳಬೇಕಿತ್ತು. ಅನಾರೋಗ್ಯದ ನೆಪದಲ್ಲಿ ಸೋನಿಯಾ ಮನೆಯಲ್ಲೇ ಉಳಿದರು. ತಮ್ಮದು ಹುಡುಗಾಟಿಕೆ ಹಂತ ಮೀರಿದ ವಯಸ್ಸು ಎನ್ನುವುದನ್ನು ಅರ್ಥ ಮಾಡಿಕೊಳ್ಳಲು ರಾಹುಲ್ ಸೋತರು. ಧೃತರಾಷ್ಟ್ರ ಪ್ರೇಮ ಎನ್ನುವುದೊಂದು ಮಹಾಭಾರತದಲ್ಲಿದೆ. ತನ್ನ ಮಕ್ಕಳು ಮಾಡಿದ್ದೆಲ್ಲವೂ ಸರಿ ಎಂಬ ಧೃತರಾಷ್ಟ್ರನ ನಿಲುವು ಮುಂದಿನ ಅನಾಹುತಕ್ಕೆ ಹೇಗೆಲ್ಲ ಕಾರಣ ಆಯಿತು ಎನ್ನುವುದನ್ನು ಹೇಳುತ್ತದೆ ಅದು. ಸೋನಿಯಾರದು ತಮ್ಮ ಇಬ್ಬರೂ ಮಕ್ಕಳ ವಿಚಾರದಲ್ಲಿ ಇದೇ ಬಗೆಯ ಪ್ರೇಮ.

ರಾಮಚಂದ್ರ ಗುಹಾ ಮಾತ್ರವೇ ಅಲ್ಲ ಹಿರಿಯ ಪತ್ರಕರ್ತ ಟಿ.ಜೆ.ಎಸ್.ಜಾರ್ಜ್ ಕೂಡಾ ಈ ಪ್ರವೃತ್ತಿಯನ್ನು ಖಂಡಿಸುತ್ತಾರೆ. ಕಳೆದ ಭಾನುವಾರ "ದಿ ನ್ಯೂ ಸಂಡೆ ಎಕ್ಸ್‌ಪ್ರೆಸ್" ಪತ್ರಿಕೆಯ ತಮ್ಮ "ಪಾಯಿಂಟ್ ಆಫ್ ವ್ಯೂ" ಅಂಕಣದಲ್ಲಿ ಜಾರ್ಜ್ ಬರೆದಿರುವುದನ್ನು ಓದಿದರೆ ಕಾಂಗ್ರೆಸ್ ನಾಯಕತ್ವ ತುಳಿಯುತ್ತಿರುವ ದಿವಾಳಿದಾರಿಯ ಪ್ರಪಾತ ಎಷ್ಟೆನ್ನುವುದು ಗೊತ್ತಾಗುತ್ತದೆ. ಕಾಂಗ್ರೆಸ್ ಎಂದರೆ ಸೋನಿಯಾ ಅಥವಾ ರಾಹುಲ್ ಅಥವಾ ಪ್ರಿಯಾಂಕಾ ಗಾಂಧಿ ವಡ್ರಾ ಒಡೆತನದ ಪ್ರೈವೇಟ್ ಲಿಮಿಟೆಡ್ ಕಂಪೆನಿ ಅಲ್ಲ ಎನ್ನುವುದು ಜಾರ್ಜ್ ಅಭಿಮತ.

ಭಿನ್ನಾಭಿಪ್ರಾಯ ವ್ಯಕ್ತಪಡಿಸುವ ಶಶಿ ತರೂರ್, ಕಪಿಲ್ ಸಿಬಲ್, ಮನೀಶ್ ತಿವಾರಿ, ಗುಲಾಂ ನಬಿ ಆಜಾದ್, ಭೂಪಿಂದರ್ ಸಿಂಗ್ ಹುಡಾ ಮುಂತಾದವರನ್ನು ನಾಯಕತ್ವದ ವಿರೋಧಿಗಳು ಎಂಬ ರೀತಿಯಲ್ಲಿ ವ್ಯವಸ್ಥಿತವಾಗಿ ಬಿಂಬಿಸುವ ಒಂದು ಪಟಾಲಮ್ಮು ಎಐಸಿಸಿಯಲ್ಲಿ ಸಕ್ರಿಯವಾಗಿರುವುದನ್ನು ಗಮನಿಸಬೇಕು. ಸೋನಿಯಾ ಕಂಪೆನಿ ವಿರುದ್ಧ ಪಿಸುಮಾತಿನ ವಿರೋಧ ಕೇಳಿಬಂದರೂ ಬಗ್ಗುಬಡಿದು ಬಾಯಿ ಮುಚ್ಚಿಸುವ ಕೆಲಸ ಈ ಪಟಾಲಮ್ಮಿನದು.



ತಮಿಳುನಾಡಿನಲ್ಲಿ 55 ವರ್ಷದ ಹಿಂದೆ; ಪಶ್ಚಿಮ ಬಂಗಾಳಾದಲ್ಲಿ 45 ವರ್ಷದ ಹಿಂದೆ; ಉತ್ತರ ಪ್ರದೇಶ, ಬಿಹಾರದಲ್ಲಿ ಮೂರು ದಶಕ ಹಿಂದೆ; ಒಡಿಶಾ, ಗುಜರಾತದಲ್ಲಿ 25 ವರ್ಷದ ಹಿಂದೆ ಅಧಿಕಾರ ಕಳೆದುಕೊಂಡ ಕಾಂಗ್ರೆಸ್ ಕೆಲವು ರಾಜ್ಯಗಳಲ್ಲಿ ಲೆಟರ್ ಹೆಡ್ ಪಕ್ಷದ ಮಟ್ಟಕ್ಕೆ ಬಂದು ನಿಂತಿರುವುದಕ್ಕೆ ಕಾರಣ ಇರಲೇಬೇಕು. ಯಾಕಾಗಿ ಜನಕ್ಕೆ ಕಾಂಗ್ರೆಸ್ ಬೇಡವಾಗಿದೆ ಎನ್ನುವುದಕ್ಕೆ ಉತ್ತರ ಹುಡುಕುವ ಕೆಲಸವನ್ನು ಸೋನಿಯಾ ಪಟಾಲಮ್ಮು ಇನ್ನಾದರೂ ಮಾಡಬೇಕು. ಬಿಜೆಪಿಯ ಕೋಮುವಾದಿ ರಾಜಕೀಯ ಕಾಂಗ್ರೆಸ್ಸನ್ನು ಮೂಲೆಗುಂಪು ಮಾಡುತ್ತಿದೆ ಎಂಬ ವಾದವಿದೆ, ವಾದಕ್ಕಾಗಿ ಅದನ್ನು ಒಪ್ಪೋಣ. ಕೋಮು ರಾಜಕೀಯ ಕೆಲಸಕ್ಕೆ ಬಾರದ ತಮಿಳುನಾಡಿನಲ್ಲಿ, ಪಶ್ಚಿಮ ಬಂಗಾಳಾದಲ್ಲಿ, ಆಂಧ್ರಪ್ರದೇಶ, ತೆಲಂಗಾಣಾದಲ್ಲಿ, ಒಡಿಶಾದಲ್ಲಿ, ಬಿಹಾರದಲ್ಲಿ ಜನ ಯಾಕೆ ಕಾಂಗ್ರೆಸ್‌ನ ಕೈ ಹಿಡಿಯುತ್ತಿಲ್ಲ...? ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಪ್ರಾಮಾಣಿಕ ಯತ್ನಕ್ಕೆ ಸೋನಿಯಾ ಗಾಂಧಿ ಮುಂದಾದರೆ ಪಕ್ಷಕ್ಕೆ ಭವಿಷ್ಯದಲ್ಲಿ ಒಳಿತಾಗಬಹುದೋ ಏನೋ!?

# ಅನ್ಯಾಯದ ವಿರುದ್ಧ ಧ್ವನಿಯೆತ್ತದ ಜನ



ಸನತ್‌ಕುಮಾರ ಬೆಳಗಲಿ
ಹಿರಿಯ ಪತ್ರಕರ್ತರು

ಜೀವನಾವಶ್ಯಕ ಪದಾರ್ಥಗಳ ಬೆಲೆ ಗಗನಕ್ಕೇರಿ ಬದುಕು ಅಸಹನೀಯವಾಗಿದೆ.ನಿರುದ್ಯೋಗ ವ್ಯಾಪಕವಾಗಿದೆ.ಇವುಗಳ ಬಗ್ಗೆ ಮಾತಾಡಬೇಕಾದ ಜನ ಕೋಮು ವಿಷ ವರ್ತುಲಕ್ಕೆ ಸಿಲುಕಿದ್ದಾರೆ.

ಕಳೆದ ಏಳು ವರ್ಷಗಳಲ್ಲಿ ಭಾರತದಲ್ಲಿ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಗಿದೆ. ಜೀವನಾವಶ್ಯಕ ಪದಾರ್ಥಗಳ ಬೆಲೆಗಳು ಗಗನಕ್ಕೇರುತ್ತಿವೆ. ಬಡವರು ಮತ್ತು ಸಿರಿವಂತರ ನಡುವಿನ ಅಂತರ ಹೆಚ್ಚಾಗಿದೆ. ಇನ್ನೊಂದೆಡೆ ಆರೋಗ್ಯ, ಶಿಕ್ಷಣ, ಮತ್ತು ಸುರಕ್ಷತೆ ಮೇಲೆ ಸರ್ಕಾರ ಮಾಡುತ್ತಿರುವ ವೆಚ್ಚ ಕಡಿತವಾಗುತ್ತಿದೆ. ಮತ್ತೊಂದೆಡೆ ದೇಶದ 10 ಬಂಡವಾಳಗಾರರ ಬಳಿ ಇರುವ ಸಂಪತ್ತು ಕರಗಲು ನೂರು ವರ್ಷಗಳಾದರೂ ಬೇಕು. ಪ್ರಧಾನಿ ನರೇಂದ್ರ ಮೋದಿಯವರ ಅತ್ಯಾಪ್ತ ಸ್ನೇಹಿತ ಗೌತಮ ಅದಾನಿಯ ಸಂಪತ್ತಿನ ಒಟ್ಟು ಮೌಲ್ಯ 6.17 ಲಕ್ಷ ಕೋಟಿ. 2021 ಈ ಒಂದೇ ವರ್ಷದಲ್ಲಿ ಅದಾನಿ ಸಂಪತ್ತು 3.73 ಲಕ್ಷ ಕೋಟಿಯಷ್ಟು ಹೆಚ್ಚಾಗಿದೆ. ಇತ್ತೀಚೆಗೆ ಬಿಡುಗಡೆ ಯಾದ ಪಟ್ಟಿಯ ಪ್ರಕಾರ, ರಿಲಯನ್ಸ್ ಉದ್ದಿಮೆ ಸಮೂಹದ ಮಾಲೀಕ ಮುಖೇಶ್ ಅಂಬಾನಿಯ ಸಂಪತ್ತಿನ ಮೌಲ್ಯ ಕೂಡ ಶೇಕಡಾ 24ರಷ್ಟು ಹೆಚ್ಚಳವಾಗಿ 7.84 ಲಕ್ಷ ಕೋಟಿಗೆ ಮುಟ್ಟಿದೆ. ಭಾರತದ 10 ಮಂದಿ ಸಿರಿವಂತರ ಬಳಿ ಇರುವ ಸಂಪತ್ತಿನಿಂದ ಮುಂದಿನ 25 ವರ್ಷಗಳವರೆಗೆ ಭಾರತದ ಮಕ್ಕಳ ಶಾಲೆ ಮತ್ತು ಉನ್ನತ ಶಿಕ್ಷಣಕ್ಕೆ ಅಗತ್ಯವಿರುವ ಹಣಕಾಸು ಒದಗಿಸಬಹುದು ಎಂದು ಆಕ್ಸ್ ಫ್ಯಾಮ್ ಇಂಡಿಯಾ ಸಂಸ್ಥೆ ತಿಳಿಸಿದೆ.

ಅಧಿಕೃತ ಅಂಕಿ ಅಂಶಗಳ ಪ್ರಕಾರ, ಕೋವಿಡ್ ಹೊಡೆತದಿಂದ 2021ರಲ್ಲಿ ಭಾರತದ ಶೇಕಡಾ 84ರಷ್ಟು ಕುಟುಂಬಗಳು ಗಣನೀಯವಾಗಿ ಕುಸಿದು ಪಾತಾಳಕ್ಕೆ ತಲುಪಿದೆ. ಇದೇ ಸಮಯದಲ್ಲಿ ಕೋಟ್ಯಾಧಿಪತಿಗಳಲ್ಲಿ ಲಕ್ಷಾಂತರ ಕೋಟಿ ಸಂಗ್ರಹಣೆಯಾಗಿದೆ. ದೇಶದ ತಳಮಟ್ಟದ ಶೇಕಡಾ 55.2 ರಷ್ಟು ಜನರಲ್ಲಿ ಇರುವಷ್ಟು ಸಂಪತ್ತು 98 ಮಂದಿ ಸಿರಿವಂತರಲ್ಲಿ ಶೇಖರಣೆಯಾಗಿದೆ.ದೇಶದ ಶೇಕಡಾ 10ರಷ್ಟು ಅತಿ ದೊಡ್ಡ ಬಂಡವಾಳಗಾರರಲ್ಲಿ ಶೇಕಡಾ 53ರಷ್ಟು ಸಂಪತ್ತು ಸಂಗ್ರಹವಾಗಿದೆ. ಕಡು ಬಡತನದಲ್ಲಿ ಇರುವ ಭಾರತೀಯರ ಒಟ್ಟು ಸಂಪತ್ತಿನ ಮೌಲ್ಯ ಶೇಕಡಾ 13 ರಷ್ಟು ಮಾತ್ರ. ಭಾರತದ ಹತ್ತು ಮಂದಿ ಬಂಡವಾಳಗಾರರ ಸಂಪತ್ತು ಎಷ್ಟಿದೆಯೆಂದರೆ ಅವರು ದಿನ 7 ಕೋಟಿ ರೂಪಾಯಿ ಖರ್ಚು ಮಾಡಿದರೂ ಅವರ ಬಳಿ ಇರುವ ಸಂಪತ್ತು ಕರಗಲು 84 ವರ್ಷ ಬೇಕಾಗುತ್ತದೆ. ಇವರ ಬಳಿ ಇರುವ ಸಂಪತ್ತಿನ ಮೇಲೆ ತೆರಿಗೆ ವಿಧಿಸಿ ಅದರಿಂದ ಬರುವ 5.79 ಲಕ್ಷ




ಕೋಟಿ ರೂಪಾಯಿಯಲ್ಲಿ ಆದಾಯದಲ್ಲಿ ಸರ್ಕಾರ ಮುಂಗಡಪತ್ರದಲ್ಲಿ ಆರೋಗ್ಯ ಕ್ಷೇತ್ರಕ್ಕೆ ಹಂಚಿಕೆ ಮಾಡುವ ಹಣದ ಪ್ರಮಾಣವನ್ನು ಶೇಕಡಾ 271ರಷ್ಟು ಹೆಚ್ಚಿಸಬಹುದು. ಅತ್ಯಂತ ಸಿರಿವಂತರಾದ ಶೇಕಡಾ 10 ರಷ್ಟು ಬಂಡವಾಳಗಾರರ ಮೇಲೆ ಶೇಕಡಾ 1 ರಷ್ಟು ತೆರಿಗೆ ವಿಧಿಸಿದರೆ ಬರುವ ಆದಾಯದಿಂದ 17.7 ಲಕ್ಷ ಹೆಚ್ಚುವರಿ ಆಮ್ಲಜನಕ ಸಿಲಿಂಡರ್ ಒದಗಿಸಬಹುದು. ಶೇಕಡಾ 98ರಷ್ಟು ಸಿರಿವಂತರ ಮೇಲೆ ಹೆಚ್ಚುವರಿಯಾಗಿ ಶೇಕಡಾ 1 ರಷ್ಟು ಸಂಪತ್ತು ತೆರಿಗೆಯನ್ನು ವಿಧಿಸಿದರೆ ಅದರಿಂದ ಬರುವ ವರಮಾನದಿಂದ ಆಯುಷ್ಮಾನ ಭಾರತ ಯೋಜನೆಗೆ ಸುಮಾರು ಹತ್ತು ವರ್ಷಗಳ ಕಾಲ ಹಣಕಾಸು ಒದಗಿಸಬಹುದು. ಭಾರತದ 142 ಬಂಡವಾಳಗಾರರ ಬಳಿ ಇರುವ ಒಟ್ಟು ಸಂಪತ್ತಿನ ಮೌಲ್ಯ 53 ಲಕ್ಷ ಕೋಟಿ ರೂಪಾಯಿ. ಇವರ ಪೈಕಿ 98 ಮಂದಿ ಸಿರಿವಂತರ ಬಳಿ ಇರುವ ಸಂಪತ್ತಿನ ಮೌಲ್ಯ 50 ಲಕ್ಷ ಕೋಟಿ ಇವರ ಆದಾಯದ ಮೇಲೆ ಇನ್ನೊಂದಿಷ್ಟು ತೆರಿಗೆ ವಿಧಿಸಿದರೆ ಮಕ್ಕಳು ಮತ್ತು ಮಹಿಳೆಯರ ಕಲ್ಯಾಣದ ಯೋಜನೆ ಗಳಿಗಾಗಿ ವ್ಯಯಿಸುವ ಬಜೆಟ್ ಪ್ರಮಾಣವನ್ನು ಶೇ 121ರಷ್ಟು ಹೆಚ್ಚಿಸಬಹುದು.

ಭಾರತದ 98 ಅತಿ ದೊಡ್ಡ ಬಂಡವಾಳಗಾರರ ಮೇಲೆ ವಿಧಿಸುವ ತೆರಿಗೆಯ ಪ್ರಮಾಣವನ್ನು ಕೊಂಚ ಹೆಚ್ಚಿಸಿದರೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಎರಡು ವರ್ಷಗಳ ಖರ್ಚು ವೆಚ್ಚಗಳನ್ನು ಸರಿದೂಗಿಸಬಹುದು. ಭಾರತದ 98 ಮಂದಿ ಶತ ಕೋಟ್ಯಾಧಿಶರ ಸಂಪತ್ತಿನ ಮೇಲೆ ಶೇಕಡಾ 1 ರಷ್ಟು ತೆರಿಗೆ ವಿಧಿಸಿದರೆ ಶಿಕ್ಷಣ ಸಚಿವಾಲಯದ ಅಡಿಯಲ್ಲಿ ಬರುವ ಶಾಲಾ ಶಿಕ್ಷಣ ಮತ್ತು ಸಾಕ್ಷರತೆಯ ಇಲಾಖೆಯ ಒಂದು ವರ್ಷದ ಖರ್ಚು ವೆಚ್ಚ ನಿಭಾಯಿಸಬಹುದು.

ಇದು ಭಾರತದ ಚಿತ್ರ ಮಾತ್ರವಲ್ಲ ಜಗತ್ತಿನ ಬಹುತೇಕ ಬಂಡವಾಳಶಾಹಿ ದೇಶದಲ್ಲಿ ಸಂಪತ್ತಿನ ಅಸಮಾನತೆ ಮಿತಿ ಮೀರಿದೆ. ಕೋವಿಡ್ ಪರಿಣಾಮವಾಗಿ ಜನಸಾಮಾನ್ಯರ ,ಚಿಕ್ಕ ಪುಟ್ಟ ವ್ಯಾಪಾರಸ್ಥರ ಮತ್ತು ಮಧ್ಯಮ ವರ್ಗದ ಜನರ ಆದಾಯ ಕುಸಿದಿದೆ. ಸುಮಾರು 16 ಕೋಟಿ ಮಂದಿ ಕಡು ಬಡತನದ ವಿಷ ವರ್ತುಳಕ್ಕೆ ಸಿಲುಕಿದ್ದಾರೆ.ಅಸಮಾನತೆ ಮತ್ತು ಹಸಿವು ಹಾಗೂ ನಿರುದ್ಯೋಗ ಗಳಿಂದ ಜಗತ್ತಿನಲ್ಲಿ ಪ್ರತಿ ದಿನ 21 ಸಾವಿರ ಜನರು ಸಾಯುತ್ತಿದ್ದಾರೆ. ಹೆಚ್ಚುತ್ತಿರುವ ಈ ಅಸಮಾನತೆಯನ್ನು ಕಡಿಮೆ ಮಾಡಲು ದುಡಿಯುವ ಜನರಿಗೆ ಸುರಕ್ಷತೆ ಒದಗಿಸಲು ಲಕ್ಷಾಂತರ ಕೋಟಿ ಸಂಪತ್ತಿನ ಮಾಲೀಕರಾಗಿರುವ ಬಂಡವಾಳ ಗಾರರ ಸಂಪತ್ತಿನ ಮೇಲೆ ಹೆಚ್ಚುವರಿ ತೆರಿಗೆಯನ್ನು ವಿಧಿಸಿ ಆ ಹಣದಿಂದ ಕಡು ಬಡತನಕ್ಕೆ ಸಿಲುಕಿದ ರೋಗ ರುಜಿನಗಳಿಂದ ನರಳುತ್ತಿರುವ ಜನರಿಗೆ ಸುರಕ್ಷಿತ ಮತ್ತು ನೆಮ್ಮದಿಯ ಬದುಕನ್ನು ನೀಡಬಹುದು.

ಆದರೆ ಜನರನ್ನು ದೋಚಿ ಸಿರಿವಂತರಾದ ಇಂಥವರ ಆದಾಯದ ಮೇಲೆ ಸೂಕ್ತವಾದ ತೆರಿಗೆ ವಿಧಿಸಲು ನಮ್ಮ ಸರ್ಕಾರ ತಯಾರಿಲ್ಲ.ಯಾಕೆ ಇಲ್ಲ ಎಂಬುದು ಎಲ್ಲರಿಗೂ ಗೊತ್ತು. ಭಾರತದಲ್ಲಿ ಮತ್ತು ಜಗತ್ತಿನಲ್ಲಿ ಮೂರು ದಶಕಗಳ ಹಿಂದೆ ಇಂಥ ಜ್ವಲಂತ ಸಮಸ್ಯೆಗಳ ಬಗ್ಗೆ ಜನಸಾಮಾನ್ಯರು ಬೀದಿಗಳಲ್ಲಿ ಮನೆ ಮನೆಗಳಲ್ಲಿ ಚರ್ಚಿಸುತ್ತಿದ್ದರು. ಹೋರಾಟಗಾರರು ಆ ಕಾಲಾದ ಕೋಟ್ಯಾಧಿಶರಾದ ಟಾಟಾ,ಬಿರ್ಲಾ ಮುಂತಾದವರ ಹೆಸರುಗಳ ಸುತ್ತ ಸಂವಾದ ಮಾಡುತ್ತಿದ್ದರು. ಆದರೆ ಈಗ ಜನರ ಮಾತಾಡುವ, ಹೋರಾಡುವ ಆದ್ಯತೆಯ ವಿಷಯಗಳು ಬದಲಾಗಿವೆ. ಇಂದಿನ ಹೊಸ ಪೀಳಿಗೆಯ ತರುಣರಂತೂ ಸಂಪತ್ತಿನ ಅಸಮಾನತೆ ಬಗ್ಗೆ ಮಾತಾಡುವುದಿಲ್ಲ. ಅದರ ಬದಲಾಗಿ ಲವ್ ಜಿಹಾದ್, ದನ ಹತ್ಯೆ, ಮತಾಂತರ, ಹಿಜಾಬ್, ಕಾಶ್ಮೀರ ಫೈಲ್ ,ಮೀಸಲಾತಿ ರದ್ದತಿ ಬಗ್ಗೆ ಮಾತಾಡುತ್ತ ಅದಕ್ಕಾಗಿ ರಸ್ತೆ ಗೆ ಇಳಿದು ಹೊಡೆದಾಡಿ ಹೆಣವಾಗಿ ಬೀಳುತ್ತಿದ್ದಾರೆ.

ಇವರು ಹೀಗೆ ತಮ್ಮ ಬದುಕಿಗೆ ಸಂಬಂಧ ಪಡದ ವಿಷಯಗಳ ಬಗ್ಗೆ ಮಾತಾಡಿ ಹೊಡೆದಾಡಿ ಸಾಯಲೆಂದು ಕೋಟ್ಯಾಧಿಶರು ಕೋಮುವಾದಿ ಸಂಘಟನೆಗಳಿಗೆ ಸಾವಿರಾರು ಕೋಟಿ ಹಣವನ್ನು ನೀಡುತ್ತಾರೆ. ಇದಕ್ಕಾಗಿ ಸಂಘಟನೆಗಳನ್ನು ಹುಟ್ಟು ಹಾಕಿದ್ದಾರೆ.ಒಂದು ವಿಷಯ ಮುಗಿದರೆ ಮತ್ತೊಂದು ವಿಷಯವನ್ನು ಆಡಳಿತ ವರ್ಗ ಅತ್ಯಂತ ವ್ಯವಸ್ಥಿತವಾಗಿ ಮುಂದೆ ಮಾಡುತ್ತದೆ.


ಕರ್ನಾಟಕದಲ್ಲಿ ಹಿಜಾಬ್ ವಿಷಯ ಕೋರ್ಟಿನಲ್ಲಿ ಮುಗಿಯಿತೆಂಬುದರಲ್ಲಿ ಶಾಲೆ ಕಾಲೇಜು ಗಳಲ್ಲಿ ಭಗವದ್ಗೀತೆ ಬೋಧನೆಯ ಹೊಸ ಹುಸಿ ವಿಷಯ ವನ್ನು ಪ್ರಭುತ್ವ ಮುಂದೆ ಬಿಟ್ಟಿದೆ.ನಾವು ಕೂಡ ಅಂಬಾನಿ,ಅದಾನಿಗಳನ್ನು ಮರೆತು ಇದರ ಸುತ್ತ ಚರ್ಚೆಗೆ ಇಳಿಯುತ್ತೇವೆ. ಅಲ್ಲಿಗೆಭಾರತವನ್ನು ಬಾಧಿಸುತ್ತಿರುವ ಅಸಲಿ ವಿಷಯಗಳು ಮರೆ ಮಾಚಲ್ಪಡುತ್ತವೆ. ಜನಸಾಮಾನ್ಯರನ್ನು ,ವಿಶೇಷವಾಗಿ ದುಡಿಯುವ ಜನರನ್ನು ಬಾಧಿಸುತ್ತಿರುವ ಸಮಸ್ಯೆಗಳನ್ನು ಚರ್ಚೆಯ ಕೇಂದ್ರ ಬಿಂದುವಾಗಿಸಲು ಎಡಪಂಥೀಯ ಪಕ್ಷಗಳು ಹೆಣಗಾಡುತ್ತಿವೆ.ಆದರೆ ಅವರ ಜೊತೆಗಿರುವ ಸಂಘಟಿತ ಕಾರ್ಮಿಕ, ನೌಕರ ವರ್ಗವೇ ಮೆದುಳಿನ ತುಂಬಾ ಜನಾಂಗೀಯ ದ್ವೇಷದ ವಿಷವನ್ನು ತುಂಬಿಕೊಂಡಿದೆ.ಹೀಗಾಗಿ ಚುನಾವಣೆ ಗಳಲ್ಲಿ ಮತ್ತೆ ಮತ್ತೆ ಅವರೇ ಗೆಲ್ಲುತ್ತಿದ್ದಾರೆ. ಭಾರತ ಎಂಬುದು ಎಲ್ಲ ಸಮುದಾಯಗಳಿಗೆ ಸೇರಿದ ಭೂ ಪ್ರದೇಶ. ಎಲ್ಲರ ಮನಸುಗಳು ಒಂದಾದರೆ ಈ ಒಕ್ಕೂಟ ರಾಷ್ಟ್ರ ,ಜಗತ್ತಿನಲ್ಲಿ ತಲೆ ಎತ್ತಿ ನಿಲ್ಲುತ್ತದೆ. ಆದರೆ ರಾಜಕೀಯ ಲಾಭಕ್ಕಾಗಿ, ತಮ್ಮ ಜಾತಿ ಶ್ರೇಷ್ಟತೆಯ ಹುನ್ನಾರಗಳಿಗಾಗಿ ಜನರನ್ನು ಜಾತಿ,ಮತ,ಧರ್ಮ, ಭಾಷೆಯ ಆಧಾರದಲ್ಲಿ ವಿಭಜಿಸುತ್ತ ಹೋದರೆ ಭಾರತ ಅವನತಿಯತ್ತ ಸಾಗುತ್ತದೆ.ಆದರೆ ಜನರ ನಡುವಿನ ಏಕತೆ ಕೋಮುವಾದಿ ಫ್ಯಾಸಿಸ್ಟ್ ಶಕ್ತಿಗಳಿಗೆ ಬೇಕಾಗಿಲ್ಲ. ಅದಕ್ಕಾಗಿ ಜನರನ್ನು ವಿಭಜಿಸಿ ದ್ವೇಷದ ದಳ್ಳುರಿ ಎಬ್ಬಿಸುವ ಮಸಲತ್ತುಗಳನ್ನು ಮಾಡುತ್ತಲೇ ಇರುತ್ತಾರೆ.

ನಾವೀಗ ಮಾತಾಡಬೇಕಾಗಿರುವವದು ಸಂಪತ್ತಿನ ಅಸಮಾನ ಹಂಚಿಕೆಯ ಬಗ್ಗೆ,ಭಾರತದ 135 ಕೋಟಿ ಜನರಿಗೆ ಸೇರಿದ ಸಂಪತ್ತನ್ನು ದೋಚಿದ ಅಂಬಾನಿ, ಅದಾನಿಯಂಥ ದಗಾಕೋರ ,ಕಾರ್ಪೊರೇಟ್ ಖದೀಮರ ಬಗ್ಗೆ. ಆದರೆ ತಮ್ಮ ಬಗ್ಗೆ ಜನ ಮಾತಾಡಬಾರದೆಂದು ಕೋಟ್ಯಂತರ ಹಣ ಚೆಲ್ಲಿ ಕೋಮುವಾದಿ ಸಂಘಟನೆಗಳನ್ನು ಅವರು ಸಾಕುತ್ತಾರೆ. ಅಧಿಕಾರದಲ್ಲಿ ತಮ್ಮವರನ್ನು ತಂದು ಕೂರಿಸುತ್ತಾರೆ. ಜನಸಾಮಾನ್ಯರು ಕೋಮು,ಜಾತಿ,ಬೇಲಿಗಳನ್ನು ದಾಟಿ,ಅಸಮಾನತೆ, ಅನ್ಯಾಯಗಳ ವಿರುದ್ಧ ಅಸ್ಪ್ರಶ್ಯತೆ, ಕಂದಾಚಾರಗಳ ವಿರುದ್ಧ ಧ್ವನಿಯೆತ್ತುವ ದಿನಗಳಿಗಾಗಿ ಕಾಯಬೇಕಾಗಿದೆ.

ಗದಗ

# ಪೇದೆ ಆತ್ಮಹತ್ಯೆಯ ಕಾರಣಕರ್ತರನ್ನು ಬಂಧಿಸಿಲ್ಲ ಏಕೆ?

ಮಾಧ್ಯಮದವರ ಕಿರುಕುಳ ಎಲ್ಲಿಯವರಿಗೆ ಬಂದಿದೆ ನೋಡಿ, ಇವರ ಕಿರುಕುಳದಿಂದ ಒಬ್ಬ ಪೇದೆ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ರಾಜ್ಯದ ನಂಬರ್ ಒನ್ ಎಂದು ಹೇಳಿಕೊಂಡು ಕಿರುಚಾಡುತ್ತಿರುವ ಆಂಕರ್‌ಗಳಿಗೆ ಇಂತ ಸುದ್ದಿಯನ್ನು ಕಿರುಚಿ ಹೇಳಲಾಗದೆ ಮರೆಮಾಚಿಕೊಳ್ಳುತ್ತಾರೆ ಎಂದರೆ ಅವರಿಗೆ ಇರುವ ನಿಯತ್ತಾದರೂ ಏನು? ಈ ದೇಶಕ್ಕೆ ಈ ರಾಜ್ಯಕ್ಕೆ ನ್ಯಾಯಕೊಡಿಸುತ್ತೇವೆ ನಾವು ಎಲ್ಲಿಯೂ ದಂಧೆ ಮಾಡುವುದಿಲ್ಲ ನಾವು ಪರಿಶುದ್ಧರು ಎಂದು ಪ್ರತಿ ದಿನ ಒಂಬತ್ತುಗಂಟೆಗೆ ಬೊಬ್ಬೊ ಒಡದುಕೊಳ್ಳುತ್ತಿರುವ ಇದು ನಿಮ್ಮ ಚಾನಲ್‌ನ ವರದಿಗಾರನ ಕಾಟಕ್ಕೆ ಒಬ್ಬ ಪೊಲೀಸ್ ಬಲಿಯಾಗುತ್ತಾನೆ ಎಂದರೆ ಇನ್ಯಾವ ನಿಯತ್ತು ನಿಮ್ಮದು? ಈಗಾಗಲೇ ಬೆಂಗಳೂರಿನಲ್ಲಿ ನಿಮ್ಮ ಚಾನಲ್‌ನಲ್ಲಿ ಮುಖ್ಯಸ್ಥನೊಬ್ಬ ವೈದ್ಯರೊಬ್ಬರ ಬ್ಲಾಕ್ ಮಾಡಲು ಹೋಗಿ ಕಂಬಿ ಎಣಿಸಿಬಂದಿದ್ದು ಇನ್ನೂ ಹಸಿರಾಗಿರುವಾಗಲೇ ಮತ್ತೆ ಒಂದು ಜೀವವನ್ನೇ ಬಲಿ ತಗೆದುಕೊಂಡಿದ್ದಾನೆ ಎಂದರೆ ಎಂತಾ ಪತ್ರಕರ್ತರನ್ನು ಸಾಕಿದ್ದೀರಾ ? ಸ್ವಾಮಿ..



ಗಿರೀಶ ಕುಲಕರ್ಣಿ

ಪಬ್ಲಿಕ್ ಟಿವಿ ವರದಿಗಾರ ಸೇರಿದಂತೆ ಕೆಲ ಪತ್ರಕರ್ತರ ಕಿರುಕುಳದಿಂದ ಬೆಟಗೇರಿ ಪೊಲೀಸ್ ಠಾಣೆಯ ಪೇದೆ ಡೆತ್‌ನೋಟ್ ಬರದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಅಂದರೆ ಆ ವ್ಯಕ್ತಿ ಈ ಪತ್ರಕರ್ತರು ಎಷ್ಟು ಕಿರುಕುಳ ಕೊಟ್ಟಿರ ಬೇಕು ಎಷ್ಟು ಹಣಕ್ಕೆ ಬೇಡಿಕೆ ಇಟ್ಟಿರಬೇಕು ಎನ್ನುವುದು ಈ ಆತ್ಮಹತ್ಯೆಯಿಂದಲೇ ಸಾಬೀತಾಗುತ್ತದೆ.

ವಿಶೇಷವೆಂದರೆ ತಮ್ಮ ಸಹೊದ್ಯೋಗಿಯೊಬ್ಬ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಡೆತ್ ನೋಟ್ ಬರದಿಟ್ಟಿದ್ದಾನೆ ಹೀಗಿದ್ದರೂ ಯಾಕೆ ಪಬ್ಲಿಕ್ ಟಿವಿ ಬೇರೆಯ ಸುದ್ದಿಯಂತೆ ಈ ಸುದ್ದಿಯನ್ನು ರೋಚಕವಾಗಿ ತೋರಿಸುವುದಿಲ್ಲ ಆ ಪೊಲೀಸ್ ಪೇದೆಗೆ ನ್ಯಾಯಕೊಡಿಸಿ.. ಇಲ್ಲ ಅಲ್ಲಿ ಪಬ್ಲಿಕ್ ಟಿವಿ ಹೆಸರು ಬಂದ ಕಾರಣ ಅದರ ಸುದ್ದಿಗೂ ಅವರು ಹೋಗುವುದಿಲ್ಲ ಇದು ನಿಯತ್ತಿನ ಪ್ರತಕರ್ತನ ನಿಜವಾದ ಬಣ್ಣ!



ಭೀಮನಗೌಡ ಪಾಟೀಲ್

ಇನ್ನೂ ಪೊಲೀಸರು ಈ ಆರೋಪಿಗಳನ್ನು ಯಾಕೆ ಬಂಧಿಸಿಲ್ಲ ಎನ್ನುವ ಪ್ರಶ್ನೆಗಳು ಈಗ ಎಲ್ಲೆಡೆ ಸಂಚರಿಸುತ್ತಿವೆ. ಪತ್ರಕರ್ತರನ್ನು ಕಾಪಾಡಲು ಇಲ್ಲದಸಬೂಬು ಹೇಳಿಕೊಳ್ಳುತ್ತಿರುವ ಪೊಲೀಸರು ನಾಪತ್ತೆಯಾಗಿದ್ದಾರೆ ಎನ್ನುತ್ತಾದ್ದಾರೆ, ಪಬ್ಲಿಕ್ ಟಿವಿ ವರದಿಗಾರ ಜಾಮೀನು ತಂದಿದ್ದಾನೆ ಹಾಗಾಗಿ ಆತನನ್ನು ಬಂಧಿಸಿಲ್ಲ ಎನ್ನುವ ಉತ್ತರ ಪೊಲೀಸರಿಂದ ಬರುತ್ತಿದೆ. ಒಬ್ಬ ಸಾಮನ್ಯ ಮನುಷ್ಯನಾಗಿದ್ದರೆ ಇಷ್ಟು ಹೊತ್ತಿಗೆ ಎಲ್ಲರನ್ನು ಬಂಧಿಸಿಡುತ್ತಿದ್ದ ಪೊಲೀಸರು ಈ ಪತ್ರಕರ್ತರನ್ನು ಕಾಪಾಡಲು ಏನೆಲ್ಲ ಕತೆಗಳನ್ನು ಎಣೆದಿದ್ದಾರೆ ನೋಡಿ.

**ಅಸಲಿಕತೆ ಏನು?**

ಬೆಟಗೇರಿ ಬಡಾವಣೆ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಲಕ್ಕುಂಡಿ ಗ್ರಾಮದ ಅಬ್ಬುಗೌಡ ಪಾಟೀಲ್ ಕಳೆದ ಒಂದು ವರ್ಷದ ಹಿಂದೆ ಹಣ ಡಬ್ಲಿಂಗ್ ಪ್ರಕರಣದಲ್ಲಿ ಆರೋಪಿಯೊಬ್ಬನನ್ನು ಬಂಧಿಸಲಾಗಿತ್ತು. ಆ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆ ಸಂದರ್ಭದಲ್ಲಿ ಆರೋಪಿಯ ಸಂಬಂಧಿಯೊಬ್ಬರ ಜೊತೆ ಈ ಪೇದೆ ಚಾಟಿಂಗ್ ಮಾಡುತ್ತಿದ್ದಾನೆಂಬ ಆರೋಪ ಕೇಳಿ ಬಂದಿತ್ತು. ಚಾಟಿಂಗ್ ಸಂದರ್ಭದಲ್ಲಿ ಅರೆಬರೆ ದೃಶ್ಯದ ವಿಡಿಯೋ ವೈರಲ್ ಆಗಿತ್ತು, ಈ ವೈರಲ್ ಆಗಿದ್ದನ್ನೇ ಬಂಡವಾಳ ಮಾಡಿಕೊಂಡ ಕೆಲವರು ಮೃತ ಪೇದೆಗೆ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದರು .

ಪಬ್ಲಿಕ್ ಟಿವಿ ವರದಿಗಾರ ಭೀಮನಗೌಡ ಪಾಟೀಲ್ ಇನ್ನೊಬ್ಬ ಪತ್ರಕರ್ತ ಗಿರೀಶ ಕುಲಕರ್ಣಿ ಹಾಗೂ ಪೊಲೀಸರು ಸೇರಿ ಕೆಲವರು ಈ ಪೇದೆಯಿಂದ ಪದೇ ಪದೇ ಹಣ ಪೀಕುತ್ತಿದ್ದರು ಹೆಚ್ಚಿಗೆ ಹಣದ ಡಿಮ್ಯಾಂಡ್ ಕೂಡ ಇಟ್ಟಿದ್ದರು ಒಂದು ವೇಳೆ ಹಣ ಕೊಡದೆ ಹೋದಲ್ಲಿ ಟಿವಿಯಲ್ಲಿ ಪ್ರಸಾರ ಮಾಡುವುದಾಗಿ ಬೆದರಿಕೆ ಕೂಡ ಹಾಕಿದ್ದರು.

ಇದನ್ನು ಮಾನಸಿಕವಾಗಿ ನೋವು ಅನುಭವಿಸುತ್ತಿದ್ದ ಈ ಪೇದೆ ಕೊನೆಗೆ ಮಾರ್ಚ್ 16 ರಂದುಮನೆಯಲ್ಲಿ ಯಾರು ಇಲ್ಲದ ವೇಳೆ ಆತ್ಮಹತ್ಯೆಗೆ ಶರಣಾಗಿದ್ದಾನೆ. ಹಾಗೆ ಆತ್ಮಹತ್ಯೆ ಮಾಡಿಕೊಂಡ ಈ ಪೇದೆ ಯಾರ್‍ಯಾರು ಹಿಂಸೆ ನೀಡುತ್ತಿದ್ದರು ಎನ್ನುವ ಹೆಸರನ್ನು ಬರೆದಿಟ್ಟು ಹೋಗಿದ್ದಾನೆ. ಆರಂಭದಲ್ಲಿ ಈ ಆತ್ಮಹತ್ಯೆಗೆ ಸಂಬಂಧಿಸಿದಂತೆ ಯಾರ ವಿರುದ್ಧವೂ ದೂರು ದಾಖಲಿಸಿಕೊಂಡಿದ್ದಿಲ್ಲ ಆ ನಂತರ ಪೊಲೀಸರು ಪತ್ರತರ್ಕರು ಸೇರಿದಂತೆ ಒಂಬತ್ತು ಜನರ ವಿರುದ್ಧ ದೂರು ದಾಖಲಿಸಿಕೊಂಡಿದ್ದಾರೆ. ಇದರಲ್ಲಿ ಮೊದಲನೆ ಆರೋಪಿ ಗಿರೀಶ್ ಕುಲಕರ್ಣಿಯಾದರೆ ನಾಲ್ಕನೆ ಆರೋಪಿ ಪಬ್ಲಿಕ್ ಟಿವಿ ವರದಿಗಾರ ಭೀಮನಗೌಡ ಪಾಟೀಲ್ ಆದರೆ ಇವರ‍್ಯಾರನ್ನು ಪೊಲೀಸರು ಬಂಧಿಸಲ್ಲ ಎನ್ನುವುದು ಮೂಲ ಪ್ರಶ್ನೆಯಾಗಿದೆ ಅವರೆಲ್ಲ ನಾಪತ್ತೆಯಾಗಿದ್ದಾರೆ ಎನ್ನುವ ಸಬೂಬು ಪೊಲೀಸರದ್ದು. ಪತ್ರಕರ್ತರಾದ ಗಿರೀಶ ಕುಲಕರ್ಣಿ, ಭೀಮನಗೌಡ ಪಾಟೀಲ್ ಸೇರಿದಂತೆ ಒಂಬತ್ತು ಜನರು ಕಿರುಕುಳ ನೀಡಿದ್ದಾರೆ. ಇವರ ಕಿರುಕುಳದಿಂದ ನನ್ನ ಮಗ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಮೃತನ ತಂದೆ ಗದಗ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ ನಂತರ ಪೊಲೀಸರು ಎಫ್‌ಐಆರ್ ದಾಖಲು ಮಾಡಿದ್ದಾರೆ. ಬಾಳಿ ಬೆಳಗಬೇಕಾದ ಪೊಲೀಸ್ ಪೇದೆಗೆ ಸಮಾಜಕ್ಕೆ ತಿದ್ದಿ ಹೇಳಬೇಕಾದ ಪತ್ರತರ್ಕರು ಪೊಲೀಸರೆ ಬ್ಲಾಕ್ ಮಾಡಿದರೆ ಹೇಗೆ. ಆದರೆ ಅನ್ಯಾಯವಾಗಿ ಒಂದು ಜೀವ ಬಲಿಯಾಗಿದೆ .ಇದು ಕೇವಲ ಒಂದು ಉದಾಹರಣೆ ಇಂತ ಹಲವಾರು ಪ್ರಕರಣಗಳು ರಾಜ್ಯಾದ್ಯಂತ ನಡೆಯುತ್ತಿವೆ ಕೆಲವು ಬಯಲಿಗೆ ಬರುತ್ತವೆ ಇನ್ನೂ ಕೆಲವು ಬಯಲಿಗೆ ಬರುವುದಿಲ್ಲ ಕೆಲವರು ಮರ್ಯಾದೆಗೆ ಅಂಜಿ ಇಂತ ಆತ್ಮಹತ್ಯೆಗಳನ್ನು ಮಾಡಿಕೊಳ್ಳುತ್ತಿದ್ದಾರೆ.



ಅಬ್ಬುಗೌಡ ಪಾಟೀಲ್

ಮೋದಿ ಪಂಚ ರಾಜ್ಯಗಳ ಚುನಾವಣಾ ಫಲಿತಾಂಶದ ನಂತರ ಬಿಜೆಪಿ ಪಾರ್ಲಿಮೆಂಟರಿ ಪಾರ್ಟಿ ಸಭೆ ನವದೆಹಲಿಯಲ್ಲಿ ನಡೆದಿತ್ತು. ಸಭೆಯನ್ನು ಉದ್ದೇಶಿಸಿ ಮಾತನಾಡಿದ್ದ ಪ್ರಧಾನಿ ಮೋದಿ, 'ಕುಟುಂಬ ರಾಜಕಾರಣಕ್ಕೆ ಇನ್ನು ಮುಂದೆ ಬಿಜೆಪಿಯಲ್ಲಿ ಅನುವು ಮಾಡಿಕೊಡುವುದಿಲ್ಲ' ಎಂದು ಸ್ಪಷ್ಟವಾಗಿ ಹೇಳಿದ್ದರು. "ಪಕ್ಷದಲ್ಲಿ ಕುಟುಂಬ ರಾಜಕಾರಣಕ್ಕೆ ಅವಕಾಶ ನೀಡುವುದಿಲ್ಲ. ಇತರ ಪಕ್ಷಗಳಲ್ಲಿನ ವಂಶಾಡಳಿತ ರಾಜಕಾರಣದ ವಿರುದ್ಧ ಹೋರಾಟ ನಡೆಸಬೇಕಿದೆ. ಹಾಗಾಗಿ, ಯಾರ ನಾಯಕರ ಮಕ್ಕಳಿಗೆ ಟಿಕೆಟ್ ನಿರಾಕರಿಸಿದರೆ ಅದಕ್ಕೆ ನಾನೇ ಹೊಣೆ ಹೊರುತ್ತೇನೆ"ಎಂದು ಮೋದಿ ಹೇಳಿದ್ದರು ಎಂದು ವರದಿಯಾಗಿದೆ. ಬಿಜೆಪಿ ವರಿಷ್ಠರ ಈ ನಿರ್ಧಾರ ಕುಟುಂಬ ರಾಜಕಾರಣವನ್ನು ನಂಬಿದವರಿಗೆ ದೊಡ್ಡ ಹೊಡೆತವನ್ನು ನೀಡಿದೆ. ಪ್ರಧಾನಿ ಹೇಳಿಕೆಯಿಂದ ಮುಂಬರುವ ಚುನಾವಣೆಗಳಲ್ಲಿ ತಮ್ಮತಮ್ಮ ಕುಟುಂಬದವರನ್ನು ಕಣಕ್ಕಿಳಿಸಬೇಕು ಎನ್ನುವ ಪ್ಲ್ಯಾನ್ ಮಾಡಿಕೊಂಡವರು ದಂಗಾಗಿದ್ದಾರೆ. ಯಾಕೆಂದರೆ, ಮುಂದಿನ ವರ್ಷ ನಡೆಯಲಿರುವ ಅಸೆಂಬ್ಲಿ ಚುನಾವಣೆಗೆ ಸ್ಪರ್ಧಿಸಲು ಹಲವರು ಈಗಾಗಲೇ ಪೂರ್ವ ತಯಾರಿಯನ್ನು ಆರಂಭಿಸಿದ್ದಾರೆ. ಪಂಚ ರಾಜ್ಯಗಳ ಅಸೆಂಬ್ಲಿ ಚುನಾವಣಾ ಯಶಸ್ಸಿನಿಂದ ಬಿಜೆಪಿ ಮುಂದಿನ ದಿನಗಳಲ್ಲಿ ಕುಟುಂಬ ರಾಜಕಾರಣಕ್ಕೆ ಸಂಪೂರ್ಣ ತಿಲಾಂಜಲಿ ಇಡುವ ಸಾಧ್ಯತೆಯಿದೆ. ಯುವ ಮುಖಗಳು ಮತ್ತು ಪಕ್ಷದ ನಿಷ್ಠಾವಂತ ಕಾರ್ಯಕರ್ತರಿಗೆ ಮಣೆ ಹಾಕಿದರೆ, ಪಕ್ಷ ಬೆಳೆಸುವಲ್ಲಿ ಇದು ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ ಎನ್ನುವ ಆಲೋಚನೆ ಬಿಜೆಪಿ ವರಿಷ್ಠರಿಗೆ ಇದೆ ಎಂದು ಹೇಳಲಾಗುತ್ತಿದೆ.

# ಬಿಜೆಪಿ ಅಧ್ಯಕ್ಷರ ಬದಲಾವಣೆಗೆ ಹೈ ಸಿದ್ಧತೆ

● ವರದಿಗಾರ

ರಾಜ್ಯ ರಾಜಕಾರಣದಲ್ಲಿ ಸಂಚಲನ ಉಂಟು ಮಾಡುವಂತ ಬೆಳವಣಿಗೆಗಳು ಶೀಘ್ರವೇ ನಡೆಯಲಿದೆ ಎನ್ನುವ ವದಂತಿಗಳು ರಾಜಕೀಯ ಪಡಸಾಲೆಂಯಲ್ಲಿ ಬಿರುಸಾಗಿ ಕೇಳಿ ಬರುತ್ತಿದೆಎ. ಮುಂದಿನ ವಿಧಾನಸಭೆಗೆ ಒಂದು ವರ್ಷ 2 ತಿಂಗಳು ಬಾಕಿ ಇರುವ ಹೊತ್ತಿನಲ್ಲಿಯೇ ಆಡಳಿತ ಪಕ್ಷ ಬಿಜೆಪಿ ಪಕ್ಷ ಮತ್ತು ಸರ್ಕಾರದ ಮಟ್ಟದಲ್ಲಿ ಅಮೂಲಾಗ್ರ ಬದಲಾವಣೆ ತರಲು ಚಿಂತನೆ ನಡೆಸಿದೆ ಪಂಚರಾಜ್ಯ ಚುನಾವಣೆಗಳಲ್ಲಿ ನಾಲ್ಕು ರಾಜ್ಯಗಳಲ್ಲಿ ಅಧಿಕಾರಕ್ಕೇರಿರುವುದರಿಂದ ಸಾಕಷ್ಟು ಉತ್ಸಾಹಗೊಂಡಿರುವ ಹೈಕಮಾಂಡ್ ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಹೇಗಾದರೂ ಮಾಡಿ ಅಧಿಕಾರಕ್ಕೆ ತರಲು ತಂತ್ರಗಳು ಹೆಣದಿದ್ದು ಅದರ ಫಲವೇ ಈ ಬದಲಾವಣೆ .

ಪಕ್ಷವನ್ನು ಇನ್ನಷ್ಟು ಬಲಗೊಳಿಸಿ ಜನರ ಬಳಿಗೆ ತಗೆದುಕೊಂಡು ಹೋಗುವುದು ಮತ್ತು ಸರ್ಕಾರವನ್ನು ಜನಪ್ರಿಯ ಗೊಳಿಸುವುದು ಹೈಕಮಾಂಡ್ ಮುಮದೆ ಇರುವ ಗುರಿ ಇದಕ್ಕಾಗಿ ಕೆಲವು ಅಗತ್ಯ ಬದಲಾವಣೆಗಳನ್ನು ಕೇಂದ್ರ ಗೃಹಸಚಿವ ಅಮಿತ್ ಶಾ ಮತ್ತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಡ್ಡಾ ಭಯಸಿದ್ದಾರೆ ಎನ್ನಲಾಗಿದೆ.



ಪಂಚ ರಾಜ್ಯಗಳ ಚುನಾವಣೆ ಬಿರುಸಿನ ಪ್ರಚಾರದಿಂದ ಬಿಡುವು ಮಾಡಿಕೊಂಡ ಈ ನಾಯಕರು ಈ ಬದಲಾವಣೆ ಸಂಬಂಧ ರಜ್ಯ ಬಿಜೆಪಿ ನಾಯಕರೊಂದಿಗೆ ತೆರೆಮರೆಯಲ್ಲಿ ಸತತ ಸಮಾಲೋಚನೆ ನಡೆಸಿದ್ದಾರೆ ಯಾವುದೂ ಇನ್ನೂ ಖಚಿತವಾಗದಿದ್ದರೂ ಸಹ ರಾಜಕೀಯ ಪಡಸಾಲೆಯಲ್ಲಿ ಕೇಳಿಬರುತ್ತಿರುವ ವದಂತಿಗಳನ್ನು ಆಧರಿಸಿ ಹೇಳುವುದಾದರೆ ಸಂಪುಟ ಪುನಾರಾಚನೆ ಮುಖ್ಯಮಂತ್ರಿಗಳ ಬದಲಾವಣೆ ಪಕ್ಷಕ್ಕೆ ಹೊಸ ಅಧ್ಯಕ್ಷರ ನೇಮಕ ಇವು ಹೈಕಮಾಂಡ್ ಮುಂದೆ ಇರುವ ಕಾರ್ಯಸೂಚಿಗಳು



ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರನ್ನು ಬದಲಾಯಿಸಲಾಗುತ್ತದೆ ಎಂಬ ವದಂತಿಗಳು ಕಳೆದ ಆರುತಿಂಗಳಲ್ಲೆ ಹುಟ್ಟಿಕೊಂಡು ತಣ್ಣಗಾಗಿತ್ತು ಈಗ ಅದಕ್ಕೆ ರೆಕ್ಕೆ ಪುಕ್ಕ ಬಂದಿದೆ. ಕಳೆದ ಆರೇಳು ತಿಂಗಳಲ್ಲಿ ಮುಖ್ಯಮಂತ್ರಿಯಾದ ಬೊಮ್ಮಾಯಿ ಯಾವುದೇ ವಿವಾದಗಳಿಲ್ಲದೆ ಹೆಜ್ಜೆ ಇಡುತ್ತಿದ್ದಾರೆ ಅದರೆ ಅರಿವು ಹೈಕಮಾಂಡ್‌ಗೆ ಇದು ಆದರೆ ಜನಸಮೂಯವನ್ನು ಆಕರ್ಷಿಸುವ ನಾಯಕತ್ವ ಅವರದ್ದಲ್ಲ ಅದ್ದರಿಂದ ಮುಖ್ಯಮಂತ್ರಿ ಸ್ಥಾನಕ್ಕೆ ಪ್ರಭಲ ಕೋಮಿನ ಮತ್ತು ಡೈನಾಮಿಕ್ ವ್ಯಕ್ತಿತ್ವದ ನಾಯಕರೊಬ್ಬರನ್ನು ತರುವುದು ಹೈಕಮಾಂಡ್ ಉದ್ದೇಶವಾಗಿದೆ. ಈ ಹಿನ್ನೆಲೆಯಲ್ಲಿ ಕೇಳಿಬರುತ್ತಿರುವ ಪ್ರಮುಖ ಹೆಸರೆಂದರೆ ಕೇಂದ್ರದ ಸಚಿವೆ ಹಾಗೂ ಹಿಂದಿನ ಬಿಜೆಪಿ ಸರ್ಕಾರದಲ್ಲಿ ಸಚಿವೆಯಾಗಿದ್ದ ಶೋಭಾಕರಂದ್ಲಾಜೆ ಪ್ರಭಲ ವಕ್ಕಲಿಗರ ಸಮುದಾಯಕ್ಕೆ ಸೇರಿದ ಶೋಭಾ ಸಂಘ ಪರಿವಾರದ ಬೆಂಬಲ ಹೊಂದಿದ್ದಾರೆ, ಇತ್ತೀಚಗೆ ನಡೆದ ಉತ್ತರ ಪ್ರದೇಶದ ಚುನಾವಣೆ ಉಸ್ತುವಾರಿಯನ್ನು ಹೈಕಮಾಂಡ್ ಅವರಿಗೆ ನೀಡಿತ್ತು




ಅದನ್ನು ಸಮರ್ಥವಾಗಿ ನಿಭಾಯಿಸಿದ ಹೆಗ್ಗಳಿಕೆಯೂ ಇದೆ ಈ ಅಂಶದ ಕಾರಣ ಹೈಕಮಾಂಡ್ ಅವರಿಗೆ ಸಿಎಂ ಪಟ್ಟ ಕಟ್ಟಲು ಮುಂದಾಗಿದೆ ಎನ್ನಲಾಗುತ್ತಿದೆ.

ಇನ್ನೊಂದು ಮೂಲದ ಪ್ರಕಾರ ಬಾಕಿ ಉಳಿದಿರುವ ಅಲ್ಪಾವದಿಗೆ ಯಾವುದೇ ಕಾರಣಕ್ಕೂ ಮುಖ್ಯಮಂತ್ರಿ ಸ್ಥಾನದಿಂದ ಬಸವರಾಜ್ ಬೊಮ್ಮಾಯಿ ಅವರನ್ನು ಬದಲಿಸುವುದಿಲ್ಲ ಅವರ ಅಧಿಕಾರವಧಿಯಲ್ಲಿ ಕೈಗೊಂಡ ಕೆಲವು ಪ್ರಮುಖ ಕ್ರಮಗಳು ಸಂಘ ಪರಿವಾರವನ್ನು ಮೆಚ್ಚಿಸಲು ಸಾಧ್ಯವಾಗಿದೆ ಬಿಜಾಪ್ ಪ್ರಕರಣ ನಿರ್ವಹಿಸಿದ ರೀತಿ ಗೋಹತ್ಯ ನಿಷೇಧ ಕಾಯ್ದೆ ಜಾರಿಗೆ ಮುಂದಾಗಿರುವುದು ಮುಂತಾದವು ಬೊಮ್ಮಾಯಿ ಬಗ್ಗೆ ಹೈಕಮಾಂಡ್ ಮತ್ತು ಸಂಘ ಪರಿವಾರದ ಮಟ್ಟದಲ್ಲಿ ಒಳ್ಳೆಯ ಅಭಿಪ್ರಾಯವನ್ನು ಮೂಡಿಸಿದೆ ಒಟ್ಟಾರೆಯಾಗಿ ಮುಂಬರುವ ಅಧಿಕಾರವಧಿಗೆ ಬೊಮ್ಮಾಯಿ ಅವರನ್ನೇ ಮುಂದುವರೆಸುವುದು ಹೊಸ ರೂಪ ಕೊಡುವುದು ಹೊಸ ಚಿಂತನೆಯಾಗಿದೆ.

## ಸಂಪುಟ ಪುನಾರಚನೆ

ವಿಧಾನ ಸಭೆ ಅಧಿವೇಶನಗಳು ಮುಗಿದ ಬಳಿಕ ಸಂಪುಟ ಪುನಾರಚನೆಯಾಗುವುದು ಬಹುತೇಕ ಖಚಿತವಾಗಿದೆ. ಕೆಲವು ಹಳಬರನ್ನು ಕೈಬಿಟ್ಟು ಹೊಸಬರನ್ನು ಸಂಪುಟಕ್ಕೆ ಸೇರಿಸಿಕೊಳ್ಳಲು ಹೈಕಮಾಂಡ್ ನಿರ್ಧರಿಸಿದೆ ಸಾಕಷ್ಟು ಅಧಿಕಾರದ ಫಲವನ್ನು ಕಂಡಿರುವ ಹಿರಿಯ ಸಚಿವರಿಗೆ ಪಕ್ಷ ಸಂಘಿಸುವ ಜವಾಬ್ದಾರಿ ನೀಡಿ ಹೊಸ ಯುವ ಮುಖಗಳಿಗೆ ಸಂಪುಟದಲ್ಲಿ ಅವಕಾಶ ನೀಡುವ ಮೂಲಕ ಸರ್ಕಾರಿ ಯಂತ್ರವನ್ನು ಚುರುಕುಗೊಳಿಸುವುದು ಇದರ ಹಿಂದಿನ ಉದ್ದೇಶ ಈ ಹಿನ್ನೆಲೆಯಲ್ಲಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಡ್ಡಾ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಜೊತೆ ಈಗಾಗಲೇ ಒಂದರೆಡು ಸುತ್ತಿನ ಮಾತುಕತೆ ನಡೆಸಿ ಅಂತಿಮ ತೀರ್ಮಾನಕ್ಕೂ ಬಂದಿದ್ದಾರೆ ಒಂದು ಮೂಲದ ಪ್ರಕಾರ ಯಾರನ್ನೂ ಸಂಪುಟಕ್ಕೆ ಸೇರಿಸಿಕೊಳ್ಳಬೇಕು





ಯಾರನ್ನು ಕೈಬಿಡಬೇಕು ಎಂಬ ಪಟ್ಟಿಯೂ ಸಿದ್ದವಾಗಿದೆ ಬಜೆಟ್ ಅಧಿವೇಶದ ನಂತರ ಈ ಕಸರತ್ತಿಗೆ ಚಾಲನೆ ಸಿಗಲಿಕದೆ.

ಅಮತ್ ಶಾ ಶೀಘ್ರವೇ ರಾಜ್ಯಕ್ಕೆ ಆಗಮಿಸಲಿದ್ದು ಪಕ್ಷದ ಬಲವರ್ಧನೆ ಕುರಿತು ಸಮಾಲೋಚನೆ ನಡೆಸಲಿದ್ದಾರೆ

## ಹೊಸ ನಾಯಕತ್ವ

ಇದರ ಜೊತೆಗೆ ಪಕ್ಷದಲ್ಲಿ ಸಾಕಷ್ಟು ಬದಲಾವಣೆ ಮಾಡಲು ಹೈಕಮಾಂಡ್ ತೀರ್ಮಾನಿಸಿದೆ ಅಧ್ಯಕ್ಷ ಸ್ಥಾನದಿಂದ ನವೀನ್ ಕುಮಾರ್ ಪ್ರಭಲ ನಾಯಕರನ್ನು ಅಲ್ಲಿ ಪ್ರತಿಷ್ಠಾಪಿಸಲು ಉದ್ದೇಶವಾಗಿದೆ. ಈ ಬಗ್ಗೆ ಈಗಾಗಲೇ ಹೈಕಮಾಂಡ್ ಪ್ರಮುಖ ಪಧಾಧಿಕಾರಿಗಳ ಜೊತೆ ನಿರಂತರ ಸಮಾಲೋಚನೆಯಲ್ಲಿ ತೊಡಗಿದ್ದಾರೆ ಅಧ್ಯಕ್ಷ ಸ್ಥಾನಕ್ಕೂ ಶೋಭಾ ಕರಂದ್ಲಾಜೆ ಜಗದೀಶ್ ಶೆಟ್ಟರ್ ಸಿ.ಟಿ.ರವಿ ಮುಂತಾದ ಹೆಸರುಗಳು ಪ್ರಸ್ತಾಪವಾಗುತ್ತಿವೆ. ಪ್ರಭಲ ಒಕ್ಕಲಿಗ ಮತ್ತು ಲಿಂಗಾಯಿತ ಸಮಾಜದ ಜೊತೆಗೆ ಹಿಂದುಳಿದ ವರ್ಗವನ್ನೇ ಸೇರಿಸಿಕೊಂಡು ಸಾಮೂಹಿಕ ನಾಯಕತ್ವದ ಮೂಲಕ ಮುಂದಿನ ಚುನಾವಣೆಗೆ ಸಕಲ ಸಿದ್ದತೆ ಮಾಡಿಕೊಳ್ಳುತ್ತಿರುವ ಬಿಜೆಪಿ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಪ್ರಭಾವವನ್ನು ಸಮರ್ಥವಾಗಿ ಬಸಳಿಸಕೊಂಡರೆ ಅಧಿಕಾರದ ಗದ್ದುಗೆಗೆ ಹೇರುವುದು ಸುಲಭ ಎಂಬ ಚಿಂತನೆಯಲ್ಲಿದೆ.

## ಕುಟುಂಬ ರಾಜಕಾರಣಕ್ಕೆಬ್ರೇಕ್

ಪದೇ ಪದೇ ಕುಟುಂಬ ರಾಜಕಾರಣದ ಬಗ್ಗೆ ಟೀಕಿಸುತ್ತಿರುವ ಮೋದಿ ಈಗ ಪಕ್ಷದಲ್ಲಿ ಕುಟುಂಬ ರಾಜಾಕಾರಣಕ್ಕೆ ಬ್ರೇಕ್ ಹಾಕಲು ಆಜ್ಞೆ ಮಾಡಿದ್ದಾರೆ. ರಾಜ್ಯ ಬಹುತೇಕ ನಾಯಕರು ತಮ್ಮ ಮಕ್ಕಳು ಮೊಮ್ಮಕ್ಕಳನ್ನು ಚುನಾವಣೆಗೆ ನಿಲ್ಲಿಸುವ ಮೂಲಕ ಕುಟುಂಬ ರಾಜಕಾರಣದ ಬಳ್ಳಿ ಬೆಳೆಯುತ್ತಲೇ ಇದೆ ಹೀಗಾಗಿ ಮೋದಿ ಈ ಬಳ್ಳಿಗಳನ್ನು ಕತ್ತರಿಸಲು ಮುಂದಾಗಿದ್ದಾರೆ

ಮುಂದಿನ ಚುನಾವಣೆಯಲ್ಲಿ ಯಾವುದೇ ಕಾರಣಕ್ಕೂ ಕುಟುಂಬದವರಿಗೆ ಟಿಕೆಟ್ ನೀಡದಿರಲು ಆಜ್ಞೆಯನ್ನು ಮಾಡಿದ್ದಾರೆ ಎಂದು ಹೇಳಲಾಗಿದೆ ಹೀಗಾಗಿ ಈಗ ಬಹುತೇಕ ನಾಯಕರಿಗೆ ಒಂದು ರೀತಿ ಭ್ರಮನಿರಸರಾಗಿದ್ದಾರೆ ಎಂದು ಹೇಳಲಾಗಿದೆ.

ರಾಜ್ಯದಲ್ಲಿ ಸದ್ಯ ಕುಟುಂಬ ರಾಜಕೀಯದ ವಿಚಾರಕ್ಕೆ ಬಂದಾಗ ಯಡಿಯೂರಪ್ಪನವರು ಮಂಚೂಣಿಯಲ್ಲಿ ನಿಲ್ಲುತ್ತಾರೆ. ಅವರ ಇಬ್ಬರು ಪುತ್ರರಲ್ಲಿ ಒಬ್ಬರು ಸಂಸದರು, ಇನ್ನೊಬ್ಬರು ರಾಜ್ಯ ಉಪಾಧ್ಯಕ್ಷರು. ಇನ್ನು, ಜಗದೀಶ್ ಶೆಟ್ಟರ್ ಕುಟುಂಬವೂ ಹಾಗೇ. ಉಮೇಶ್ ಜಾಧವ್ ಸಂಸದರು, ಅವರ ಪುತ್ರ ಶಾಸಕರು. ಶಶಿಕಲಾ ಜೊಲ್ಲೆ ಸಚಿವೆಯಾಗಿದ್ದರೆ, ಅವರ ಪತಿ ಸಂಸದರು.



ಇನ್ನು, ಈಶ್ವರಪ್ಪನವರ ಪುತ್ರ ಜಿಲ್ಲಾ ಪಂಚಾಯತಿ ಸದಸ್ಯರಾಗಿದ್ದಾರೆ. ಇನ್ನು, ಜಾರಕಿಹೊಳಿ ಕುಟುಂಬದ ನಾಲ್ವರು ಶಾಸಕರಾಗಿದ್ದಾರೆ. ಈಗ, ಈ ಕುಟುಂಬ ರಾಜಕಾರಣಕ್ಕೆ ಬಿಜೆಪಿ ಈಗ ಬ್ರೇಕ್ ಹಾಕಲು ಹೊರಟಿದೆ.

ನಾಯಕರ ಮಕ್ಕಳಿಗೆ ಟಿಕೆಟ್ ನಿರಾಕರಿಸಿದರೆ ಅದಕ್ಕೆ ನಾನೇ ಹೊಣೆ, ಮೋದಿ







ಪಂಚ ರಾಜ್ಯಗಳ ಚುನಾವಣಾ ಫಲಿತಾಂಶದ ನಂತರ ಬಿಜೆಪಿ ಪಾರ್ಲಿಮೆಂಟರಿ ಪಾರ್ಟಿ ಸಭೆ ನವದೆಹಲಿಯಲ್ಲಿ ನಡೆದಿತ್ತು. ಸಭೆಯನ್ನು ಉದ್ದೇಶಿಸಿ ಮಾತನಾಡಿದ್ದ ಪ್ರಧಾನಿ ಮೋದಿ, ಕುಟುಂಬ ರಾಜಕಾರಣಕ್ಕೆ ಇನ್ನು ಮುಂದೆ ಬಿಜೆಪಿಯಲ್ಲಿ ಅನುವು ಮಾಡಿಕೊಡುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದರು. "ಪಕ್ಷದಲ್ಲಿ ಕುಟುಂಬ ರಾಜಕಾರಣಕ್ಕೆ ಅವಕಾಶ ನೀಡುವುದಿಲ್ಲ. ಇತರ ಪಕ್ಷಗಳಲ್ಲಿನ ವಂಶಾಡಳಿತ ರಾಜಕಾರಣದ ವಿರುದ್ಧ ಹೋರಾಟ ನಡೆಸಬೇಕಿದೆ. ಹಾಗಾಗಿ, ಯಾರ ನಾಯಕರ ಮಕ್ಕಳಿಗೆ ಟಿಕೆಟ್ ನಿರಾಕರಿಸಿದರೆ ಅದಕ್ಕೆ ನಾನೇ ಹೊಣೆ ಹೊರುತ್ತೇನೆ"ಎಂದು ಮೋದಿ ಹೇಳಿದ್ದರು ಎಂದು ವರದಿಯಾಗಿದೆ.

ಬಿಜೆಪಿ ವರಿಷ್ಠರ ಈ ನಿರ್ಧಾರ ಕುಟುಂಬ ರಾಜಕಾರಣವನ್ನು ನಂಬಿದವರಿಗೆ ದೊಡ್ಡ ಹೊಡೆತವನ್ನು ನೀಡಿದೆ. ಪ್ರಧಾನಿ ಹೇಳಿಕೆಯಿಂದ ಮುಂಬರುವ ಚುನಾವಣೆಗಳಲ್ಲಿ ತಮ್ಮತಮ್ಮ ಕುಟುಂಬದವರನ್ನು ಕಣಕ್ಕಿಳಿಸಬೇಕು ಎನ್ನುವ ಪ್ಲ್ಯಾನ್ ಮಾಡಿಕೊಂಡವರು ದಂಗಾಗಿದ್ದಾರೆ. ಯಾಕೆಂದರೆ, ಮುಂದಿನ ವರ್ಷ ನಡೆಯಲಿರುವ ಅಸೆಂಬ್ಲಿ ಚುನಾವಣೆಗೆ ಸ್ಪರ್ಧಿಸಲು ಹಲವರು ಈಗಾಗಲೇ ಪೂರ್ವ ತಯಾರಿಯನ್ನು ಆರಂಭಿಸಿದ್ದಾರೆ.

ಪಂಚ ರಾಜ್ಯಗಳ ಅಸೆಂಬ್ಲಿ ಚುನಾವಣಾ ಯಶಸ್ಸಿನಿಂದ ಬಿಜೆಪಿ ಮುಂದಿನ ದಿನಗಳಲ್ಲಿ ಕುಟುಂಬ ರಾಜಕಾರಣಕ್ಕೆ ಸಂಪೂರ್ಣ ತಿಲಾಂಜಲಿ ಇಡುವ ಸಾಧ್ಯತೆಯಿದೆ. ಯುವ ಮುಖಗಳು ಮತ್ತು ಪಕ್ಷದ ನಿಷ್ಠಾವಂತ ಕಾರ್ಯಕರ್ತರಿಗೆ ಮಣೆ ಹಾಕಿದರೆ, ಪಕ್ಷ ಬೆಳೆಸುವಲ್ಲಿ ಇದು ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ ಎನ್ನುವ ಆಲೋಚನೆ ಬಿಜೆಪಿ ವರಿಷ್ಠರಿಗೆ ಇದೆ ಎಂದು ಹೇಳಲಾಗುತ್ತಿದೆ.

# ಭಾರತೀಯರ ಪ್ರಾಣ ಹಿಂಡುತ್ತಿರುವ ಲೈಂಗಿಕ ಸುಲಿಗೆಯೆಂಬ ಬ್ಲ್ಯಾಕ್‌ಮೇಲ್ ಬಿಸಿನೆಸ್!

● ಪರಶಿವ ಧನಗೂರು

ಭಾರತದಲ್ಲಿ ಈಗ ಸದ್ದಿಲ್ಲದೆ ದುಡ್ಡುಮಾಡುತ್ತಿರುವ ಸೆಕ್ಸ್ ಟಾರ್ಶನ್ ಮಾಫಿಯಾ ಹಲವಾರು ಅಮಾಯಕರ ಪ್ರಾಣ ಬಲಿಪಡೆದುಕೊಂಡು ತನಿಖಾ ಸಂಸ್ಥೆಗಳಿಗೆ ತಲೆನೋವಾಗಿ ಪರಿಣಮಿಸಿದೆ!

ಲೈಂಗಿಕತೆಯ ಕೆಟ್ಟ ಕುತೂಹಲಕ್ಕೆ ಬಾಯಿ ತೆರೆದಿರುವ ವ್ಯಕ್ತಿಗಳು, ಒಂಟಿ ಬದುಕಿಗೆ ಬೇಸತ್ತು ಲೈಂಗಿಕ ಏಕತಾನತೆ ನೀಗಿಸಿಕೊಳ್ಳಲು ಅಡ್ಡದಾರಿ ಹಿಡಿಯುವ ಯುವಕರು-ಮಧ್ಯವಯಸ್ಕರು ಲೈಂಗಿಕ ಸುಲಿಗೆಯೆಂಬ ಸೆಕ್ಸ್ ಟಾರ್ಶನ್ ಮಾಫಿಯಾಕ್ಕೆ ಬಲಿಯಾಗಿ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ!

ಮೊಬೈಲ್ ಬಳಸುತ್ತಿರುವ, ಸಾಮಾಜಿಕ ಜಾಲತಾಣದಲ್ಲಿ ಸಕ್ರಿಯರಾಗಿರುವ ಪುರುಷರು, ಮಹಿಳೆಯರು ಇಬ್ಬರೂ ಎಚ್ಚರವಾಗಿರಬೇಕಾದ ಕಾಲ..!

ಕೋಲಾರದ ಡೆಪ್ಯೂಟಿ ತಹಸೀಲ್ದಾರ್ ಗೌತಮ್ ಎಂಬುವರನ್ನು ಹನಿಟ್ರಾಪ್ ಖೆಡ್ಡಾಕ್ಕೆ ಕೆಡವಿ 25 ಲಕ್ಷರೂಪಾಯಿ ಹಣಕ್ಕಾಗಿ ಬ್ಲಾಕ್ ಮೇಲ್ ಮಾಡುತ್ತಿದ್ದ ಕೊಡಿಗೇಹಳ್ಳಿ ಗಣಪತಿ ನಾಯಕ್, ಕಿಶನ್, ರಾಮೇಗೌಡ ಎಂಬ ಮೂವರನ್ನು ಬಂಧಿಸಿರುವ ಕೆ.ಆರ್.ಪುರಂ ಠಾಣೆಯ ಪೊಲೀಸರು ಗದಗ ಮೂಲದ ನಿಖಿತಾ ಎಂಬಾಕೆಯ ಬಂಧನಕ್ಕಾಗಿ ಬಲೆ ಬೀಸಿದ್ದಾರೆ. ಉಪ ತಹಸೀಲ್ದಾರ್ ಮೊಬೈಲ್ ನಂಬರ್ ಪಡೆದು ಚಾಟಿಂಗ್ ಮಾಡುತ್ತಲೇ ಬಲೆಗೆ ಬೀಳಿಸಿಕೊಂಡಿದ್ದ ನಿಖಿತಾ ಗೌತಮ್ ನನ್ನು ಹೋಟೆಲ್ ಗೆ ಕರೆದು, ಜ್ಯೂಸ್ ನಲ್ಲಿ ಮತ್ತು ಬರಿಸುವ ಔಷಧಿ ಬೆರೆಸಿ ಬೆತ್ತಲೆ ಮಾಡಿ ತನ್ನಜೊತೆಗೆ ಮಲಗಿಸಿಕೊಂಡು, ವೀಡಿಯೋ ಮಾಡಿಕೊಂಡು 25 ಲಕ್ಷಕ್ಕೆ ಬ್ಲಾಕ್ ಮೇಲ್ ಮಾಡುತ್ತಿ ತಂಡದ ಹಿಂದೆ ಇದ್ದಳು!





## ಲೈಂಗಿಕ ಸುಲಿಗೆ ಎಂಬ ಬಿಸಿನೆಸ್

ಲೈಂಗಿಕ ಸುಲಿಗೆ! ಈಗ ಎಲ್ಲಾಕಡೆ ತಲೆಎತ್ತಿರುವ ಹೊಸ ಬಿಸಿನೆಸ್! ಸೆಕ್ಸ್ ಟಾರ್ಶನ್ ಮಾಫಿಯಾ ಸದ್ದಿಲ್ಲದೆ ದುಡ್ಡು ಮಾಡುತ್ತಿದೆ! ಪ್ರಾಣಗಳನ್ನೂ ತೆಗೆಯುತ್ತಿದೆ! ಸೆಕ್ಸ್ ಟ್ರಾಪ್ ಗಳಿಂದ ಮಾನ ಮರ್ಯಾದೆಗೆ ಅಂಜಿ ಹಲವಾರು ಜನರು ಆತ್ಮಹತ್ಯೆ ಮಾಡಿಕೊಂಡು ಉಸಿರುಚೆಲ್ಲುತ್ತಿದ್ದಾರೆ. ಇತ್ತೀಚೆಗಂತೂ ಇಂತಹ ಘಟನೆಗಳು ಸಾಮಾನ್ಯವಾಗುತ್ತಿವೆ. ಕಳೆದ ಜನವರಿಯಲ್ಲಿ ಬೆಂಗಳೂರಿನ ಮಲ್ಲೇಶ್ವರಂ ಬಳಿ ಯ ರೈಲ್ವೆ ಹಳಿ ಮೇಲೆ ತಲೆಯಿಟ್ಟು ಮಲಗಿ ಆತ್ಮ ಹತ್ಯೆ ಮಾಡಿಕೊಂಡ 24 ವರ್ಷದ ಇಂಜಿನಿಯರಿಂಗ್ ವಿದ್ಯಾರ್ಥಿಯೂ ಕೂಡ ಈ ಲೈಂಗಿಕ ಸುಲಿಗೆಯ ಬಲಿಪಶು. ಭೂಪಾಲ್ ನಲ್ಲಿ ಕುಳಿತು ಹುಡುಗಿಯ ವೇಷದಲ್ಲಿ ಚಾಟ್ ಮಾಡಿ ಡಾಕ್ಟರ್ ಒಬ್ಬನನ್ನು ಬಟ್ಟೆ ಬಿಚ್ಚಿಸಿ ವೀಡಿಯೋ ಮಾಡಿಕೊಂಡಿದ್ದ ಸೈಬರ್ ಸುಲಿಗೆಕೋರರ ಸೆಕ್ಸ್ ಟಾರ್ಶನ್ ಕಿರುಕುಳಕ್ಕೆ ಒಳಗಾಗಿ 2021ರ ಆಗಸ್ಟ್ ನಲ್ಲಿ ಕೆಂಗೇರಿ ಹೆಜ್ಜಾಲದಲ್ಲಿ ರೈಲಿಗೆ ತಲೆ ಕೊಟ್ಟು ವೈದ್ಯರೂಬ್ಬರು ಪ್ರಾಣ ಬಿಟ್ಟಿದ್ದರು! ಎಂಬಿಎ, ಇಂಜಿನಿಯರಿಂಗ್ ಪದವಿದರರು, ವೈದ್ಯಕೀಯ ವಿದ್ಯಾರ್ಥಿಗಳು ಸರ್ಕಾರಿ ನೌಕರರು, ಬಿಸಿನೆಸ್ ಮ್ಯಾನ್ ಗಳು ಕೂಡ 2006 ರಿಂದೀಚೆಗೆ ಈ ಲೈಂಗಿಕ ಸುಲಿಗೆಯ ಮಾಫಿಯಾಕ್ಕೆ ಸಿಕ್ಕು ಪ್ರಾಣ ಬಿಟ್ಟಿದ್ದಾರೆ. ಮನೆತನದ ಗೌರವಕ್ಕೆ ಹೆದರಿ, ವೈಯಕ್ತಿಕ ಮರ್ಯಾದೆಗೆ ಅಂಜಿ ಪ್ರಾರಂಭದಲ್ಲಿ ಲಕ್ಷಾಂತರ ರೂಪಾಯಿ ಹಣ ನೀಡಿದ್ದರೂ, ಮತ್ತೆ ಮತ್ತೆ ಹಣದಾಸೆಗೆ ಸೆಕ್ಸ್ ಟ್ರಾಪರ್ ಗಳು ಕೊಡುವ ಮಾನಸಿಕ ಕಿರುಕುಳಕ್ಕೆ ಬೇಸತ್ತು ಆತ್ಮಹತ್ಯೆಯ ದಾರಿ ಹಿಡಿಯುತ್ತಾರೆ.



ಇತ್ತೀಚೆಗೆ ನಡೆಯುತ್ತಿರುವ ನಿಗೂಢ ಆತ್ಮಹತ್ಯೆಗಳಲ್ಲಿ ಬಹುಪಾಲು ಈ ಸೆಕ್ಸ್ ಟಾರ್ಶನ್ ಪ್ರಕರಣಗಳಿಗೆ ತಳುಕುಹಾಕಿಕೊಂಡಿವೆ. ಮಾನ ಮರ್ಯಾದೆಗೆದರಿ ನೂರಾರು ಪ್ರಕರಣಗಳು ನಿಗೂಢವಾಗಿಯೇ ಮುಚ್ಚಿ ಹೋಗುತ್ತಿವೆ. ಹಾಗೆ ಲೈಂಗಿಕ ಸುಲಿಗೆಯ ಮಾಫಿಯಾಕ್ಕೆ ಬಲಿಯಾಗಿ ಹಣ ಕಳೆದುಕೊಳ್ಳುತ್ತಿರುವವರು, ಪ್ರಾಣ ಕಳೆದುಕೊಳ್ಳುತ್ತಿರುವವರು ಹೆಚ್ಚಿನವರು ಯುವಜನರೆ ಎಂಬುದು ಮಾತ್ರ ಅತ್ಯಂತ ಕಳವಳಕಾರಿಯಾದ ಸಂಗತಿಯಾಗಿದೆ.

## ಅಪರಿಚಿತರಿಂದ ದೂರವೇ ಇರಿ

ದೇಶದ ಭವಿಷ್ಯದ ದೃಷ್ಟಿಯಿಂದ ಇದು ಆತಂಕಕಾರಿ ಬೆಳವಣಿಗೆಯಾಗಿದೆ. 'ಸಾಮಾಜಿಕ ಜಾಲತಾಣಗಳಲ್ಲಿ ಅಪರಿಚಿತರು ನೀಡುವ ಆಹ್ವಾನ ಗಳಿಂದ ಆದಷ್ಟು ದೂರವೇ ಇರಿ. ಆತ್ಮಹತ್ಯೆ ಮಾಡಿಕೊಳ್ಳಬೇಕಿನಿಸುವ ಪರಿಸ್ಥಿತಿಯೇ ಎದುರಾದರೇ ಮೊದಲು ಸೈಬರ್ ಕ್ರೈಂ ಪೊಲೀಸರಿಗೆ ದೂರು ನೀಡಿ. ಮಾನಸಿಕ ವೈದ್ಯರ ಸಲಹೆ-ಸಮಾಲೋಚನೆ ಪಡೆಯಿರಿ' ಎಂದು ಮನೋವೈದ್ಯಕೀಯ ತಜ್ಞರು ಸಾರ್ವಜನಿಕರಿಗೆ ಎಚ್ಚರಿಸುತ್ತಿದ್ದಾರೆ. ಆದರೂ ನಮ್ಮ ಮೂರ್ಖ ಜನರು ಮೈಮರೆತು ಮತ್ತೆ ಮತ್ತೆ ಶ್ರಂಗಾರದೆಸರಲ್ಲಿ ಸುಲಿಗೆಗೆ ಇಳಿದಿರುವ ಸೆಕ್ಸ್ ಟಾರ್ಶನ್ ಮಾಫಿಯಾ ಜಾಲದ ಬಲೆಗೆ ಬೀಳುತ್ತಲೇ ಇದ್ದಾರೆ.

ಭಾರತದಲ್ಲಿ ಈಗ ಹುಡುಗಿಯರ ಮುಖವಾಡ ಧರಿಸಿ, ಹುಡುಗಿಯರನ್ನೇ ಬಳಸಿಕೊಂಡು ನಿಮ್ಮನ್ನು ಯಾಮಾರಿಸಿ-ವಂಚಿಸಿ ದೋಚಲು 'ಬೆತ್ತಲೆ ಗ್ಯಾಂಗ್'ಗಳು ಸಕ್ರಿಯವಾಗಿವೆ! ಫೇಸ್ಬುಕ್ನಲ್ಲಿ, ಇನ್ಸ್ಟಾಗ್ರಾಂನಲ್ಲಿ ಗಾಳಹಾಕಿ ನಿಮ್ಮನ್ನು ಖೆಡ್ಡಾಕ್ಕೆ ಕೆಡವಲು ಕಾದು ಕುಳಿತಿರುವ ದಂಧೆಕೋರರು, ಆನ್ ಲೈನ್ ವೆಬ್ಸೈಟ್ ಗಳ ಮೂಲಕ ಆಯುರ್ವೇದಿಕ್ ಮಸಾಜ್ ಹೆಸರಿನಲ್ಲೂ, ಆರೋಗ್ಯಕ್ಕೆ ಒಳ್ಳೆಯದ್ದಾಗುವ ಅಪ್ಲಿಕೇಶನ್ ಆಫರ್ ಗಳ ಜಾಲದ ಬಲೆಬೀಸಿ ಸೆಳೆಯುತ್ತಿದ್ದಾರೆ! ಈ ಅಂತರ್ಜಾಲದ ಅಂತರ್ ರಾಜ್ಯ ಡಕಾಯಿತರ ಗುರಿ ಹಣವೊಂದೆ. ಹಣ ಮಾಡಲು ಈ ಲೈಂಗಿಕ ಸುಲಿಗೆಯ ಕಳ್ಳವಂಚಕರು ಈಗ ಎಲ್ಲಾಕಡೆ ನುಸುಳಿದ್ದಾರೆ. ಸೂಪರ್ ಸ್ಪೆಷಾಲಿಟಿ ಸ್ಪೈ ಕ್ಯಾಮೆರಾ ಗಳ ರೀತಿ ರೆಸಾರ್ಟ್, ಲಾಡ್ಜುಗಳಲ್ಲಿ ಹಿಡನ್ ಕ್ಯಾಮೆರಾ ಗಳನ್ನು ಬಚ್ಚಿಟ್ಟು ಹನಿಟ್ರಾಪ್ ಮಾಡೀ, ಅಂತರ್ಜಾಲದಲ್ಲೂ ಅವಿತುಕೊಂಡು, ನಾನಾ ಮುಖವಾಡ-ವೇಶಗಳನ್ನು ಧರಿಸಿ ಹುಡುಗಿಯರಂತೆ ಸೆಕ್ಸ್ ಚಾಟ್ ಮಾಡಿ, ಮಾನಸಿಕವಾಗಿ ಉದ್ರೇಕಿಸಿ ನಿಮ್ಮನ್ನು ಬೆತ್ತಲಾಗಿಸಿ ವೀಡಿಯೋ ಚಿತ್ರೀಕರಣ ಮಾಡಿಟ್ಟುಕೊಂಡು ವಂಚಿಸುವ ಲೈಂಗಿಕ ಸುಲಿಗೆಯ ಮಾಫಿಯಾ ಜಾಲಗಳು ದೇಶದೆಲ್ಲೆಡೆ ಈಗ ಸಕ್ರಿಯವಾಗಿವೆ. ಈ ಸೈಬರ್ ಯುಗದ ಆನ್ ಲೈನ್ ಸುಲಿಗೆಕೋರರು ಸುಂದರ ಯುವತಿಯರ ಮುಖಚಿತ್ರವಿರುವ ಫೋಟೋ ಗಳನ್ನು ಕದ್ದು ನಕಲೀ ಫೇಸ್ಬುಕ್ನಲ್ಲಿ, ಇನ್ಸ್ಟಾಗ್ರಾಂ ಖಾತೆಗಳಲ್ಲಿ ಹಾಕಿ ಚೆಂದದ ಹುಡುಗಿ ಹೆಸರು ಬರೆದು ಅಕೌಂಟ್ ತೆರೆದು, ನಂತರ ರಾಜಕಾರಣಿಗಳು, ಉದ್ಯಮಿಗಳು, ಸಿನಿಮಾ ನಟರು, ವಿವಿಧ ಕ್ಷೇತ್ರಗಳಲ್ಲಿನ ಸಾರ್ವಜನಿಕರನ್ನೂ ಫೇಸ್ಬುಕ್ನಲ್ಲಿ ಗುರುತಿಸಿ ಫ್ರೆಂಡ್ಸ್ ರಿಕ್ವೆಸ್ಟ್ ಕಳುಹಿಸಿ, ಸ್ನೇಹ ಸಂಪಾದಿಸುತ್ತಾರೆ!

ಅಸಲೀ ಆಟ ಆಗಲೇ ಸುರುವಾಗುವುದು. ಸುಂದರ ಯುವತಿಯರ ಫೋಟೋ ಫ್ರೇಮಿಗೆ ಮನಸೋತು ಅಪರಿಚಿತ ಯುವತಿಯ ಫ್ರೆಂಡ್ಸ್ ರಿಕ್ವೆಸ್ಟ್ ಅಕ್ಸೆಪ್ಟ್ ಮಾಡುವ ಗಂಡಸರಿಗೆ ಅ ನಕಲಿ ಯುವತಿ ಕಡೆಯಿಂದ ಇದ್ದಕ್ಕಿದ್ದಂತೆ ಮೆಸ್ಸೆಂಜರ್ ನಲ್ಲಿ ಸೆಕ್ಸ್ ಚಾಟಿಂಗ್ ಸುರಿಮಳೆಯಾದರೆ ಇತ್ತ ಪುರುಷರ ಪಾಡು ಏನಾಗಿರಬೇಡ! ಸಲುಗೆಯಿಂದಲೇ ಚಾಟ್ ಮಾಡುತ್ತಾ , ಅಶ್ಲೀಲ ಚಿತ್ರಗಳನ್ನು ಕಳುಹಿಸುತ್ತಾ, ಪೋಲಿ ಮೆಸೇಜುಗಳ ಗಾಳಹಾಕಿ ನಿಮ್ಮನ್ನು ಖೆಡ್ಡಾಕ್ಕೆ ಬೀಳಿಸಿದ ಬಳಿಕ ಇದ್ದಕ್ಕಿದ್ದಂತೆ ರಾತ್ರೋರಾತ್ರಿ ನಿಮ್ಮ ಮೋಬೈಲಿಗೇ ವೀಡಿಯೋ ಕಾಲಿಂಗ್ ಬರುತ್ತದೆ! ನೀವೂ ಕಾಲ್ ರಿಸೀವ್ ಮಾಡುತ್ತೀರಿ. ನಿಮ್ಮ ಮೊಬೈಲ್ ಒಳಗಡೆ ಬೆತ್ತಲೆ ಹುಡುಗಿ!

ಸಹಜ ಲೈಂಗಿಕತೆ ಬಗ್ಗೆ, ನೈತಿಕ ಮೌಲ್ಯ ಗಳ ಬಗ್ಗ
ಇರುವುದರಿಂದ, ಭಾರತೀಯ ಸಮಾಜದಲ್ಲಿ ಇರು
ಕಟ್ಟುಪಾಡು ನೀತಿಗಳಿಂದ,ಗೊಂದಲಗಳಿಂದ, ಲೈ
ಸಾಧ್ಯವಾಗುತ್ತಿದೆ. 70 ಕೋಟಿಗೂ ಹೆಚ್ಚಿರುವ ಮೊಬ
ಟಾರ್ಶನ್ ಮಾಫಿಯಾಕ್ಕೆ ವರದಾನವಾಗಿದೆ. ಸರಿ
ಅಮಾಯಕರು ಸ್ಕ್ರೀನ್ ರೆಕಾರ್ಡಿಂಗ್ ಅಪ್ಲಿಕೇಶನ್ಗ
ಹ್ಯಾಕರ್ಸ್ ಗಳ ತಂತ್ರ ಗಳಿಗೆ ಬಲಿಯಾಗಿ ನೇಕೆಡ್
ಬಾರಿ ಬ್ಲಾಕ್ ಮೇಲ್ ಬಲಿಪಶುಗಳಾಗಿದ್ದಾರೆ! ಫೋಟ
ಢೀಪ್-ಫೇಕ್ ತಂತ್ರಜ್ಞಾನಗಳನ್ನು ಬಳಸಿಕೊಂಡು ಅ
ಸ್ರಷ್ಟಿಸಬಹುದೆನ್ನುವುದು ಎಷ್ಟೋ ಜನರಿಗೆ ಇನ್ನೂ ತಿಳಿದ
ಇಂತಹ ಅತ್ಯಾಧುನಿಕ ತಂತ್ರಜ್ಞಾನ ಮಾರ್ಫಿಂಗ್ ವೀ
ಮಾಫಿಯಾ ಕಾರ್ಯಾಚರಣೆ ನಡೆಸುತ್ತಿದೆ! ಆದಕಾರಣ
ಆಗಬೇಕು. ಸಾಮಾಜಿಕ ಜಾಲತಾಣಗಳಲ್ಲಿ ಅಪರಿಚಿತರಿ
ಇರುವುದು ಕ್ಷೇಮ. ನಮ್ಮ ಹೆಚ್ಚಿನ ವೀಡಿಯೋ- ಫ
ಹಂಚಿಕೊಳ್ಳದಿರುವುದೇ ಉತ್ತಮ. ಸೆಕ್ಸ್ ಟಾರ್ಶನ್ ಕಿ
ನೀಡುವುದು ನಮ್ಮ ಕರ್ತವ್ಯ. ಈಗ ಸದ್ದಿಲ್ಲದೆ ಸದ್ದುಮ
ಬಗ್ಗೆ ಗಂಡುಮಕ್ಕಳಿಗೂ-ಹೆಣ್ಣು ಮಕ್ಕಳಿಗೂ ಸೂಕ್ತ




ಬೆತ್ತಲೆ ಗ್ಯಾಂಗ್ ಬ್ಲಾಕ್ಮೇಲ್ ಗೆ ಹೆದರಿ ಯುವಕ ಆತ್ಮಹತ್ಯೆ


ನಿಮ್ಮ ಪರಿಸ್ಥಿತಿ ಈಗ ಹೇಗಾಗಿರಬೇಡ.? ಕೊನೆಗೆ ನಿಮ್ಮನು ಪ್ರಚೋದಿಸಿ ಬಟ್ಟೆ ಬಿಚ್ಚಿಸಿ ಬೆತ್ತಲೆಮಾಡುವ ಸೈಬರ್ ವಂಚಕರ ಈ 'ಬೆತ್ತಲೆ ಗ್ಯಾಂಗ್' ನಿಮಗೆ ತಿಳಿಯದಂತೆ ನಿಮ್ಮ ಮತ್ತು ಮೊಬೈಲ್ ಒಳಗಡೆ ಇರುವ ಹುಗುಗಿಯ ಬೆತ್ತಲೆ ದೇಹದ ಸಂಪೂರ್ಣ ವೀಡಿಯೊವನ್ನು ಚಿತ್ರೀಕರಣ ಮಾಡಿಟ್ಟುಕೊಂಡು ಕೆಲವೇ ಸೆಕೆಂಡುಗಳಲ್ಲಿ ನಿಮ್ಮ ವಾಟ್ಸಾಪ್ಗೆ ಕಳುಹಿಸಿ ಹಣ ಕೇಳುತ್ತದೇ!!

## ಬೆತ್ತಲೆ ಮಾಡಿ ಹಣಕೀಳುತ್ತಾರೆ

ರೈಲು ಪ್ಲಾಟ್ ಫಾರಂ ಬಿಟ್ಟ ಮೇಲೆ ನಿಮ್ಮ ಕೈಗೆ ಟಿಕೆಟ್ಟು ಬಂದಿರುವುದರಿಂದ ನೀವು ದಂಡೆ ತೆರಲೇಬೇಕಾಗಿರುತ್ತದೇ!! ನಿಮ್ಮ ಮೊಬೈಲ್ ಫೋನ್ ಗೆ ನಿಮ್ಮದೇ ಬೆತ್ತಲೆ ವೀಡಿಯೋ ಕಳುಹಿಸಿ ಹಣಕ್ಕಾಗಿ ಬ್ಲಾಕ್ ಮೇಲ್ ಮಾಡುವ ಕಣ್ಣಿಗೆ ಕಾಣದ ಈ ಬೆತ್ತಲೆ ಗ್ಯಾಂಗ್ ಎಲ್ಲಿಯೋ ಕುಳಿತು ನಿಮ್ಮನ್ನು ಹೆದರಿಸುತ್ತಾರೆ. ನಿಮ್ಮ ಬೆತ್ತಲೆ ವೀಡಿಯೋವನ್ನು ಸಾಮಾಜಿಕ ಜಾಲತಾಣದಲ್ಲಿ ಅಪ್ಲೋಡ್ ಮಾಡುತ್ತೇನೆ! ನಿಮ್ಮ ಸ್ನೇಹಿತರಿಗೆ, ನಿಮ್ಮ ಸಂಬಂದಿಕರ ಮೊಬೈಲುಗಳಿಗೆ ಬೆತ್ತಲೆ ವೀಡಿಯೋ









, ಸರಿಯಾದ ಶಿಕ್ಷಣ–ತಿಳುವಳಿಕೆಯ ಕೊರತೆ
ವ ಲೈಂಗಿಕತೆಯನ್ನು ನೋಡುವ ರೀತಿ, ಅದರ
ಂಗಿಕ ಸುಲಿಗೆ ಕೋರರಿಗೆ ವಂಚಿಸಲು ಸುಲಭ
ೈಲ್ ಸ್ಮಾರ್ಟ್ ಫೋನ್ ಗಳು ಭಾರತದಲ್ಲಿ ಸೆಕ್ಸ್
ಯಾಗಿ ಮೊಬೈಲ್ ಫೋನ್ ಬಳಸಲು ಬಾರದ
ಳನ್ನು ಗೊತ್ತಿಲ್ಲದೆ ಡೌನ್ಲೋಡ್ ಮಾಡಿಕೊಂಡು,
ವೀಡಿಯೋ ಚಿತ್ರೀಕರಣಕ್ಕೆ ಒಳಗಾಗಿ ಎಷ್ಟೋ
ೋ ಮಾರ್ಫಿಂಗ್, ಡೀಪ್–ನ್ಯೂಡ್ ಟೆಕ್ನಾಲಜಿ,
ನ್ ಲೈನ್ ಸೆಕ್ಸ್ ಚಾಟ್ ವೀಡಿಯೋ–ಫೋಟೋ
ಇಲ್ಲ! ಅಸಲೀ ವೀಡಿಯೋ ಗಳಂತೆಯೆ ಕಾಣುವ
ಡಿಯೋ ಗಳನ್ನಿಟ್ಟುಕೊಂಡೆ ಈಗ ಸೆಕ್ಸ್ ಟಾರ್ಶನ್
ದಿಂದ ಸುರಕ್ಷಿತ ಆನ್ ಲೈನ್ ಬಳಕೆ ನಮ್ಮ ಆದ್ಯತೆ
ಂದ ಬರುವ ವೀಡಿಯೋ ಕಾಲ್ ಗಳಿಗೆ ಉತ್ತರಿಸದೇ
ೋಟೋ ಗಹನ್ನು ಸಾಮಾಜಿಕ ಜಾಲತಾಣಗಳಲ್ಲಿ
ುಕುಳಕ್ಕೆ ಅಂಜದೆ ತಕ್ಷಣವೇ ಪೊಲೀಸರಿಗೆ ದೂರು
ಾಡುತ್ತಿರುವ ಸೆಕ್ಸ್ ಟಾರ್ಶನ್ ಮಾಫಿಯಾ ಜಾಲದ
ತಿಳಿವಳಿಕೆ ನೀಡುವ ಜವಾಬ್ದಾರಿ ನಮ್ಮದಾಗಿದೆ.

ಸೆಂಡ್ ಮಾಡಬಾರದೆಂದರೇ ಈಗಲೇ ಇಂತಿಷ್ಟು ಹಣ ಫೋನ್ ಫೇ, ಗೂಗಲ್ ಫೇ.ಪೇಟಿಎಂ. ಮಾಡಿ ಎಂದು ಬ್ಲಾಕ್ ಮೇಲ್ ಮಾಡಿ ಧಮ್ಕಿ ಹಾಕುತ್ತಾರೆ. ಮಾನ ಮರ್ಯಾದೆಗೆ ಅಂಜುವ ಜನ ಕೈಲಿದ್ದಷ್ಟು ಹಣಕಟ್ಟಿ ತೆಪ್ಪಗಾಗುತ್ತಾರೆ. ಹಣದ ರುಚಿಗೆ ಬಿದ್ದ ಬೆತ್ತಲೆ ಗ್ಯಾಂಗ್ ಮತ್ತೊಮ್ಮೆ ಅದೇ ವ್ಯಕ್ತಿಗೆ ಇನ್ನೂ ಹೆಚ್ಚಿನ ಹಣ ನೀಡುವಂತೆ ಒತ್ತಾಯಿಸುತ್ತದೆ. ಹಣವಿಲ್ಲದವರು ಮೊದಲಿಗೆ ಸಾಲಮಾಡಿಯೋ–ಒಡವೆ ಅಡವಿಟ್ಟೊ ಮತ್ತಷ್ಟು ಹಣಕೊಟ್ಟು ನಿಟ್ಟುಸಿರಾಗುತ್ತಾರೆ! ಪದೇ ಪದೇ ಲೈಂಗಿಕ ಸುಲಿಗೆಯ ವಂಚಕರು ಹಣ ಕೊಟ್ಟವರನ್ನೇ ಟಾರ್ಗೆಟ್ ಮಾಡಿ ಮತ್ತೆ ಮತ್ತೆ ಹಣಕೇಳಲು ತೊಡಗಿದರೆ ಈ ಕಿರುಕುಳದಿಂದ ನೊಂದು ಹೆದರಿದ ಆ ವ್ಯಕ್ತಿ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ ಅಷ್ಟೇ! ನಿಜಾ..ಇಂತಹ ಅಮಾನವೀಯ ವಾದ ಅಸಹ್ಯಕರವಾದ ಘಟನೆಯೊಂದು ಬೆಂಗಳೂರಿನ ಕೆ.ಆರ್.ಪುರಂನಲ್ಲಿ ಕಳೆದ ವರ್ಷ ನಡೆದಿತ್ತು. ಈ ಬೆತ್ತಲೆ ಗ್ಯಾಂಗಿನ ಕಿರುಕುಳಕ್ಕೆ ಬೇಸತ್ತು ಮನನೊಂದು, ಮನೆಯವರ ಬಳಿ ಹೇಳಿಕೊಂಡರೆ ಮಾನ ಮರ್ಯಾದೆ ಹೋಗುತ್ತದೆಂದು, ಬಿಸಿನೆಸ್ ಮ್ಯಾನ್ ಮಗನೊಬ್ಬ ಆತ್ಮಹತ್ಯೆ ಮಾಡಿಕೊಂಡಿದ್ದ. ಪಾಪ ಈ ಸೆಕ್ಸ್ ಟಾರ್ಶನ್ ಮಾಫಿಯಾದ ಬ್ಲಾಕ್ ಮೇಲ್ ಗೆ ಬೆಳೆದ ಮಗನನ್ನು ಕಳೆದುಕೊಂಡ ಮರ್ಯಾದಸ್ಥರ ತುಂಬಿದ ಕುಟುಂಬ ತತ್ತರಿಸಿ ಹೋಗಿತ್ತು.

## ಲೈಂಗಿಕ ಸುಲಿಗೆ ಮಾಫೀಯಾ

ಹೌದು ಈಗ ಇಡೀ ದೇಶವೇ ಈ ಸೆಕ್ಸ್ ಟಾರ್ಶನ್ (ಲೈಂಗಿಕ ಸುಲಿಗೆ) ಮಾಫಿಯಾ ಹಾವಳಿಯಿಂದ ತತ್ತರಿಸಿ ಹೋಗುತ್ತಿದೆ! ಇಂತಹ ನೂರಾರು ಪ್ರಕರಣಗಳು ದೇಶದಾದ್ಯಂತ, ರಾಜ್ಯಾದ್ಯಂತ ದಿನನಿತ್ಯವೂ ಸದ್ದಿಲ್ಲದೆ ಜರುಗುತ್ತಿವೆ. ಆದರೆ ಮಾನ ಮರ್ಯಾದೆಗೆ ಬೆದರಿ ಬೆಳಕಿಗೆ ಬರುತ್ತಿಲ್ಲ!



ಕೆಲವರು ಮಾತ್ರ ಇತ್ತೀಚೆಗೆ ಧೌರ್ಯವಾಗಿ ವಂಚನೆಯ ವಿರುದ್ಧ ದೂರು ಕೊಡಲು ಮುಂದೆ ಬರುತ್ತಿದ್ದಾರೆ. ಕಳೆದ ವರ್ಷ ಫೆಬ್ರವರಿ–18ರಂದು ಹುಬ್ಬಳ್ಳಿಯ ಮಾಜಿ ಶಾಸಕರ ಮಗನೊಬ್ಬನಿಗೆ ಇದೇ ರೀತಿ ಇದ್ದಕ್ಕಿದ್ದಂತೆ ಅಶ್ಲೀಲ ವೀಡಿಯೋ ಕಾಲ್ ಮಾಡಿದ ನಂತರ ಸ್ಕ್ರೀನ್ ಸೇವ್ ಮಾಡಿಕೊಂಡು, ಶಾಸಕರ ಮಗನ ಮುಖವನ್ನು ಮಾರ್ಫಿಂಗ್ ಮಾಡಿ ಆತನಿಗೆ ವಾಪಸ್ಸು ವೀಡಿಯೋ ಕಳುಹಿಸಿ, ಸಾಮಾಜಿಕ ಜಾಲತಾಣದಲ್ಲಿ ಅಪ್ಲೋಡ್ ಮಾಡಿ



ಮೊಹಮ್ಮದ್ ಮುಜಾಹಿದ್ | ಮೊಹಮ್ಮದ್ ಇಕ್ಬಾಲ್ | ಆಸಿಫ್


ಮರ್ಯಾದೆ ತೆಗೆಯುವುದಾಗಿ ಸೆಕ್ಸ್ ಟ್ರಾಪ್ ಗ್ಯಾಂಗ್ ಬ್ಲಾಕ್ ಮೇಲ್ ಮಾಡಿ 13ಸಾವಿರ ರೂಪಾಯಿ ಫೋನ್ ಫೇ ಮಾಡಿಸಿಕೊಂಡಿತ್ತು. ಮತ್ತೆ ಮತ್ತೆ ಲೈಂಗಿಕ ಸುಲಿಗೆಯ ಸೈಬರ್ ಚೀಟರ್ಸ್ ಹುಬ್ಬಳ್ಳಿ ಶಾಸಕರ ಪುತ್ರನಿಗೆ ಹಣಕ್ಕಾಗಿ ಪೀಡಿಸುತ್ತಿದ್ದರಿಂದ ಆತ ಹೆದರಿ ತನ್ನ ತಂದೆಯ ಮೂಲಕ ಸೈಬರ್ ಠಾಣೆಗೆ ದೂರು ನೀಡಿ ಹಣ ಕೇಳಿ ಕರೆ ಬರುತ್ತಿದ್ದ ಆ ನಂಬರ್ ಬ್ಲಾಕ್ ಮಾಡಿ ನಿಟ್ಟುಸಿರಾಗಿದ್ದ. 'ಬೇರೆಯವರಾಗಿದ್ದರೇ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರು! ಸಾರ್ವಜನಿಕರು ಸಾಧ್ಯವಾದಷ್ಟು ಹುಸಾರಾಗಿರಿ!" ಎಂದು ಆ ವಿದ್ಯಾರ್ಥಿ ಹೇಳಿಕೆ ನೀಡಿ ಜನರನ್ನು ಎಚ್ಚರಿಸಿದ್ದ. ಇತ್ತೀಚೆಗೆ ಹಣವಂತರ ಜೊತೆಗೆ ಅಮಾಯಕರು ಈ ವಂಚನೆಗೆ ಬಲಿಯಾಗುತ್ತಿದ್ದಾರೆ. ಹನಿ ಟ್ರಾಪ್ ಎಂಬುದು ಪಕ್ಕಾ ಈಸೀ ಮನೀಟ್ರಾಫ್ ದಂಧೆ! ಅತಿ ಸುಲಭವಾಗಿ–ವೇಗವಾಗಿ ಹಣಮಾಡಲು ಸೈಬರ್ ವಂಚಕರು ಕಂಡುಕೊಂಡಿರುವ ಹೊಸ ತಂತ್ರ. ಇದೀಗ ಎಲ್ಲಾ ಕಡೆ ಚಾಲ್ತಿಯಲ್ಲಿದೆ! ಕರ್ನಾಟಕದಲ್ಲಿಯೂ ಹುಡುಗಿಯರನ್ನಿಟ್ಟುಕೊಂಡು ಈ ಲೈಂಗಿಕ ಸುಲಿಗೆಯ ದಂಧೆ ಕೋರರ ಮಾಫಿಯಾ ಜಾಲ ಕಾರ್ಯಾಚರಣೆ ಗಿಳಿದಿದೆ ಎನ್ನಲಾಗುತ್ತಿದೆ! ಸಾಮಾಜಿಕ ಜಾಲತಾಣದಲ್ಲಿ ಮುಳುಗೇಳುತ್ತಿರುವ, ತರಾವರಿ ತಾಣಗಳಲ್ಲೇ ತಳವೂರಿ ತಪ್ಪುದಾರಿ ಹಿಡಿಯುತ್ತಿರುವ ಬಳಕೆದಾರರು ಕ್ಷಣಿಕ ಸುಖದ ಆಸೆಗೆ ಬಿದ್ದು ಪ್ರಚೋದನೆಗೆ–ಆಮಿಷಗಳಿಗೆ ಒಳಗಾಗಿ, ತಮ್ಮ ಬಟ್ಟೆ ಬಿಚ್ಚಿ ಮೈಮರೆತು ಅಪರಿಚಿತರೊಡನೆ ವೀಡಿಯೋ ಚಾಟಿಂಗ್ ಮಾಡುವುದನ್ನು ದಯಮಾಡಿ ನಿಲ್ಲಿಸಬೇಕೆಂದು ಪೊಲೀಸ್ ಅಧಿಕಾರಿಗಳು ರಾಜ್ಯದ ಜನತೆಗೆ ಮನವಿ ಮಾಡಿದ್ದಾರೆ.


## ಸೆಕ್ಸ್ ಟಾರ್ಶನ್ ಮಾಫಿಯಾ ಜಾಲ

ಈ ಹಿಂದೆಯೂ ಇದೇ ರೀತಿ ಬೆತ್ತಲೆ ವೀಡಿಯೋ ಚಿತ್ರೀಕರಿಸಿಕೊಂಡು ರಾಜ್ಯದ ಜನರನ್ನು ವಂಚಿಸಿ ಬ್ಲಾಕ್ ಮೇಲ್ ಮಾಡುತ್ತಿದ್ದ ನೈಜೀರಿಯಾ ಪ್ರಜೆಗಳನ್ನು ಬೆಂಗಳೂರು ಪೊಲೀಸರು ಬಂಧಿಸಿದ್ದರು. ವಿಶ್ವದ ಮೊದಲ ಅತ್ಯಾಧುನಿಕ ಸೆಕ್ಸ್ ಟಾರ್ಶನ್ ಮಾಫಿಯಾ ಜಾಲ ಫಿಲಿಪ್ಪೀನ್ಸ್ ನಗರದಿಂದಲೇ ಕಾರ್ಯಾಚರಣೆ ನಡೆಸುತ್ತಿತ್ತು. ಈ ಲೈಂಗಿಕ ಸುಲಿಗೆಯಂತಹ ವಂಚನೆಗಳ ಮೂಲ ವಿದೇಶಿ ಮೆದುಳುಗಳಿಂದಲೇ ಬಂದಿರುವುದು. ಆದರೆ ಈಗ ಕಾರ್ಯಾಚರಣೆಗಿಳಿದಿರುವುದು ಪಕ್ಕಾ ದೇಸೀ ಗ್ಯಾಂಗ್ ಗಳು!

ಸಾಮಾಜಿಕ ಜಾಲತಾಣದಲ್ಲಿ ನಕಲಿ ಖಾತೆ ತೆರೆದು ಬೆತ್ತಲೆ ಬ್ಲಾಕ್ ಮೇಲ್ ಮಾಡಿ ಹಣ ಸುಲಿಗೆಗಿಳಿದಿರುವ ರಾಜಸ್ಥಾನ, ಒರಿಸ್ಸಾ, ಉತ್ತರ ಪ್ರದೇಶ, ಮದ್ಯ ಪ್ರದೇಶ,ಹರಿಯಾಣದ ಮೇವಾತ್,ಭಾರತ್ ಪುರ, ಅಲ್ವಾರ್ ಪಟ್ಟಣಗಳ ಗ್ಯಾಂಗುಗಳ ಮೇಲೆ ರಾಜ್ಯದ ವಿವಿದೆಡೆ ಗ್ರಾಮೀಣ ಪೊಲೀಸ್ ಠಾಣೆಗಳಲ್ಲಿ ಮತ್ತು ನಗರ ಪ್ರದೇಶಗಳಲ್ಲಿಯೂ ಸೈಬರ್ ಕ್ರೈಂ ಪ್ರಕರಣಗಳು ದಾಖಲಾಗಿವೆ. ಅರ್ಧಕ್ಕೇ ವಿಧ್ಯಾಭ್ಯಾಸ ನಿಲ್ಲಿಸಿದ ಡ್ರಾಪೌಟ್ ಸ್ಟೂಡೆಂಟ್ ಗಳು, ಕುತಂತ್ರ ಬುದ್ದಿಯ ಖತರ್ನಾಕ್ ಕ್ರಿಮಿನಲ್ ಸೈಬರ್ ಹ್ಯಾಕರ್ಸ್ ಗಳು ಮಾಸ್ಟರ್ ಮೈಂಡ್ ಗಳಂತೆ ಈ ಸೆಕ್ಸ್ ಟಾರ್ಶನ್ ಮಾಫಿಯಾ ಜಾಲವನ್ನು ನಿಭಾಯಿಸುತ್ತಿದ್ದಾರೆ! 10ರಿಂದ 20 ಜನರ ತಂಡ ಕಟ್ಟಿಕೊಂಡು ಲೈಂಗಿಕ ಸುಲಿಗೆಯ ಜಾಲದ ಮಾಫಿಯಾ ನಡೆಸುತ್ತಿರುವ ಸೈಬರ್






ವಂಚಕರು ಮುಂದೊಂದು ದಿನ ಇಡೀ ದೇಶಕ್ಕೆ ತಲೆನೋವಾಗಿ ಪರಿಣಮಿಸುವ ಕಾಲ ದೂರವಿಲ್ಲ. ಹಲವಾರು ದೇಶಗಳಿಗೂ ವ್ಯಾಪಿಸಿರುವ ಇವರ ಸೆಕ್ಸ್ ಟ್ರಾಪ್ ಸುಲಿಗೆ ಸಂಚುಗಳಿಗೆ ಪ್ರಪಂಚದಾದ್ಯಂತ ಸಾವಿರಾರು ಜನರು ಪ್ರಾಣತೆತ್ತಿದ್ದಾರಂತೇ! ರಾಜಕಾರಣಿಗಳಲ್ಲದೇ ಪೊಲೀಸರನ್ನೂ ಇವರು ತಮ್ಮ ಬಲೆಗೆ ಬೀಳಿಸಿಕೊಂಡು ಬ್ಲಾಕ್ ಮೇಲ್ ಮಾಡಿ ಬಲಿಹಾಕಿದ್ದಾರಂತೇ! ಭಾರತದೇಶದಲ್ಲಿಯೇ ದಿನವೊಂದಕ್ಕೆ ಸಾವಿರಾರು ಲೈಂಗಿಕ ಸುಲಿಗೆಯ ಪ್ರಕರಣಗಳು ದಾಖಲಾಗುತ್ತಿವೆಯೆಂದರೆ ಇವರ ವಾರ್ಷಿಕ ಆದಾಯ ಎಷ್ಟು ಕೋಟಿ ಇರಬಹುದು ಎಂದು ನೀವೇ ಊಹಿಸಿಕೊಳ್ಳಿ. ಜನಸಂಖ್ಯಾ ಲೆಕ್ಕದಲ್ಲಿ ಭಾರತವನ್ನು ಸೆಕ್ಸ್ ಟಾರ್ಶನ್ ಮಾಫಿಯಾ ಟಾರ್ಗೆಟ್ ಮಾಡಿಕೊಂಡು ಸುಲಿಗೆಗಿಳಿದಿದೆ! ಜನರು ಅಪರಿಚಿತರಿಂದ ಬರುವ ವೀಡಿಯೋ ಕಾಲ್ ಗಳನ್ನು ತೆಗೆಯದಿರುವುದು ಉತ್ತಮವೆಂದು ಪೊಲೀಸರು ಎಚ್ಚರಿಕೆ ನೀಡುತ್ತಲೇ ಇದ್ದಾರೆ. ಹಾಗೆಯೇ ಅಪರಿಚಿತ ಯುವತಿಯರ ಫೊಟೋ ಗಳಿರುವ ನಕಲೀ ಫೇಸ್ಬುಕ್ ಖಾತೆಗಳಿಂದ ಬರುವ ಫ್ರೆಂಡ್ಸ್ ರಿಕ್ವೆಸ್ಟ್ ರಿಜೆಕ್ಟ್ ಮಾಡಿ ಬಚಾವಾಗುವಂತೆ ಮನವಿ ಮಾಡುತ್ತಿದ್ದಾರೆ! ಇಲ್ಲದಿದ್ದರೆ ಈ ಸೆಕ್ಸ್ ಪ್ರಾಪರ್ ಗಳು ತಮ್ಮ ವಂಚನೆಯ ಚಾಳಿಯನ್ನು ಇನ್ನಷ್ಟು ಹೆಚ್ಚಿಸಿಕೊಳ್ಳಲು ನಾವೇ ಲೈಂಗಿಕ ಸುಲಿಗೆಕೋರರಿಗೆ ವೀಳ್ಯ ಕೊಟ್ಟಂತಾಗುತ್ತದೆ.

ವಯಸ್ಸಿನ ಅಂತರವಿಲ್ಲದೆ ಎಲ್ಲಾ ವಯೋಮಾನದವರೂ ಈ ಸೆಕ್ಸ್ ಟ್ರಾಪ್ ಮಾಫಿಯಾಕ್ಕೆ ಬಲಿಯಾಗುತ್ತಿರುವುದು ಕಾಣುತ್ತಿದೆ. ಎಲ್ಲಿ ತಮ್ಮ ಬೆತ್ತಲೆ ವೀಡಿಯೋ ಸಾಮಾಜಿಕ ಜಾಲತಾಣದಲ್ಲಿ ಅಪ್ಲೋಡ್ ಆಗಿ ಜಗತ್ತಿನೆದುರು ನಮ್ಮ ಮಾನ ಹರಾಜಾಗಿ ಆತ್ಮಹತ್ಯೆ ಮಾಡಿ ಕೊಳ್ಳಬೇಕಾಗುತ್ತದೆಯೋ ಎಂದು ಹೆದರಿ ಹಲವಾರು ಜನರು ಲಕ್ಷಾಂತರ ರೂಪಾಯಿ ಹಣ ಕಳೆದುಕೊಂಡಿದ್ದಾರೆ. ಬೆಂಗಳೂರಿನ ನೆಲಮಂಗಲದ 54ವರ್ಷ ವಯಸ್ಸಿನ ಮುದುಕನೊಬ್ಬ ಈ ಬೆತ್ತಲೆ ಗ್ಯಾಂಗ್ ನ ವಂಚಕರ ವೀಡಿಯೋ ಕಾಲ್ ಗೆ ಬಲಿಯಾಗಿ–ಬೆತ್ತಲಾಗಿ ಹಣ ಕಳೆದುಕೊಂಡು ಪದೇ ಪದೇ ಬ್ಲಾಕ್ ಮೇಲ್ ಗೊಳಗಾಗಿ ಕೊನೆಗೆ ಮನನೊಂದು ಸಿ.ಐ.ಡಿ.ಸೈಬರ್ ಕ್ರೈಂ ಠಾಣೆಗೆ ದೂರು ನೀಡಿದ್ದ, ಇದನ್ನೇ ಗಂಭೀರವಾಗಿ ಪರಿಗಣಿಸಿದ್ದ ಸಿ.ಐ.ಡಿ.ಸೈಬರ್ ಎಸ್ಪಿ .ಎಂ.ಡಿ.ಶರತ್ ರವರು ತಮ್ಮ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಿ ಇನ್ಸ್ಪೆಕ್ಟರ್ ನಯಾಜ್ ಅಹಮದ್ ತಂಡ ಹಗಲು ರಾತ್ರಿ ಕಷ್ಟಪಟ್ಟು, ದೂರದ ರಾಜ್ಯ ರಾಜಸ್ಥಾನದ ಹಳ್ಳಿಗಳಲ್ಲಿ ಅಲೆದು–ಊಟ ನಿದ್ರೆ ತೊರೆದು ಸಾಹುನ್, ಶಾರುಖ್ ಖಾನ್, ನಾಸಿರ್, ನಹೀದ್ ಅನ್ವರ್, ಎಂಬ ಬೆತ್ತಲೆ ಗ್ಯಾಂಗಿನ ನಾಲ್ವರು ಪ್ರಮುಖ ಸದಸ್ಯರನ್ನು ಎಳೆದು ತಂದು ಪರಪ್ಪನ ಅಗ್ರಹಾರ ಬಂದೀಖಾನೆಗಟ್ಟಿದ್ದರು. ಜನರ ಸೈಕಾಲಜಿಯೊಂದಿಗೆ ಸಲ್ಲಾಪಕ್ಕಿಳಿದು 'ಆನ್ಲೈನ್ ಹನೀ ಟ್ರಾಪ್' ನಡೆಸಿ ಕುಂತಲ್ಲೇ ಕಾಸು ಮಾಡುವ ಸ್ಕೀಮು ಇದು. ಪ್ರಪಂಚದ ಪ್ರತಿಷ್ಠಿತ ವ್ಯಕ್ತಿಗಳು, ಪತ್ರಕರ್ತರು, ರಾಜಕಾರಣಿಗಳು ಸಿನಿಮಾ ರಂಗದವರು ಈ ಲೈಂಗಿಕ ಸುಲಿಗೆಯ ಮಾಫಿಯಾಕ್ಕೆ ಸಿಕ್ಕು ಬಲಿಪಶು ಗಳಾಗಿದ್ದಾರೆ. ಈ ಬ್ಲಾಕ್ ಮೇಲಿಂಗ್ ಬಿಸಿನೆಸ್ ನ ಬೆಲೆಗೆ ಮುಂಬೈನ ಶಿವಸೇನೆಯ ಶಾಸಕರೊಬ್ಬರು ಬಲಿಯಾಗಿದ್ದರು! ಆಡಳಿತಾರೂಢ ಶಾಸಕರನ್ನು ಬಲೆಗೆ ಕೆಡವಲು ಕೃತಕ ಬುದ್ದಿ ಮತ್ತೆ (ಡೀಪ್ ಫೇಕ್) ತಂತ್ರಜ್ಞಾನ ಬಳಸಿದ್ದ ರಾಜಸ್ಥಾನದ ಖತರ್ನಾಕ್ ಸೆಕ್ಸ್ ಟ್ರಾಪರ್ ಮಹಮದ್ ಖಾನ್ 300 ಜನರನ್ನು ಲೈಂಗಿಕ ಸುಲಿಗೆ ಹೆಸರಲ್ಲಿ ಶೋಷಿಸಿ 20 ಲಕ್ಷಕ್ಕೂ ಹೆಚ್ಚಿನ ಹಣಮಾಡಿದ್ದನಂತೇ! ರಾಜಸ್ಥಾನದ ಸಚಿವರು, ಬಿಜೆಪಿ ಸಂಸದರನ್ನೂ ಬಿಡದೆ ಕಾಡಿದ್ದ ರಾಜಸ್ಥಾನದ ಸೈಬರ್ ವಂಚಕರಾದ ವಾರಿಸ್ ಖಾನ್, ರವಿನ್ ಖಾನ್ ತಮ್ಮ ಬಳಿ ಕೆಲವರ ಅಶ್ಲೀಲ ಸಿಡಿಗಳಿವೆಯೆಂದು ಹೇಳಿಕೆ ನೀಡಿ ಭಾರತೀಯ ರಾಜಕೀಯ ನಾಯಕರಲ್ಲಿ ನಡುಕ ಹುಟ್ಟಿಸಿದ್ದ! ಗುಜರಾತಿನ ಕ್ಯಾಬಿನೆಟ್ ಸಚಿವರೊಂದಿಗೆ ಹುಡುಗಿಯ ಹೆಸರಲ್ಲಿ ಅಶ್ಲೀಲ ಚಾಟಿಂಗ್ ನಡೆಸಿ ಬಟ್ಟೆ ಬಿಚ್ಚಿಸಿ ವೀಡಿಯೋ ಮಾಡಿಕೊಂಡಿದ್ದ ಹಕೀಮುದ್ದೀನ್ ಎಂಬ ಮತ್ತೊಬ್ಬ ಸೆಕ್ಸ್ ಟಾರ್ಶನ್ ಮಾಫಿಯಾದ ಸುಲಿಗೆಕೋರನನ್ನು ನೆನೆಸಿಕೊಂಡು ಭಾರತದ ಕೆಲವು ರಾಜಕಾರಣಿಗಳು ನೀರುಕುಡಿಯುತ್ತಾರಂತೇ!

● 14ನೇ ಪುಟಕ್ಕೆ...

**ಒಂದು ಕಾಲದಲ್ಲಿ ಬಿಜೆಪಿ ಪಕ್ಷದಲ್ಲಿ ಚುನಾವಣಾ ಕಾರ್ಯತಂತ್ರವನ್ನು ರೂಪಿಸಿ ಇಡೀ ದೇಶದಲ್ಲಿ ಕೇಸರಿ ಹರಿದಾಡಲು ಕಾರಣರಾದ ಚುನಾವಣಾ ಕಾರ್ಯತಂತ್ರ ನಿಪುಣ ಪ್ರಶಾಂತ್ ಕಿಶೋರ್ ಬಿಜೆಪಿ ವಿರುದ್ಧ ತೊಡೆತೊಟ್ಟ ಪ್ರತಿಪಕ್ಷಗಳನ್ನುಒಟ್ಟು ಗೂಡಿಸಿ ತೃತೀಯರಂಗ ಕಟ್ಟಲು ನಡೆಸಿದ ಸರ್ಕಸ್ ಅಷ್ಟೊಂದು ಯಶಸ್ವಿಯಾಗದಿರುವ ಈ ವೇಳೆ ಮತ್ತೇ ಬಿಜೆಯತ್ತ ಮುಖಮಾಡಲಿದ್ದಾರೆ ಅದು ಗುಜರಾತ್ ಚುನಾವಣೆ ಮೂಲಕ.**



# ಮತ್ತೇ ಬಿಜೆಪಿಯತ್ತ ಪ್ರಶಾಂತ್ ಕಿಶೋರ್?!

● ಎಂ.ಡಿ.ದಿನೇಶ್ ರಾವ್

ಬಹುಶಃ ದೇಶದಲ್ಲಿ ಬಿಜೆಪಿ ಈ ರೀತಿಯ ಪ್ರಚಂಡ ಬಹುಮತದ ಹಿಂದೆ ಗ್ರಾಸ್‌ಲೆವಲ್‌ನಲ್ಲಿ ಕಾರ್ಯತಂತ್ರ ರೂಪಿಸಿದವರು ಪ್ರಶಾಂತ್ ಕಿಶೋರ್, ಆದರೆ ನಂತರದ ದಿನಗಳಲ್ಲಿ ಬಿಜೆಪಿ ನಾಯಕರಿಗೂ ಅವರಿಗೂ ಬಂದ ವ್ಯತ್ಯಾಸದಲ್ಲಿ ಅವರು ಬಿಜೆಪಿ ಸಹವಾಸ ಬಿಟ್ಟು ಬಿಜೆಪಿಯೇತರ ಪಕ್ಷ ತರುವ ಪ್ರಯತ್ನದಲ್ಲಿ ಸತತ ಪ್ರಯತ್ನಗಳನ್ನು ಮಾಡುತ್ತಲೇ ಬಂದರು. ದೇಶದ ಎಲ್ಲಾ ಪ್ರಾದೇಶಿಕ ಪಕ್ಷಗಳು ಮತ್ತು ಪ್ರತಿಪಕ್ಷಗಳನ್ನು ಗುಡ್ಡೆ ಹಾಕುವ ಯತ್ನದಲ್ಲೂ ಮುಂದಾದರೂ ಆದರೆ ಆ ಕಪ್ಪೆಗಳು ಒಂದೆಡೆ ನಿಲ್ಲದೆ ಎಗರಿ ಎಗರಿ ಹೋದವು ಒಬ್ಬೊಬ್ಬರದ್ದು ಒಂದು ರೀತಿ–ನೀತಿ ಹೀಗಾಗಿ ಅವರಿಗೆ ಬ್ರಮನಿರಸವಾಗಿಬಿಟ್ಟಿದೆ.

ಆದರೂ ಇನ್ನು ಪ್ರಯತ್ನದಲ್ಲೆ ಇದ್ದಾರೆ. ಕಾಂಗ್ರೆಸ್ ಪಕ್ಷವನ್ನು ಜೊತೆಗೂಡಿಸಿ ತೃತೀಯ ರಂಗವನ್ನು ಮತ್ತೇ ಮುನ್ನೆಲೆಗೆ ತರುವ ಪ್ರಯತ್ನಗಳು ಸಫಲವಾಗಲಿಲ್ಲ ಕಾಂಗ್ರೆಸ್ ಪಕ್ಷದಲ್ಲಿ ಕಾರ್ಯದರ್ಶಿಯಾಗಿ ನೇಮಕ ಮಾಡುವ ಯತ್ನಗಳು ನಡೆದಿದ್ದವು ಆದರೆ ಅದೇಕೋ ಕಾಂಗ್ರೆಸ್ ಪಕ್ಷ ಅವರನ್ನು ಪಕ್ಷದೊಳಗೆ ಸೇರಿಸಿಕೊಳ್ಳಲು ಇಷ್ಟಪಡಲಿಲ್ಲ ಕಿಶೋರ್ ಅವರನ್ನು ದೂರವ ಇಟ್ಟಂತ ಕಂಡಿತು. ಆದರೂ ಕಿಶೋರ್ ತನ್ನ ಎಲ್ಲಾ ಎಪರ್ಟ್‌ಗಳನ್ನು ಹಾಕಿ ಮತ್ತೇ ಮತ್ತೇ ಪ್ರತಿಪಕ್ಷದ ರಾಷ್ಟ್ರೀಯ ನಾಯಕರನ್ನು ಒಂದೂಗಿಡಿಸುವ ಯತ್ನವನ್ನು ಮಾಡುತ್ತಲೇ ಇದ್ದಾರೆ ಆದರೂ ಇನ್ನೂ ಅದು ಕಾರ್ಯರೂಪಕ್ಕೆ ಬಂದಂತೆಕಾಣುತ್ತಿಲ್ಲ.


ಈ ಮಧ್ಯೆ ಈ ಚುನಾವಣಾ ನಿಪುಣ ಎನಿಸಿಕೊಂಡಿರುವ ಪ್ರಶಾಂತ್ ಕಿಶೋರ್ ತೀವ್ರ ಬೇಸರದಲ್ಲಿದ್ದಾರಂತೆ, ಎಷ್ಟೆ ಪ್ರಯತ್ನಗಳು ಕೈಗೂಡುತ್ತಿಲ್ಲ ಎನ್ನುವ ಕಾರಣ ಅವರು ತೀವ್ರ ನಿರಾಸೆಗೊಂಡಿದ್ದುಈಗ ಮತ್ತೇ ಬಿಜೆಪಿಯತ್ತ ಮುಖ ಮಾಡುತ್ತಿದ್ದಾರೆ ಎನ್ನುವ ಮಾತುಗಳು ಕೇಳಿಬರುತ್ತಿವೆ.

ಹೌದು ಎಲ್ಲವೂ ಅಂದುಕೊಂಡಂತೆ ಆದರೆ ಕಿಶೋರ್‌ಮತ್ತೇತಮ್ಮ ಕರ್ಮಭೂಮಿ ಗುಜರಾತ್‌ಗೆ ಹಿಂತಿರುಗಲಿದ್ದಾರೆ ಅಲ್ಲಿ ಈ ವರ್ಷ ನಡೆಯಲಿರುವ ಚುನಾವಣೆಯಲ್ಲಿ ಮತ್ತೊಮ್ಮೆ ಕಾರ್ಯತಂತ್ರ ರೂಪಿಸುವ ಸಾಧ್ಯತೆಗಳಿವೆ ಎನ್ನಲಾಗುತ್ತಿದೆ.

ಈ ವರ್ಷದ ಅಂತ್ಯದಲ್ಲಿ ಗುಜರಾತ್ ವಿಧಾನಸಭೆಗೆ ಚುನಾವಣೆ ನಡೆಯಲಿದೆ ಇದರಲ್ಲಿ ಬಿಜೆಪಿ ಪರವಾಗಿ ಚುನಾವಣಾ ರಣತಂತ್ರ ಹೆಣೆಯಲು 45 ವರ್ಷದ ಪ್ರಶಾಂತ್ ಕಿಶೋರ್ ನೇಮಿಸಿಕೊಳ್ಳಲು ಬಿಜೆಪಿ ನಾಯಕರು ಪ್ರಶಾಂತ್ ಕಿಶೋರ್ ಜೊತೆಗೆ ಮಾತುಕತೆ ನಡೆಸುತ್ತಿದ್ದಾರೆ. ಈ ಆಫರ್ ಅನ್ನು ಪ್ರಶಾಂತ್ ಕಿಶೋರ್ ಒಪ್ಪಿಕೊಳ್ತಾರಾ ಎಂಬುದು ಈಗ ಕುತೂಹಲಕ್ಕೆ ಕಾರಣವಾಗಿದೆ.

## ಘರ್ ವಾಪಸಿ ಅಂಚಿನಲ್ಲಿ ಪ್ರಶಾಂತ್ ಕಿಶೋರ್?

ಒಂದು ಕಾಲದಲ್ಲಿ ಬಿಜೆಪಿಯ ಪೋಸ್ಟರ್ ಬಾಯ್ ಆಗಿದ್ದ ಪ್ರಶಾಂತ್ ಕಿಶೋರ್ 2014 ರಲ್ಲಿ ಲೋಕಸಭೆ ಚುನಾವಣೆಯಲ್ಲಿ ಕೇಸರಿ ಅಲೆಯನ್ನು ದೇಶದಲ್ಲಿ ಸೃಷ್ಟಿಸಿದ್ದಕ್ಕಾಗಿ ಮೊದಲ ಬಾರಿಗೆ ಗಮನ ಸೆಳೆದರು. ಅದರ ನಂತರ, ಅವರು ಬಿಜೆಪಿಯೊಂದಿಗೆ ಸಂಬಂಧ ಮುರಿದುಬಿದ್ದಿತ್ತು.




ಬಳಿಕ ಪ್ರಶಾಂತ್ ಕಿಶೋರ್ ಬಿಜೆಪಿ ವಿರುದ್ಧ ವಿಧಾನಸಭಾ ಚುನಾವಣಾ ಅಖಾಡಕ್ಕಿಳಿದಿದ್ದ ನಿತೀಶ್ ಕುಮಾರ್ ಮತ್ತು ಮಮತಾ ಬ್ಯಾನರ್ಜಿಗಾಗಿ ಪ್ರಚಾರದ ಸ್ಟ್ರಾಟಜಿ ರೂಪಿಸಿದ್ದರು. ಭಾರತೀಯ ಚುನಾವಣಾ ಪ್ರಚಾರವನ್ನು ಆಧುನೀಕರಿಸಿದ ದೂರದೃಷ್ಟಿ ಎಂದು ಶ್ಲಾಘಿಸಲ್ಪಟ್ಟ ಅವರು ಬಿಜೆಪಿ ವಿರುದ್ಧ ಮಹಾಮೈತ್ರಿಕೂಟವನ್ನು ಪ್ರಸ್ತಾಪಿಸಿದರು.

ಈಗ ಪ್ರಶಾಂತ್ ಕಿಶೋರ್ ಚುನಾವಣಾ ಸ್ಟ್ರಾಟಜಿ ರೂಪಿಸುವಲ್ಲಿ ಒಂದು ಫುಲ್ ಸರ್ಕಲ್ ಬಂದಿದ್ದಾರೆ. ಜೆಡಿಯು, ಟಿಎಂಸಿ, ಕಾಂಗ್ರೆಸ್, ಡಿಎಂಕೆ, ವೈಎಸ್‌ಆರ್ ಸೇರಿದಂತೆ ಪ್ರಮುಖ ಪಕ್ಷಗಳಿಗೆ ಚುನಾವಣಾ ಸ್ಟ್ರಾಟಜಿ ರೂಪಿಸಿದ್ದು,



ಈ ಪಕ್ಷಗಳ ಚುನಾವಣಾ ಗೆಲುವಿನ ಶ್ರೇಯಸ್ಸು ಪ್ರಶಾಂತ್ ಕಿಶೋರ್ ಗೂ ಸಲ್ಲುತ್ತೆ. ಈಗ ಪ್ರಶಾಂತ್ ಕಿಶೋರ್ ಘರ್ ವಾಪಸಿ ಅಂಚಿಗೆ ಬಂದು ನಿಂತಿದ್ದಾರೆ ಎಂದು ಗುಜರಾತ್ ರಾಜಕೀಯ ವಲಯದಲ್ಲಿ ಚರ್ಚೆಯಾಗುತ್ತಿದೆ. ಡಿಸೆಂಬರ್ 2022 ರ ಗುಜರಾತ್ ಚುನಾವಣೆಗೆ ಬಿಜೆಪಿ ಪ್ರಚಾರವನ್ನು ರೂಪಿಸಲು, ಬಿಜೆಪಿ ಪರ ಚುನಾವಣಾ ಸ್ಟ್ರಾಟಜಿ ರೂಪಿಸಲು ಪ್ರಶಾಂತ್ ಕಿಶೋರ್ ಕರೆತರಲು ಗಂಭೀರವಾದ ಮಾತುಕತೆ ನಡೆಯುತ್ತಿದೆ. ಈ ಸಂಬಂಧ ಈಗಾಗಲೇ ಮೊದಲ ಸುತ್ತಿನ ಮಾತುಕತೆ ನವದೆಹಲಿಯಲ್ಲಿ ನಡೆದಿದೆ. ಇದು ನಿಜವಾದರೆ ಪ್ರಶಾಂತ್ ಕಿಶೋರ್‌ಗೆ ಘರ್ ವಾಪ್ಸಿಯೇ ಸರಿ. ಆದರೇ, ಈ ಬಗ್ಗೆ ಪ್ರಶಾಂತ್ ಕಿಶೋರ್ ಅಧಿಕೃತವಾಗಿ ಯಾವುದನ್ನೂ ಖಚಿತಪಡಿಸಿಲ್ಲ.

ಕಳೆದ ಕೆಲ ತಿಂಗಳುಗಳ ಹಿಂದೆ ಪ್ರಶಾಂತ್ ಕಿಶೋರ್ ಕಾಂಗ್ರೆಸ್ ಪಕ್ಷ ಸೇರಲು ಸಜ್ಜಾಗಿದ್ದಾರೆ ಎಂದು ಕೂಡ ಹೇಳಲಾಗಿತ್ತು. 2024ರ ಲೋಕಸಭಾ ಚುನಾವಣೆಗೆ ಕಾಂಗ್ರೆಸ್ ಪಕ್ಷದ ಪರವಾಗಿ ಚುನಾವಣಾ ಸ್ಟ್ರಾಟಜಿ ರೂಪಿಸಲು ಪ್ರಶಾಂತ್ ಕಿಶೋರ್ ರನ್ನ ಕಾಂಗ್ರೆಸ್ ಬಳಸಿಕೊಳ್ಳುತ್ತೆ ಎಂದು ಕೂಡ ಹೇಳಲಾಗಿತ್ತು. ಆದರೇ, ಪ್ರಶಾಂತ್ ಕಿಶೋರ್ ಕಾಂಗ್ರೆಸ್ ಎಂಟ್ರಿಗೆ ಪಕ್ಷದ ಹಿರಿಯ ನಾಯಕರ ವಿರೋಧ ಇತ್ತಂತೆ. ಹೀಗಾಗಿ ಪ್ರಶಾಂತ್ ಕಿಶೋರ್ ಕಾಂಗ್ರೆಸ್ ಸೇರಿಲ್ಲ.

ಕೆಲ ತಿಂಗಳುಗಳ ಹಿಂದೆ ದೇಶದ ರಾಜಕೀಯ, ಕಾಂಗ್ರೆಸ್ ಗೆ ಚುನಾವಣಾ ಸ್ಟ್ರಾಟಜಿ ರೂಪಿಸುವ ಬಗ್ಗೆ ಸೋನಿಯಾ, ರಾಹುಲ್, ಪ್ರಿಯಾಂಕಾ ಗಾಂಧಿಗೆ ಪ್ರಶಾಂತ್ ಕಿಶೋರ್ ಪ್ರಸಂಟೇಷನ್ ನೀಡಿದ್ದರು. ಆದರೇ, ಈಗ ಪ್ರಶಾಂತ್ ಕಿಶೋರ್ ರನ್ನು 2022ರ ಡಿಸೆಂಬರ್ ನಲ್ಲಿ ನಡೆಯುವ ವಿಧಾನಸಭಾ ಚುನಾವಣೆಗೆ ತಮ್ಮ ಪಕ್ಷದ ಪರ ಚುನಾವಣಾ ಸ್ಟ್ರಾಟಜಿ ರೂಪಿಸಲು ನೇಮಿಸಿಕೊಳ್ಳಲು ಕಾಂಗ್ರೆಸ್ ಕೂಡ ಆಸಕ್ತಿ ಹೊಂದಿದೆ. ಆದರೇ, ಬಿಜೆಪಿ ನಾಯಕರು ಈಗಾಗಲೇ ಪ್ರಶಾಂತ್ ಕಿಶೋರ್ ಜೊತೆಗೆ ಮಾತುಕತೆ ನಡೆಸಿದ್ದಾರೆ. 2024ರ ಲೋಕಸಭಾ ಚುನಾವಣೆಗೆ ವಿಪಕ್ಷಗಳನ್ನು ಒಗ್ಗೂಡಿಸುವ ಕೆಲಸದಲ್ಲೂ ಪ್ರಶಾಂತ್ ಕಿಶೋರ್ ಪರೋಕ್ಷವಾಗಿ ತೊಡಗಿಸಿಕೊಂಡಿದ್ದರು. ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ರನ್ನು ಎರಡು ಮೂರು ಬಾರಿ ಭೇಟಿಯಾಗಿ ಮಾತುಕತೆ ನಡೆಸಿದ್ದರು. ಆದರೇ, ಈಗ ಗುಜರಾತ್‌ನ ಆಡಳಿತ ಪಕ್ಷದತ್ತಲೇ ಪ್ರಶಾಂತ್ ಕಿಶೋರ್ ಹೋಗ್ತಾರಾ? ಪ್ರಶಾಂತ್ ಮುಂದಿನ ನಡೆ ಏನು? ಎಂಬುದು ಕುತೂಹಲಕ್ಕೆ ಕಾರಣವಾಗಿದೆ.

ಗುಜರಾತ್‌ನಲ್ಲಿ 10 ಕಾಂಗ್ರೆಸ್ ಶಾಸಕರ ಮೇಲೆ ಬಿಜೆಪಿ ಕಣ್ಣಿಟ್ಟಿದೆ ಎಂದು ರಾಜಸ್ಥಾನದ ಶಾಸಕರೊಬ್ಬರು ಮಾಡಿದ ಟ್ವೀಟ್ ಗ್ರ್ಯಾಂಡ್ ಓಲ್ಡ್ ಪಾರ್ಟಿಯ ಗುಜರಾತ್ ಘಟಕದಲ್ಲಿ ಬಿರುಸಿನ ಚಟುವಟಿಕೆಗಳಿಗೆ ಕಾರಣವಾಗಿದೆ. ಶಾಸಕರು ಹಿಂದಿಯಲ್ಲಿ ಟ್ವೀಟ್ ಮಾಡಿದ್ದಾರೆ. "ಗುಜರಾತ್ ವಿಧಾನಸಭಾ ಚುನಾವಣೆ 2022 ? ಬಿಜೆಪಿ 10 ಕಾಂಗ್ರೆಸ್ ಶಾಸಕರ ಮೇಲೆ ಕಣ್ಣಿಟ್ಟಿದೆ, ಆರೋಗ್ಯವಾಗಿರಿ ಮತ್ತು ಜಾಗರೂಕರಾಗಿರಿ" ಎಂದು ಟ್ವೀಟ್ ಮಾಡಿದ್ದು, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ, ಐಎನ್‌ಸಿ ಇಂಡಿಯಾ ಮತ್ತು ಐಎನ್‌ಸಿ ಗುಜರಾತ್‌ಗೆ ಟ್ಯಾಗ್ ಮಾಡಿದ್ದಾರೆ.

ಬಿಜೆಪಿಯೊಂದಿಗೆ ಸಂಪರ್ಕದಲ್ಲಿದ್ದಾರೆ ಎನ್ನಲಾದ ಕೆಲವು ಶಾಸಕರನ್ನು ಪಕ್ಷದ ನಾಯಕರು ಕರೆದು ಮಾತನಾಡಿದ್ದಾರೆ. 10 ಶಾಸಕರು ನಿರ್ಗಮಿಸಿದರೆ ವಿಧಾನಸಭೆಯಲ್ಲಿ ಕಾಂಗ್ರೆಸ್ ಬಲ 50 ಶಾಸಕರಿಗೆ ಇಳಿಯಲಿದೆ. ಕಾಂಗ್ರೆಸ್ ನ ಹಿರಿಯ ನಾಯಕರೊಬ್ಬರ ಜೊತೆ ಮಾತನಾಡಿದಾಗ, ಈ ಬೆಳವಣಿಗೆಯಿಂದ ಅವರು ಬೆಚ್ಚಿ ಬೀಳಲಿಲ್ಲ. ಅವರ ತರ್ಕ ಹೀಗಿತ್ತು, ಈ 10 ಶಾಸಕರು ಮುಂಬರುವ ಚುನಾವಣೆಯಲ್ಲಿ ಟಿಕೆಟ್ ಗಿಟ್ಟಿಸದೇ ಇರಬಹುದು. ಇದು ಪಕ್ಷಕ್ಕೆ ಹೆಚ್ಚಿನ ವ್ಯತ್ಯಾಸವನ್ನುಂಟು ಮಾಡುವುದಿಲ್ಲ ಎಂದಿದ್ದಾರೆ.

ಆದರೇ, ಮತ್ತೊಂದೆಡೆ ಪ್ರಧಾನಿ ಮೋದಿ ಈಗಾಗಲೇ 2022ರ ಡಿಸೆಂಬರ್ ನಲ್ಲಿ ಗುಜರಾತ್ ವಿಧಾನಸಭಾ ಚುನಾವಣೆಗೆ ಪ್ರಚಾರವನ್ನು ಆರಂಭಿಸಿದ್ದಾರೆ. ಪಂಚ ರಾಜ್ಯ ವಿಧಾನಸಭಾ ಚುನಾವಣೆ ಗೆದ್ದ ಮಾರನೇ ದಿನವೇ ಗುಜರಾತ್ ಗೆ ಹೋಗಿ ಎರಡು ದಿನ ಬೇರೆ ಬೇರೆ ಸಭೆ, ಸಮಾರಂಭ ನಡೆಸಿದ್ದಾರೆ. ಜನರನ್ನು ಉದ್ದೇಶಿಸಿ ಭಾಷಣ ಮಾಡಿದ್ದಾರೆ. ಇವೆಲ್ಲವೂ ಮುಂದಿನ ವಿಧಾನಸಭಾ ಚುನಾವಣೆ ಗಮನದಲ್ಲಿಟ್ಟುಕೊಂಡು ಈಗಿನಿಂದಲೇ ಮಾಡುತ್ತಿರುವ ಚಟುವಟಿಕೆಗಳು. ಈಮಧ್ಯೆ ಈಗ ಕಿಶೋರ್ ಎಂಟ್ರಿಗೆ ಎಲ್ಲಾ ಸಿದ್ದತೆಗಳು ನಡೆಯುತ್ತಿವೆಯಂತೆ ಈಗಾಗಲೇ ಒಂದು ಸುತ್ತಿನ ಮಾತುಕತೆಯೂ ನಡೆದಿದ್ದು ಶೀಘ್ರ ಅವರು ತಮ್ಮ ಕರ್ಮಭೂಮಿಯತ್ತ ಮುಖಮಾಡಲಿದ್ದಾರೆ.



# ಕನ್ನಡ ನಾಡಿನ ಚರಿತ್ರೆಗೆ ಹಲವು ಪ್ರಥಮಗಳನ್ನು ನೀಡಿದ ಜಿಲ್ಲೆ ಚಿತ್ರದುರ್ಗ

ಪರಿಶೋಧನೆ



ಡಾ.ಎಸ್.ವೈ.ಸೋಮಶೇಖರ್
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಂಶೋಧನಾ ಕ್ಷೇತ್ರಕಾರ್ಯದ ಮಟ್ಟಿಗೆ ಹೇಳುವುದಾದರೆ ನನ್ನ ಜೀವನದಲ್ಲಿ ಇಡೀ ಜಿಲ್ಲೆಯ ಪ್ರತಿ ಗ್ರಾಮವನ್ನೂ ಬಿಡದೆ ಸುತ್ತಿನೋಡಿದ ಜಿಲ್ಲೆಗಳಲ್ಲಿ ಕೊಪ್ಪಳದ ನಂತರ ಚಿತ್ರದುರ್ಗವೇ ಆಗಿದೆ. ಅದರಲ್ಲೂ ನಾನು ಹುಟ್ಟಿ ಬೆಳೆದ ಜಿಲ್ಲೆಯೆಂಬ ದಾವಂತದಲ್ಲಿ ಎಲ್ಲ ಗ್ರಾಮಗಳನ್ನೂ ನೋಡುವ ತವಕ ತುಸು ಹೆಚ್ಚೇ ಇತ್ತೆನ್ನಿ. ದುರ್ಗವನ್ನು ನಾನು ಪ್ರವೇಶಿಸಿದುದು ಎಂಟನೆಯ ತರಗತಿಯ ಓದಿಗೆಂದು. ಅಲ್ಲಿನ ಚಿನ್ಮೂಲಾದ್ರಿ ಪ್ರೌಢಶಾಲೆಯು ಶಿಕ್ಷಣ ಮತ್ತು ಹಿಂದುಳಿದ ವರ್ಗಗಳ ವಸತಿನಿಲಯವು ಆಶ್ರಯದ ತಾಣವಾಗಿದ್ದವು. ಈ ಹೊತ್ತಿನಲ್ಲಿ ಗೆಳೆಯರೊಂದಿಗೆ ದುರ್ಗದ ನೋಡಲು ಬೆಟ್ಟಗುಡ್ಡ, ಕೋಟೆ, ದೇಗುಲ, ಜೋಗಿಮಟ್ಟಿ, ಹಿಮವತ್ಕೇದಾರ, ಚಂದ್ರವಳ್ಳಿಯ ಗುಹೆ ಮತ್ತು ಕೆರೆಗಳನ್ನು ನೋಡುವುದೆಂದರೆ ಎಲ್ಲಿಲ್ಲದ ಉತ್ಸಾಹ. ಅದರಲ್ಲೂ ಹಾಸ್ಟೆಲ್‌ನಲ್ಲಿ ಇರುವವರಿಗೆ ವಾರಸ್ನಾನದ ನೆಚ್ಚಿನ ನೀರಿನ ತಾಣ ಬೆಟ್ಟದ ಮೇಲಿನ ಗೋಪಾಲಸ್ವಾಮಿ ಹೊಂಡವೇ ಆಗಿತ್ತು. ಈ ಹೊಂಡದಲ್ಲಿ ಈಜಾಡಿ, ಬಟ್ಟೆಬರೆಗಳನ್ನು ಸ್ವಚ್ಛಗೊಳಿಸಿ, ಭಾನುವಾರದ ವಿಶೇಷ ಚಿತ್ರಾನ್ನ ಮತ್ತು ಹೆಸರುಬೇಳೆ ಪಾಯಸವನ್ನು ಸವಿಯುವುದೇ ಒಂದು ಸೊಗಸಾಗಿತ್ತು. ಈ ಬಗೆಯ ತಿರುಗಾಟ ಪದವಿಯವರೆಗೂ ನಡೆದೇ ಇತ್ತು. ಇಂತಹ ಚಾರಿತ್ರಿಕ ಮತ್ತು ವೈವಿಧ್ಯಮಯ ಸಾಂಸ್ಕೃತಿಕ ಸಂಪತ್ತನ್ನು ಹೊಂದಿದ ಚಿತ್ರದುರ್ಗ ಜಿಲ್ಲೆಯನ್ನು ಸಂಶೋಧಕನಾಗಿ ನೋಡುವ ಅವಕಾಶ ದೊರೆತದ್ದು ನನ್ನ ಸೌಭಾಗ್ಯವೇ ಸರಿ. ಜಿಲ್ಲೆಯ ಎಲ್ಲ ಗ್ರಾಮಗಳ ಪರಿಸರವನ್ನು ನೋಡುವ, ಅಲ್ಲಿನ ವೈವಿಧ್ಯತೆ ಸವಿಯುವ ಏಕಮಾತ್ರ ಅವಕಾಶ ಅದು ನನ್ನದೇ ಆಗಿರಬೇಕು. ಅಂತಹ ಸುವರ್ಣಾವಕಾಶ ನೀಡಿದ ಕನ್ನಡ ವಿಶ್ವವಿದ್ಯಾಲಯಕ್ಕೆ ನಾನು ಚಿರಋಣಿ. ಚಿತ್ರದುರ್ಗವು ಆದಿ ಕಾಲದಿಂದಲೂ ಮಾನವನ ಪ್ರಸಿದ್ಧ ವಸತಿ ತಾಣ. ಹಳೆಯ ಶಿಲಾಯುಗದಿಂದ ಹಿಡಿದು ಕಬ್ಬಿಣಯುಗದವರೆಗೆ, ಅಶೋಕನಿಂದ ಹಿಡಿದು ಮದಕರಿನಾಯಕ, ಟಿಪ್ಪುಸುಲ್ತಾನ್ ಕಾಲದವರೆಗೆ ಚರಿತ್ರೆಯನ್ನು ತನ್ನ ಒಡಲಲ್ಲಿ ಹುದುಗಿಸಿಕೊಂಡಿದೆ.



ಚಿತ್ರದುರ್ಗ ಜಿಲ್ಲೆಯು ಕರ್ನಾಟಕದ ಮಧ್ಯರಂಗವಾಗಿದ್ದು, ಉತ್ತರ ಮತ್ತು ದಕ್ಷಿಣ ಕರ್ನಾಟಕದ ಎಲ್ಲ ಬಗೆಯ ವೈವಿಧ್ಯತೆಗಳನ್ನು ತನ್ನಲ್ಲಿ ಅರಗಿಸಿ ಮೈಗೂಡಿಸಿಕೊಂಡಿದೆ. ಕರ್ನಾಟಕದ ಚರಿತ್ರೆಯಲ್ಲಿ ಚಿತ್ರದುರ್ಗ ಜಿಲ್ಲೆಗೆ ವಿಶಿಷ್ಟ ಸ್ಥಾನವಿದೆ. ಇದಕ್ಕೆ ಈ ಜಿಲ್ಲೆಯಲ್ಲಿ ಕಂಡುಬಂದಿರುವ ಅನೇಕ ಭೌಗೋಳಿಕ, ಪ್ರಾಕ್ಚಾರಿತ್ರಿಕ ಹಾಗೂ ಚಾರಿತ್ರಿಕ ಸಂಗತಿಗಳನ್ನು ಉದಾಹರಿಸಬಹುದು. ಜಿಲ್ಲೆಯ ಮರಡಿಹಳ್ಳಿಯ ಲಾವಾದಿಂದ ಉಂಟಾದ ದಿಂಬುರಚನೆ(ಪಿಲ್ಲೊಲಾವಾ) ಶಿಲೆಯು 270ಕೋಟಿ ವರ್ಷಗಳಷ್ಟು ಹಿಂದೆ ಸಮುದ್ರದ ತಳಭಾಗವಾಗಿತ್ತೆಂದು ದೃಢೀಕರಿಸಿದ್ದಾರೆ. ಇಂತಹ ಶಿಲಾರಚನೆ ಜಗತ್ತಿನ ಕೆಲವೇ ಸ್ಥಳಗಳಲ್ಲಿದ್ದು, ಕರ್ನಾಟಕದ ಮಟ್ಟಿಗೆ ಧಾರವಾಡದ ಚಂದನಮಟ್ಟಿಯಲ್ಲಿ ಮಾತ್ರ ದೊರೆತಿದೆ. ಈ ಜಿಲ್ಲೆಯು ಕನ್ನಡ ನಾಡಿನ ಚರಿತ್ರೆಗೆ ಹಲವು ಪ್ರಥಮಗಳನ್ನು ನೀಡಿದೆ. ಅಶೋಕನ ಕಾಲದ ಮೌರ್ಯ ಸಾಮ್ರಾಜ್ಯವು ದಕ್ಷಿಣ ಭಾರತ, ಅದರಲ್ಲೂ ಕರ್ನಾಟಕದವರೆಗೂ ವಿಸ್ತರಿಸಿತ್ತೆಂಬುದನ್ನು 1892ರಲ್ಲಿ ಬಿ.ಎಲ್.ರೈಸ್ ಅವರು ಜಿಲ್ಲೆಯ ಶಾಸನಗಳ ಮೂಲಕ ಜಗತ್ತಿಗೆ ಸಾರಿದರು. ಬ್ರಾಹ್ಮಿ ಲಿಪಿ ಮತ್ತು ಪ್ರಾಕೃತ ಭಾಷೆಯ ಬ್ರಹ್ಮಗಿರಿಯ ಅಕ್ಷರಗುಂಡು, ಎಮ್ಮತಮ್ಮನಗುಂಡು, ಜಟಂಗಿರಾಮೇಶ್ವರದ ಬಳೆಗಾರರ ಗುಂಡುಗಳ ಮೇಲೆ ಕೆತ್ತಲಾದ ಮೂರು ಶಾಸನಗಳು ಕರ್ನಾಟಕವಷ್ಟೇ ಏಕೆ ? ಭಾರತದ ಪ್ರಾಚೀನ ಲಿಪಿಗಳೇ ಆಗಿವೆ. ಪುರಾತತ್ವದಲ್ಲಿ ಉತ್ಖನನದ ಪಾತ್ರ ಪ್ರಮುಖ. ಕರ್ನಾಟಕದ ಪ್ರಾಗಿತಿಹಾಸವನ್ನು ಮೊಟ್ಟಮೊದಲು ವೈಜ್ಞಾನಿಕವಾಗಿ ನೋಡಲು ಸಾಧ್ಯವಾದದ್ದು ಎಂ.ಹೆಚ್.ಕೃಷ್ಣ ಮತ್ತು ಮಾರ್ಟಿಮರ್ ವೀಲ್ಹರ್ ಕೈಗೊಂಡ ಬ್ರಹ್ಮಗಿರಿ ಮತ್ತು ಚಂದ್ರವಳ್ಳಿಯಲ್ಲಿ ನಡೆದ ಕ್ರಮಬದ್ಧ ಉತ್ಖನನಗಳಿಂದ ಎಂಬುದು ಹೆಮ್ಮೆಯ ಸಂಗತಿ. ಅಲ್ಲದೆ ಕರ್ನಾಟಕದ ಪ್ರಾಚೀನ ಪಟ್ಟಣವಾದ ಇಸಿಲಾ ಇಂದಿನ ಬ್ರಹ್ಮಗಿರಿ ಆಗಿದ್ದುದೂ ಗಮನಾರ್ಹ. ಬ್ರಹ್ಮಗಿರಿ ಬೆಟ್ಟದಲ್ಲಿ ಸ್ವಾಭಾವಿಕ ಬಂಡೆಗಲ್ಲುಗಳನ್ನು ತಡೆಗೋಡೆಗಳಾಗಿ ನಿರ್ಮಿಸಿದ ತಂತ್ರವು ಪ್ರಾಚೀನ ಕೋಟೆಗೋಡೆಯ ಆರಂಭಿಕ ರಚನೆಯಾಗಿದೆ. ಹಾಗೆಯೇ ಜಿಲ್ಲೆಯ ಚಿತ್ರದುರ್ಗ ಮತ್ತು ಮೊಳಕಾಲ್ಮೂರು ಮೊದಲಾದ ಕೋಟೆಗಳ ರಚನಾ ವಿನ್ಯಾಸ ಮತ್ತು ತಂತ್ರಜ್ಞಾನಗಳು ಆಧುನಿಕ ತಂತ್ರಜ್ಞರನ್ನು ಬೆರಗುಗೊಳಿಸಿವೆ. ಚಿತ್ರದುರ್ಗದ ಕಲ್ಲಿನ ಕೋಟೆಯು ರಕ್ಷಣಾ ವಾಸ್ತುಶಿಲ್ಪ ತಂತ್ರಜ್ಞಾನಕ್ಕೆ ಹಿಡಿದ ಕೈಗನ್ನಡಿಯೇ ಸರಿ.

ದೇವಾಲಯಗಳ ಮಟ್ಟಿಗೂ ಬ್ರಹ್ಮಗಿರಿಯ ಉತ್ಖನನದಲ್ಲಿ ಕಂಡುಬಂದ ಚೈತ್ಯಾಕಾರದ ಕಟ್ಟಡವೇ ಕರ್ನಾಟಕದ ಪ್ರಾಚೀನ ಧಾರ್ಮಿಕ ವಾಸ್ತು. ಕ್ರಿ.ಪೂ ಮೂರನೆಯ ಶತಮಾನದಲ್ಲಿ ಅಸ್ತಿತ್ವದಲ್ಲಿದ್ದ ಬೌದ್ಧಧರ್ಮದ ನೆಲೆಗಟ್ಟು ಇದರಿಂದ ಪ್ರಕಟವಾದಂತಾಯಿತು. ಇದಲ್ಲದೆ ಪ್ರಾಚೀನ ಇಟ್ಟಿಗೆ ದೇವಾಲಯಗಳ ಆಗರವೇ ಈ ಜಿಲ್ಲೆಯೆಂದರೆ ಅತಿಶಯೋಕ್ತಿಯಾಗಲಾರದು. ಇದಕ್ಕೆ ಜಟಂಗಿರಾಮೇಶ್ವರ, ಇಸಾಮುದ್ರ, ಹುಲ್ಲೂರು, ಗಂಗಸಮುದ್ರ, ಮಳಲಿ, ಮರಡಿದೇವಿಕೆರೆಯ ಇಟ್ಟಿಗೆ ದೇಗುಲಗಳು ಕಾರಣವಾಗಿವೆ. ಕರ್ನಾಟಕದಲ್ಲೇ ಅತಿಹೆಚ್ಚು ಗುಹಾ ದೇಗುಲಗಳನ್ನು ಹೊಂದಿದ ಜಿಲ್ಲೆ ಚಿತ್ರದುರ್ಗವೇ ಆಗಿದೆ. ಇದಕ್ಕೆ ದುರ್ಗದ ಬೆಟ್ಟದಲ್ಲಿರುವ ಸಂಪಿಗೆ ಸಿದ್ಧೇಶ್ವರ, ಹಿಡಿಂಬೇಶ್ವರ, ಪಲ್ಗುಣೇಶ್ವರ, ಬನಶಂಕರಿ, ಏಕನಾಥಿ ಮೊದಲಾದ ದೇವಾಲಯಗಳು ಸಾಕ್ಷ್ಯಗಳಾಗಿವೆ.


ಕರ್ನಾಟಕವು ವಿದೇಶಗಳೊಂದಿಗೆ ವ್ಯಾಪಾರ ಸಂಪರ್ಕವನ್ನು ಬಹಳ ಹಿಂದೆಯೇ ಹೊಂದಿದ್ದಿತೆಂಬ ಸತ್ಯವನ್ನು ಮೊಟ್ಟಮೊದಲು ಪ್ರಕಟಪಡಿಸಿದ್ದುದು ಚಂದ್ರವಳ್ಳಿಯ ಉತ್ಖನನ. ಅಲ್ಲಿ ದೊರೆತ ರೋಮ್ ಚಕ್ರವರ್ತಿಗಳಾದ ಅಗಸ್ಟಸ್ ಮತ್ತು ಟೈಬೀರಿಯಸ್‌ರ ನಾಣ್ಯಗಳು ರೋಮ್ ದೇಶದೊಂದಿಗೆ ಇದ್ದ ವ್ಯಾಪಾರ-ವಾಣಿಜ್ಯವನ್ನು ಸಾಬೀತುಪಡಿಸಿವೆ.

ಚಂದ್ರವಳ್ಳಿಯ ಕೆರೆಯನ್ನು ಕ್ರಿ.ಶ.450ರಲ್ಲಿ ಕದಂಬ ಅರಸ ಮಯೂರವರ್ಮ ದುರಸ್ತಿಗೊಳಿಸಿದನೆಂದು ಅಲ್ಲಿನ ಶಾಸನದಿಂದ ತಿಳಿಯುತ್ತದೆ. ಅಂದರೆ ಶಾತವಾಹನ ಕಾಲದ ಹೊತ್ತಿಗೇ ಈ ಕೆರೆಯು ನಿರ್ಮಾಣವಾಗಿತ್ತೆಂಬುದು ಗಮನಾರ್ಹ. ಇದು ಶಾಸನಗಳಲ್ಲಿ ಉಲ್ಲೇಖವಾದ ಅತ್ಯಂತ ಪ್ರಾಚೀನ ಕೆರೆಯೆಂಬ ಹೆಗ್ಗಳಿಕೆಯನ್ನು ಹೊಂದಿದೆ.

ಕರ್ನಾಟಕದ ಪ್ರಾಚೀನ ಪ್ರಶಸ್ತಿ ಮತ್ತು ಪ್ರಥಮ ವೀರಗಲ್ಲು ಶಾಸನ ಕಂಡುಬಂದಿರುವುದು ಇಲ್ಲಿನ ತಮ್ಮಟಕಲ್ಲು ಗ್ರಾಮದಲ್ಲಿ ಎಂಬುದನ್ನೂ ಗಮನಿಸಬೇಕು. ಕ್ರಿ.ಶ. 5ನೆಯ ಶತಮಾನದಲ್ಲಿ ಗುಣಮಧುರನನ್ನು ಬಣ್ಣಿಸುವ ಜೊತೆಗೆ ಅದಕ್ಕೆ ಸಂಬಂಧಿಸಿದ ವೀರರ ಉಬ್ಬುಶಿಲ್ಪಗಳನ್ನೂ ಕಡೆದಿರುವುದು ಗಮನಾರ್ಹ. ಗಂಜಿಗಟ್ಟೆ ಗ್ರಾಮದ ರಂಗಪ್ಪನ ಗುಡ್ಡದಲ್ಲಿರುವ ಭೀಮೇಶ್ವರ ದೇಗುಲದ ಶಾಸನದಲ್ಲಿ ಚಂದಿಮರಸ ದೇವರಿಗೆ ಶ್ರೀ ಬಿಜೋಬೆ ಎಂಬುವವಳು ದಾನ ನೀಡಿದ ವಿವರವಿದೆ. ಇವಳು ದೇವಾಲಯವೊಂದಕ್ಕೆ ದಾನನೀಡಿದ ಕರ್ನಾಟಕದ ಮೊಟ್ಟಮೊದಲ ಪ್ರಾಚೀನ ಮಹಿಳೆಯಾಗಿದ್ದಾಳೆ. ಇವಳನ್ನು ಬಾದಾಮಿ ಚಾಲುಕ್ಯ ಮನೆತನದ ವಿಜಯಭಟ್ಟಾರಿಕೆ ಎಂಬುದಾಗಿ ಬಿ. ರಾಜಶೇಖರಪ್ಪ ಅವರು ಗುರುತಿಸಿದ್ದಾರೆ. ಜಾನಪದ ದಂತಕಥೆ, ಜನಪದ ಸಾಹಿತ್ಯದ ಸಿರಿಯೇ ಆಗಿದ್ದ ಸಿರಿಯಜ್ಜಿಯ ನೆಲೆ ಇದೇ ಜಿಲ್ಲೆಯ ಯಲಗಟ್ಟೆ ಗೊಲ್ಲರಹಟ್ಟಿ.. ಸ್ವಾತಂತ್ರ್ಯ ಹೋರಾಟಕ್ಕೆ ಸ್ಫೂರ್ತಿ ನೀಡಿದ ಈಚಲುಮರ ಸತ್ಯಾಗ್ರಹಕ್ಕೆ ಕಾರಣವಾದ ತುರುವನೂರು ಇಲ್ಲಿನದೇ.

ಹೀಗೆ ಕರ್ನಾಟಕದ ಚರಿತ್ರೆಗೆ ಹಲವು ಪ್ರಥಮಗಳನ್ನು ನೀಡಿದ ಕೀರ್ತಿ ಚಿತ್ರದುರ್ಗ ಜಿಲ್ಲೆಗೆ ಸಲ್ಲುತ್ತದೆ. ಹೀಗೆ ಜಿಲ್ಲೆಯಲ್ಲಿ ಚಾರಿತ್ರಿಕ ಸಂಗತಿಗಳನ್ನು ಸಾರುವ ಆದಿಮ ನೆಲೆಗಳು, ಶಾಸನಗಳು, ಕೋಟೆ-ಕೊತ್ತಲಗಳು, ದೇವಾಲಯ, ವೀರಗಲ್ಲು-ಮಹಾಸತಿಗಲ್ಲುಗಳು, ಕೆರೆ-ಬಾವಿ-ಕೊಳ ಮೊದಲಾದ ಪೂರ್ವಜರ ಕುರುಹುಗಳು ಅಧ್ಯಯನಕಾರರು ಮತ್ತು ಸಂಸ್ಕೃತಿಪ್ರಿಯರನ್ನು ಬಡಿದೆಬ್ಬಿಸುವಂತಿವೆ. ಪುರಾತತ್ವ, ಚರಿತ್ರೆ, ಭಾಷೆ, ಸಾಹಿತ್ಯ, ಜಾನಪದ, ಬುಡಕಟ್ಟು ಮತ್ತು ಮೌಖಿಕ ಸಂಸ್ಕೃತಿಗಳ ದೊಡ್ಡ ಆಗರವೇ ಆಗಿರುವ ಈ ಜಿಲ್ಲೆಯಲ್ಲಿ ನಡೆದಷ್ಟು ಅಧ್ಯಯನ ಮತ್ತು ಸಂಶೋಧನೆಗಳು ಕರ್ನಾಟಕದ ಬೇರಾವ ಜಿಲ್ಲೆಯಲ್ಲೂ ನಡೆದಿಲ್ಲವೆನ್ನಬಹುದು. ಹಾಗಿದ್ದೂ ಇನ್ನೂ ಅನೇಕ ಸಂಗತಿಗಳನ್ನು ತನ್ನ ಒಡಲಲ್ಲಿ ಜತನದಿಂದ ಕಾಪಿಟ್ಟುಕೊಂಡಿದೆ. ಇವೆಲ್ಲವುಗಳ ಜೊತೆಗೆ ಆಧುನಿಕ ದಿನಮಾನದಲ್ಲಿ ಅತಿಹೆಚ್ಚು ಗಾಳಿ ವಿದ್ಯುತ್ ಉತ್ಪಾದಿಸುವ ಸ್ಥಳವೂ ಚಿತ್ರದುರ್ಗ ಜಿಲ್ಲೆಯೇ ಅಗಿದೆ.

## ಎಲ್ಲವೂ ಮುಗಿಯಿತು



ಎಲ್ಲವೂ ಎಲ್ಲದೂ
ಗತಿಸಿ ಹೋದ ಗತ ಕಾಲದ
ಮುಂದೆ
ಭರವಸೆಗಳ ಕನಸ ಕಟ್ಟಲಾರೆ
ಇರುವಷ್ಟು ದಿನ
ಇರುವುದರಲ್ಲಿಯೇ
ಹೆಜ್ಜೆ ಹಾಕುತಿರುವೆ

ಕಳೆದುಕೊಂಡ ಬಾಳ
ಪುಟಗಳಲಿ
ಮತ್ತೆ ಕೆದಕಿ ಅನುಭವಿಸುವಷ್ಟು
ರಸವತ್ತಾದ ಬದುಕು ನನ್ನದೆನಲ್ಲಾ

ಕಾಲದೊಂದಿಗೆ ಕಾಳಗ ನಡೆಸಿ
ಕಟ್ಟಿಕೊಂಡ ಜಿಂದಗಿ
ನನ್ನ ಪಾಲಿಗದು ತುಂಬಾ
ಸವಾಲಿನದು

ಅನತಿ ದೂರದಲ್ಲಿರುವ
ಗುಡಿಯ ಮುಂದೆ ಕುಳಿತು
ಅಂಗಲಾಚಿದೆ ಅರಚಿದೆ
ಯಾವ ಕೈ ಗಳು ಕೈ ಹಿಡಿಯಲಿಲ್ಲ
ಹತ್ತಿರವೇ ಇದ್ದ ದೇವರು ಕೂಡಾ
ಹಾಗಂತಾ ಯಾರನ್ನೂ
ದೂರಲಾರೆ
ಅವರವರ ನೆಲೆ ಅವರವರದು

ಆಡಿದ ಅಂಗಳ
ನಕ್ಕು ನಲಿದಾಡಿದ ನೆಲವೂ
ಕೂಡಾ
ನನಗಿಂದು ಅಣಕಿಸುತಿವೆ

ಬಾಳ ಪಯಣದ
ಕೊನೆಯ ಅಂಕದ
ದಿರಿಸಿನಲ್ಲಿರುವೆ
ಈಗಲೋ ಆಗಲೋ
ತೆರೆ ಬೀಳಲಿದೆ
ಕೊನೆಯಾಗಿಸಬೇಕು ಋಣದ
ಬದುಕು
ಮನುಷ್ಯ ಜನ್ಮ
ಯಾರಿಗೆ ಸ್ವಂತ



ಡಾ.ಮಲ್ಲಿಕಾರ್ಜುನ. ಎಂ
ಸಹಾಯಕ ಪ್ರಾಧ್ಯಾಪಕರು
ಜಿ.ವಿ.ಪಿ.ಪಿ.ಸ.ಪ್ರ.ದ ಕಾಲೇಜು
ಹಗರಿಬೊಮ್ಮನಹಳ್ಳಿ

# ಎಸಿಬಿ ದಾಳಿಯಿಂದ ಏನಾದರೂ ಅಪರಾಧಿಗಳಿಗೆ ಶಿಕ್ಷೆಗಳಾಗಿವೆಯಾ?






ಪದೇ ಪದೇ ಎಸಿಬಿ ದಾಳಿ ನಡೆಯುತ್ತಿದೆ. ಕೋಟಿ ಕೋಟಿ ಹಣ, ಚಿನ್ನಾಭರಣ, ಆಸ್ತಿ ವಶಕ್ಕೆ ಪಡೆಯಲಾಗುತ್ತಿದೆ. ಆದರೆ ಎಷ್ಟು ಜನಕ್ಕೆ ಶಿಕ್ಷೆ ಆಗಿದೆ ಎನ್ನುವುದು ಈಗ ಪ್ರಶ್ನೆಯಾಗಿದೆ.

ಎಸಿಬಿಯಿಂದ ಇತ್ತೀಚಿನ ದಿನಗಳಲ್ಲಿ ನಡೆಯುತ್ತಿರುವ ದಾಳಿ ಪ್ರಕರಣಗಳಲ್ಲಿ ಎಷ್ಟು ಪ್ರಕರಣದಲ್ಲಿ ಶಿಕ್ಷೆಯಾಗಿದೆ? ಎಷ್ಟು ಪ್ರಕರಣದಲ್ಲಿ ಆಸ್ತಿ ಮುಟ್ಟುಗೋಲು ಆಗಿದೆ? ಕೇವಲ ಎಸಿಬಿ ದಾಳಿ ನಡೆಸಿದೆ ಆದರೆ . ಏನು ಕ್ರಮ ಆಗಿದೆ ಅನ್ನೋದು ಯಾರಿಗೂ ಮಾಹಿತಿ ಇಲ್ಲ. ಕೇವಲ ಕಣ್ಣೊರೆಸುವ ತಂತ್ರವೇ ಎನದನುವುದು ಇಲ್ಲಿ ಮೂಲ ಪ್ರಶ್ನೆಯಾಗಿದೆ.

ಎಸಿಬಿ ದಾಳಿ ತೋರ್ಪಡಿಕೆಗೆ ನಡೆಯುತ್ತಿದೆ. ಇದರಿಂದ  ಯಾವುದೇ ಪರಿಣಾಮ ಆಗುತ್ತಿಲ್ಲ. ಭ್ರಷ್ಟರಿಗೆ ಶಿಕ್ಷೆ ಆದರೆ ಜನರಿಗೆ ಇಂಥ ದಾಳಿಗಳ ಮೇಲೆ ನಂಬಿಕೆ ಬರುತ್ತದೆ.

ಒಂಬತ್ತು ಮಂದಿ ಬಿಡಿಎ ಮಧ್ಯವರ್ತಿಗಳ ಮನೆ ಮೇಲೆ ದಾಳಿ ನಡೆಸಿರುವ ಎಸಿಬಿ ಅಧಿಕಾರಿಗಳು, ಕೆ.ಜಿ.ಗಟ್ಟಲೆ ಚಿನ್ನ, ಭಾರಿ ಪ್ರಮಾಣದ ನಗದು, ಆಸ್ತಿ ಪತ್ತೆ ಹಚ್ಚಿದ್ದು, ಬಿಡಿಎಗೆ ಸಂಬಂಧಪಟ್ಟ ಹಲವು ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ. ಅರಮನೆಯಂತಹ ಮನೆಗಳು, ಶೇಖರಿಸಿಟ್ಟಿದ್ದ ಚಿನ್ನಾಭರಣ ಕಂಡು ಅಧಿಕಾರಿಗಳೇ ಬೆಚ್ಚಿ ಬಿದ್ದಿದ್ದಾರೆ.

ಇತ್ತೀಚೆಗೆ ಬಿಡಿಎ ಕಚೇರಿಯ ಮೇಲೆ ದಾಳಿ ನಡೆಸಿದ್ದ ಎಸಿಬಿ, ಸಾವಿರಾರು ಕೋಟಿ ರೂ. ಭ್ರಷ್ಟಾಚಾರವೆಸಗಿರುವ ದಾಖಲೆಗಳನ್ನು ವಶಪಡಿಸಿಕೊಂಡು, ಈ ಸಂಬಂಧ ಬಿಡಿಎ ಅಧಿಕಾರಿ, ಕೇಸ್ ವರ್ಕರ್ ಸೇರಿ 9 ಮಂದಿಯನ್ನು ಬಂಧಿಸಿತ್ತು. ಭ್ರಷ್ಟಾಚಾರದಲ್ಲಿ ಅಧಿಕಾರಿಗಳ ಜತೆ ಮಧ್ಯವರ್ತಿಗಳೂ ಭಾಗಿಯಾಗಿದ್ದಾರೆ ಎಂಬ ಬಗ್ಗೆ ಮಾಹಿತಿ ಸಿಕ್ಕಿತ್ತು. ಈ ಹಿನ್ನೆಲೆಯಲ್ಲಿ ಮಂಗಳವಾರ ಮುಂಜಾನೆ 9 ಮಂದಿ ಮಧ್ಯವರ್ತಿಗಳ ಮನೆ, ಕಚೇರಿ ಮೇಲೆ ದಾಳಿ ನಡೆಸಿ ಶಾಕ್ ನೀಡಿತು.

ಈ ಹಿಂದೆ ಎಸಿಬಿ ಪೊಲೀಸರು ಬಿಡಿಎ ಮೇಲೆ ದಾಳಿ ನಡೆಸಿದ ಸಮಯದಲ್ಲಿ ಬಿಡಿಎ ಖಾಲಿ ನಿವೇಶನವನ್ನು ಅಕ್ರಮವಾಗಿ ನೋಂದಣಿ ಮಾಡುವುದು, ಹಣ ನೀಡಿದವರಿಗೆ ಕಾರ್ನರ್ ನಿವೇಶನ ನೋಂದಣಿ ಹಾಗೂ ಸತ್ತವರ ಹೆಸರಿನಲ್ಲೂ ನಿವೇಶನ ನೋಂದಣಿ ಮಾಡಿ ಭ್ರಷ್ಟಾರವೆಸಗಿರುವುದನ್ನು ಪತ್ತೆ ಹಚ್ಚಿದ್ದರು. ಈ ಭ್ರಷ್ಟಾಚಾರದಲ್ಲಿಅಧಿಕಾರಿಗಳ ಜತೆ ಈ ಒಂಬತ್ತು ಮಂದಿ ಮಧ್ಯವರ್ತಿಗಳು ಕೈಜೋಡಿಸಿದ್ದಾರೆ ಎಂಬ ಆರೋಪವಿತ್ತು. ಅಲ್ಲದೆ, ಈ ಸಂಬಂಧ ಹಲವರು ಬಿಡಿಎ ಅಧ್ಯಕ್ಷ ಎಸ್.ಆರ್. ವಿಶ್ವನಾಥ್ ಸೇರಿದಂತೆ ಎಸಿಬಿ ಅಧಿಕಾರಿಗಳಿಗೆ ದೂರು ನೀಡಿದ್ದರು.

ಈ ದೂರಿನನ್ವಯ ಪೊಲೀಸ್ ಅಧೀಕ್ಷಕ ಉಮಾ ಪ್ರಶಾಂತ್ ನೇತೃತ್ವದಲ್ಲಿಎಸಿಪಿ, ಇನ್ಸ್‌ಪೆಕ್ಟರ್‌ಗಳು, ಸಬ್ ಇನ್ಸ್‌ಪೆಕ್ಟರ್‌ಗಳೂ ಸೇರಿದಂತೆ 100 ಮಂದಿ ಸಿಬ್ಬಂದಿ 11 ತಂಡಗಳಾಗಿ ಏಕಕಾಲದಲ್ಲಿ ಮಂಗಳವಾರ ಮುಂಜಾನೆ 9 ಮಂದಿ ಬಿಡಿಎ ಮಧ್ಯವರ್ತಿಗಳಿಗೆ ಸೇರಿದ ಕಚೇರಿ, ಮನೆಗಳು ಸೇರಿ 11 ಕಡೆಗಳಲ್ಲಿ ಶೋಧ ಕಾರ್ಯ ನಡೆಸಲಾಗಿತ್ತು.

ದಾಳಿ ವೇಳೆ ಬಿಡಿಎಯಿಂದ ಫಲಾನುಭವಿಗಳಿಗೆ ನಿವೇಶನ ಹಂಚಿಕೆ, ಬಡಾವಣೆಗಳ ನಿರ್ಮಾಣ ಮಾಡಲು ಸ್ವಾಧೀನಪಡಿಸಿಕೊಳ್ಳಲಾದ ಜಮೀನಿನ ಮಾಲೀಕರಿಗೆ ಭೂ ಪರಿಹಾರ, ಡಿ–ನೋಟಿಫಿಕೇಶನ್‌ನಲ್ಲಿ ನಿವೇಶನ ಕಳೆದುಕೊಂಡವರಿಗೆ ಬದಲಿ ನಿವೇಶನ ಹಂಚಿಕೆಯಲ್ಲಿ ತಮ್ಮ ಪ್ರಭಾವ ಬಳಸಿಕೊಂಡು ಭ್ರಷ್ಟಾಚಾರವೆಸಗಿ ಅಪಾರ ಪ್ರಮಾಣದ ಸಂಪತ್ತು ಗಳಿಸಿರುವುದು ಕಂಡು ಬಂದಿದೆ.

ಜತೆಗೆ ಬಿಡಿಎ ಕಚೇರಿಯ ಅವ್ಯವಹಾರಕ್ಕೆ ಸಂಬಂಧಪಟ್ಟ ಹಲವಾರು ದಾಖಲೆಗಳು ಪತ್ತೆಯಾಗಿದ್ದು, ಅವುಗಳನ್ನು ವಶಕ್ಕೆ ಪಡೆದು ಪರಿಶೀಲಿಸಲಾಗುತ್ತಿದೆ. ಶೋಧ ಕಾರ್ಯ ನಡೆಯುತ್ತಲೇ ಇದೆ ಆದರೆ ಮುಂದೇನು ಎನ್ನುವುದು ಕುತೂಹಲವಾಗಿದೆ.

**ಆರ್.ಆರ್. ನಗರದ ತೇಜಸ್ವಿ:**

ದ್ವಿತೀಯ ಪಿಯುಸಿ ವ್ಯಾಸಂಗ ಮಾಡಿರುವ ತೇಜಸ್ವಿ, ಬಿಡಿಎ ಕಚೇರಿ ಮುಂಭಾಗ ಜೆರಾಕ್ಸ್ ಅಂಗಡಿ ಇಟ್ಟುಕೊಂಡಿದ್ದ. ಕಾಲ ಕಳೆದಂತೆ ಬಿಡಿಎ ಮಧ್ಯವರ್ತಿಯಾದ ಬಳಿಕ ಆರ್. ಆರ್. ನಗರದಲ್ಲಿ ತಮಿಳುನಾಡು ಮಾಜಿ ಸಚಿವ ವೀರಪಾಂಡ್ಯನ್ ಆರ್ಮುಗಂ ಪುತ್ರಿಯ ಬಂಗಲೆಯನ್ನು 14 ಕೋಟಿ ರೂ.ಗೆ ಖರೀದಿಸಿದ್ದರು. ಈ ಮನೆಯಲ್ಲಿ ಐಷಾರಾಮಿ ವಸ್ತುಗಳ ಜತೆ ಮನೆಯಲ್ಲಿ ಈಜುಕೊಳ ಹೊಂದಿದ್ದಾರೆ.

**ಮುದ್ದಿನಪಾಳ್ಯದ ಅಶ್ವತ್:**

ಮುದ್ದಿನಪಾಳ್ಯದ ಅಶ್ವಥ್ ಕೆಲ ವರ್ಷಗಳ ಹಿಂದೆ ಸಾಮಾನ್ಯ ಜೀವನ ಸಾಗಿಸುತ್ತಿದ್ದ. ಇದೀಗ ಜ್ಞಾನಭಾರತಿ ಆರ್‌ಟಿಒ ಕಚೇರಿ ಸಮೀಪ ಅರಮನೆಯಂತಹ ಬಂಗಲೆ ಕಟ್ಟಿಸಿದ್ದಾನೆ. ಈತನ ಬಳಿ ಕೋಟಿ ಬೆಲೆ ಬಾಳುವ ಹಲವಾರು ಐಷಾರಾಮಿ ಕಾರುಗಳಿರುವುದು ಪತ್ತೆಯಾಗಿದೆ. ಹಣ ಮಾಡಿದ ನಂತರ ರಾಜಕೀಯ ಸೇರುವ ಸಲುವಾಗಿ ಈತ ಸಚಿವರೊಬ್ಬರ ಬಳಿ ಮುಂಬರುವ ಬಿಬಿಎಂಪಿ ಚುನಾವಣೆಯಲ್ಲಿ ಟಿಕೆಟ್ ಕೊಡಿಸುವಂತೆ ಬೇಡಿಕೆ ಇಟ್ಟಿದ್ದ ಎನ್ನಲಾಗಿದೆ.

**ಮಲ್ಲತ್ತಹಳ್ಳಿ ಮುನಿರತ್ನ:**

ಮಲ್ಲತಹಳ್ಳಿಯ ಮುನಿರತ್ನನ ಮನೆಯಲ್ಲಿ ಬಿಡಿಎಗೆ ಸಂಬಂಧಿಸಿದ ಹಲವಾರು ಮಹತ್ವದ ದಾಖಲೆ ಪತ್ರಗಳು ಪತ್ತೆಯಾಗಿದ್ದು, ಇದರ ಪರಿಶೀಲನೆಗೆಂದು ಎಸಿಬಿ ಅಧಿಕಾರಿಗಳು, ಬಿಬಿಎಂಪಿ ಅಧಿಕಾರಿಯೊಬ್ಬರನ್ನು ಕರೆಸಿಕೊಂಡು ದಾಖಲೆಗಳ ಪರಿಶೀಲನೆ ನಡೆಸುತ್ತಿದ್ದಾರೆ.

**ಮನೋರಾಯನಪಾಳ್ಯದ ಮೋಹನ್:**



ಮನೋರಾಯನಪಾಳ್ಯದ ಮೋಹನ್ ಮನೆಯಲ್ಲಿ ಬೀರು, ಲಾಕರ್‌ಗಳಲ್ಲಿ4.960 ಕೆ.ಜಿ. ಚಿನ್ನಾಭರಣ, 15 ಕೆಜಿ ಬೆಳ್ಳಿ, 61 ಗ್ರಾಂ ವಜ್ರ ಪತ್ತೆಯಾಗಿದೆ. ಅಲ್ಲದೆ, ಕೋಟ್ಯಾಂತರ ನೋಟಿನ ಕಂತೆಗಳು ಪತ್ತೆಯಾಗಿವೆ. ಈತ ಬಿಡಿಎ ನಿವೇಶನ ಹಂಚಿಕೆ, ಬಡಾವಣೆ ನಿರ್ಮಾಣ ಸೇರಿದಂತೆ ಯಾವುದೇ ಕೆಲಸ ಮಾಡಿಕೊಟ್ಟರೂ ಶೇ.50 ರಷ್ಟು ಪಾಲನ್ನು ಕೇಳುತ್ತಿದ್ದ. ಹಾಗಾಗಿ, ಈತನನ್ನು ಫಿಫ್ಟಿ ಫಿಫ್ಟಿ ಮೋಹನ್ ಎಂದು ಖ್ಯಾತಿಯಾಗಿ ಎಂಬ ಆರೋಪವಿದೆ.

ಎಸಿಬಿ ಬಲೆಗೆ ಬಿದ್ದಿರುವ ಒಂಬತ್ತು ಮಂದಿ ಬ್ರೋಕರ್‌ಗಳ ಮನೆಗಳಲ್ಲಿ ಚಿನ್ನಾಭರಣ, ನಗದು, ಆಸ್ತಿ–ಪಾಸ್ತಿಗಳಲ್ಲದೆ, ಬ್ರಾಂಡೆಂಟ್ ಕನ್ನಡಕಗಳು, ವಾಚ್‌ಗಳು ಪತ್ತೆಯಾಗಿವೆ. ಅಲ್ಲದೆ, ಬಿಡಿಎ ಕಚೇರಿಗೆ ಸಂಬಂಧಿಸಿದ ಹಲವು ದಾಖಲೆಗಳನ್ನು ಪತ್ತೆ ಹಚ್ಚಿರುವ ಎಸಿಬಿ ಅಧಿಕಾರಿಗಳು, ಅವುಗಳನ್ನು ವಶಕ್ಕೆ ಪಡೆದು ಪರಿಶೀಲಿಸುತ್ತಿದ್ದಾರೆ.



## ಪೇಪರ್, ಹಾಲು ಹಾಕುತ್ತಿದ್ದ ಮೋಹನ್:

ಮೋಹನ್ ಕುಮಾರ್ ದೊಡ್ಡಬಳ್ಳಾಪುರದ ಮಳವಳ್ಳಿಯ ಗ್ರಾಮದಲ್ಲಿ ವಿದ್ಯಾಭ್ಯಾಸ ಮಾಡಿದ್ದಾರೆ. ಎಸ್ಎಸ್ಎಲ್‌ಸಿ ಮುಗಿಸಿದ್ದಾರೆ. ಇವರು ಮೊದಲಿಗೆ ಬೆಂಗಳೂರಿನಲ್ಲಿ ಪೇಪರ್, ಹಾಲು ವಿತರಣೆ ಮಾಡುತ್ತಿದ್ದರಂತೆ. ಬಳಿಕ ಬಿಡಿಎ ಅಧಿಕಾರಿಯ ಒಬ್ಬರಿಗೆ ಚಾಲಕನಾಗಿ ಸೇರಿಕೊಂಡರು. ಅಲ್ಲಿಂದ ಬಿಡಿಎ ಜೊತೆಗೆ ನಂಟು ಶುರುವಾಗಿದೆ. ಇವರಿಗೆ ಎರಡು ಮದುವೆ ಆಗಿದೆ. ಈಗ ಇರುವ ಖುಷಿ ಮನೆ ಮೊದಲ ಹೆಂಡತಿಗಾಗಿ ಪಡೆದಿದ್ದಾರೆ ಎಂದು ಹೇಳಲಾಗುತ್ತಿದೆ. ಸದ್ಯ ಮೊದಲನೆಯ ಹೆಂಡತಿ ಜೊತೆ ಡಿವೋರ್ಸ್ ಆಗಿದೆ. ಎರಡು ಹೆಂಡತಿ ಜೊತೆಗೆ ಜೀವನ ಮಾಡುತ್ತಿದ್ದಾರೆ. ಮನೆಯ ಪಕ್ಕದಲ್ಲಿ ಒಂದು ಫುಲ್ ಸೈಟ್ ಕೂಡ ಇದೆ.





# ವಿವಾಹ ವೇದ

## ಅಧ್ಯಾಯ-3

ಮದುವೆಯೇಕೆ?

ಯುವತಿ ಯುವಕರನ್ನ 'ಮದುವೆಯಾಯಿತಾ?' ಅಂತ ಕೇಳುತ್ತೇವೆಯೇ ಹೊರತು 'ಮದುವೆ ಮಾಡಿಕೊಳ್ಳುತ್ತೀರಾ' ಅಂತ ಸಾಮಾನ್ಯವಾಗಿ ನಾವು ಕೇಳಲಾರೆವು.

ಮದುವೆ ಮಾಡಿಕೊಳ್ಳದಿರುವುದು ವಿಶೇಷವೇ ವಿನಃ ಮದುವೆ ಮಾಡಿಕೊಳ್ಳುವುದು ವಿಶೇಷವಲ್ಲ ಅಲ್ಲವೇ!

ಏನಕ್ಕೆಂದರೆ ವಯಸ್ಸಿಗೆ ಬಂದ ಪ್ರತಿಯೊಬ್ಬರೂ ಮದುವೆ ಮಾಡಿಕೊಳ್ಳಲು ತಹ ತಹಿಸುತ್ತಾರೆ. ಅವರ ತಂದೆ ತಾಯಿಯರು ಅವರಿಗೆ ಮದುವೆ ಮಾಡಿ ತಮ್ಮ ಜವಾಬ್ದಾರಿ ತೀರಿಸಿಕೊಳ್ಳಬೇಕೆಂದು ಆತುರ ಪಡುತ್ತಾರೆ.

ಮದುವೆ ಒಂದಾನೊಂದು ವಯಸ್ಸಿನೊಳಗೆ ಮಾಡಿಕೊಳ್ಳಬೇಕಾದ ಅವಸ್ಥೆ! ತಪ್ಪಲ್ಲದ ಸರಿಯಾದ ಸಾಮಾಜಿಕ ಪ್ರಕ್ರಿಯೆ!

ಮದುವೆಯೇಕೆ ಮಾಡಿಕೊಳ್ಳುತ್ತಿರೆಂದು ಕೇಳಿದರೆ ಬಗೆ ಬಗೆಯಾದ ಕಾರಣಗಳು ವಾದಗಳು ಕೇಳಿಸಬಹುದು.ಎಲ್ಲದರೊಳಗೂ ಸ್ವಲ್ಪವಾದರೂ ಸತ್ಯ ಇರುವುದೇ ವಿವಾಹದ ವಿಶೇಷ!

ವಿವಾಹ ವ್ಯವಸ್ಥೆ ಸಮಗ್ರವಾದ, ಸಂಕೀರ್ಣವಾದ, ಉನ್ನತವಾದ ಮಾನವ ವಿಕಾಸದ ತರಂಗಿಣಿ!

ಮದುವೆ ಇಲ್ಲದೇ ಹೋದರೆ?

ಮನುಷ್ಯ ಪ್ರಾಣಿಯಾಗುತ್ತಾನೆ.ಅನಾಗರಿಕ ಕಾಲ ಮತ್ತೆ ಬರುತ್ತದೆ. ಸಮಾಜ ಅಸ್ತವ್ಯಸ್ಥವಾಗಿ ಬಿಡುತ್ತದೆ.

ವಿಕೃತ ಸಂಬಂಧಗಳು, ಸ್ತ್ರೀಯರಿಗಾಗಿ ಹೊಡೆದಾಟಗಳು, ಸ್ತ್ರೀಯರ ಮೇಲೆ ಅತ್ಯಾಚಾರಗಳು, ಪೋಕರಿಗಳಾಗಿ ಬದಲಾಗೋ ಮಕ್ಕಳು, ಒಬ್ಬಂಟಿ ಪೇರೆಂಟ್ಸ್. ಅನಾಥರಾಗುವ ಮಕ್ಕಳು, ನಿರ್ಲಕ್ಷಕ್ಕೆ ಗುರಿಯಾಗುವ ವೃದ್ಧರು, ಯಾರೂ ಹಚ್ಚಿಕೊಳ್ಳದ ರೋಗಿಷ್ಟರು..ಮದುವೆ ಇಲ್ಲದ ಆ ಸಮಾಜದ ಊಹೆಯೇ ಭಯಾನಕ!

ಲೈಂಗಿಕ ವಿಶ್ರಂಖಲೆಗಳಿಗೆ ಸಂಕೋಲೆಗಳನ್ನ ಹಾಕಬೇಕು. ಮನುಷ್ಯನ ಮನಸ್ಸನ್ನ ನಿಯಂತ್ರಿಸಬೇಕು. ನಿಯಮ ನಿಬಂಧನೆಗಳ ನ್ಯಾಯಾಲಯದಲ್ಲಿ ಭಯವಿರುವಂತೆ ಮಾಡಬೇಕು. ಸಾಮಾಜಿಕ ಜವಾಬ್ದಾರಿವಂತರನ್ನ ಸ್ವೀಕರಿಸುವಂತೆ ಮಾಡ ಬೇಕು.

ಆಗಲೇ ಸಮಾಜ ಸಹಜೀವನ ಕೇಂದ್ರವಾಗುತ್ತದೆ.ಅದಕ್ಕಾಗಿಯೇ ಮದುವೆಯು ತಪ್ಪಲ್ಲ ಸರಿಯಾದುದೇ!

ಮದುವೆಗೆ ಮೊದಲಾಗಲಿ, ನಂತರವಾಗಲಿ, ವಿವಾಹೇತರ ಸಂಬಂಧದಿಂದ ಜನಿಸಿದ ಸಂತಾನಕ್ಕೆ ಆದರಣೆ ಇರದು.ಆಸ್ತಿಯೊಳಗೆ ಭಾಗವಿರದು.ಸಮಾಜದೊಳಗೆ ಗೌರವವಿರದು.

ಅಂತಹ ಸಂತಾನವಿರುವ ಜನಾಂಗಕ್ಕೆ ಗೌರವ ಮರ್ಯಾದೆಗಳಿರವು.

ಮಾನವ ಜಾತಿ ಹಾಗೆ ಪತನವಾಗಬಾರದೆಂದು ಏರ್ಪಾಡು ಮಾಡಿದ ಕಠಿಣ ನಿಯಮವೇ ಮದುವೆ!

ಜೊತೆ ಬೇಕು

ಮನುಷ್ಯ ಒಬ್ಬಂಟಿಯಾಗಿ ಬೇರೆ ಬೇರೆಯಾಗಿ ಜೀವಿಸಲಾರ .ಪಶು ಪಕ್ಷಿಗಳೂ ಕೂಡಾ ಜೊತೆ ಕೋರುತ್ತವೆ.

ಜೀವನದೊಳಗೆ ಹೆಚ್ಚು ಕಾಲ ಕೂಡಿರಲಿಕ್ಕೆ ಗಂಡಿಗೆ ಹೆಣ್ಣು,ಹೆಣ್ಣಿಗೆ ಗಂಡಿನ ಜೊತೆ ಅಗತ್ಯ.

ಒಬ್ಬರಿಗೊಬ್ಬರು ಆಸರೆಯಾಗಿ ನಿಂತಾಗಲೇ ಕುಟುಂಬ ಜವಾಬ್ದಾರಿಗಳನ್ನು ಜೀವನ ಕ್ರಿಯೆಗಳನ್ನ ಸಕ್ರಮವಾಗಿ ಅವರು ನಿರ್ವಹಿಸಬಲ್ಲರು.ಮನಸ್ಸು ಶರೀರ ಎರಡೂ ಸಂಪೂರ್ಣವಾಗಿ ಸಹಕರಿಸಿದರೇನೇ ಅದು ಸಾಧ್ಯ.

ಸ್ತ್ರೀ ಪುರುಷರಿಬ್ಬರಿಗೆ ಕೆಲ ಕೆಲ ಪ್ರತ್ಯೇಕ ಲಕ್ಷಣಗಳಿರುತ್ತವೆ. ಕೆಲ ಶಕ್ತಿಗಳಿರುತ್ತವೆ. ಕೆಲ ಬಲ ಹೀನತೆಗಳೂ ಇರುತ್ತವೆ. ಮದುವೆ ಮೂಲಕ ಅವರ ಎಲ್ಲಾ ಲೋಪದೋಷಗಳು ತೀರಿ ಒಂದು ಶಕ್ತಿಯಾಗಿ ಅವರು ಬದಲಾಗುತ್ತಾರೆ. ಈ ಕಾರಣಕ್ಕೇ ಮದುವೆ ಅಗತ್ಯ.

ಜೀವನ ರಥಕ್ಕೆ ಇಬ್ಬರು ಎರಡು ಚಕ್ರಗಳಾಗಿ ಬದಲಾಗುತ್ತಾರೆ. ಆಗಲೇ ಅವರ ಜೀವನ ಪಯಣ ಹಾಯಾಗಿ ಸಾಗುತ್ತದೆ.ಮದುವೆಯಿಂದಾಗಿ ಭೌತಿಕವಾಗಿಯೇ ಅಲ್ಲ, ಮಾನಸಿಕವಾಗಿ,ಆಧ್ಯಾತ್ಮಿಕವಾಗಿ ಒಬ್ಬರು ಇನ್ನೊಬ್ಬರಿಗೆ 'ಕೈ ಕೈ ನೀಡಿ' ನೆರವಾಗುತ್ತಾರೆ.

ಜನಾಂಗ ಸಂರಕ್ಷಣೆ

ಪ್ರತಿ ಜೀವಿ, ಪ್ರತಿ ಜನಾಂಗ, ಪರಂಪರೆ ಅಭಿವೃದ್ಧಿ ಹೊಂದುತ್ತಾ ಎಂದಿಗೂ ಮುಂದುವರೆಯುತ್ತಿರಬೇಕು. ಅದೇ ಪ್ರಕೃತಿಯೊಳಗಿನ ಆತ್ಮ ಸಂರಕ್ಷಣೆ ಇಲ್ಲವೇ ಜೀವ ಸಂರಕ್ಷಣೆ.

ಗಿಡ ಬೆಳೆಯುವುದು ಹೂ ಬಿಡಲಿಕ್ಕೆ, ಹೂ ಅರಳುವುದು ಹಣ್ಣು ಆಗಲಿಕ್ಕೆ ,ಹಣ್ಣು ಮಾಗುವುದು ಮತ್ತೆ ಗಿಡಕ್ಕೆ ಜನ್ಮ ನೀಡಲಿಕ್ಕೆ. ಇದು ಪ್ರಕೃತಿಯೇ ತೆಗೆದುಕೊಂಡ ಎಚ್ಚರ!

ಚಲಿಸದ ಗಿಡಮರಗಳು ಚಲಿಸೋ ಸಮಸ್ತ ಜೀವ ಜಂತುಜಾಲಗಳು ಹುಟ್ಟುತ್ತ ಸಾಯುತ್ತಲಿರುವುದಕ್ಕೆ ಆ ಪ್ರಕ್ರಿಯೆ ನಿರಂತರ ಸಾಗಲಿಕ್ಕೆ ಪ್ರಕೃತಿಯೇ ಕೆಲವು ಉಪಾಯಗಳನ್ನ ಸೂಚಿಸಿದೆ. ಅದೇ ಗಂಡು ಹೆಣ್ಣುಗಳ ಮಿಲನ!

ಹಸಿವು ನಿದ್ರೆ ಎಷ್ಟು ಸಹಜವೋ ಯುಕ್ತ ವಯಸ್ಸು ಬರುವುದರೊಳಗೆ ಮೈಥುನಾಕಾಂಕ್ಷೆ ಕೂಡಾ ಅಷ್ಟೇ ಸಹಜ ಅದರಿಂದ ಯಾರೂ ತಪ್ಪಿಸಿಕೊಳ್ಳಲಾರರು. ಅದುವೇ ಪ್ರಕೃತಿಯ ಕಾರ್ಯ.ಅನಿವಾರ್ಯ ಸಂಯೋಗ!

ಪ್ರಕೃತಿಯಿಂದ ಮದುವೆ ಹದಕ್ಕೆ ಬಂದ ಜಂತು ಜಾಲ ಜೊತೆ ಕಟ್ಟುತ್ತವೆ. ಕೇವಲ ಸಂತಾನಕ್ಕಾಗಿ ತಮ್ಮ ಸಮೂಹ ವೃದ್ಧಿ ಮಾಡಿಕೊಳ್ಳುವುದಕ್ಕಾಗಿ ಕ್ರೀಡಿಸುತ್ತವೆ. ಜೊತೆಯಾಗುವುದು ಒಂದು ನಿರ್ಣಿತ ಋತುವಿನೊಳಗೆ ಮೂಡೋ ಒಂದು ಪ್ರಕೃತಿ ಚರ್ಯೆ.

ಆ ನಂತರ ಯಾರಿಗೋ ಅವರೇ..

ಹಾಲು ನೀಡುವುದು ಬೆಳೆಸುವುದು ರಕ್ಷಣೆಯಾಗಿ ನಿಲ್ಲುವುದು ಹೆಣ್ಣು ಜೀವದ ಕೆಲಸ. ಮಗುವಿಗಾಗಿ ಕಟ್ಟು ಬೀಳುವ ನಿಯಮ ಮಗು ಬೆಳೆಯುವ ತನಕ ಇರುತ್ತದೆ. ಗೂಡಿನೊಳಗಿನ ಶಿಶುವನ್ನ ಕಾಪಾಡಿಕೊಳ್ಳಲಿಕ್ಕೆ ಅಮ್ಮ ಧಣಿವಿಲ್ಲದೆ ಹಾರಾಡುತ್ತದೆ.ಸ್ವ ಸುಖವನ್ನ ಸಹಿತ ಮರೆತುಬಿಡುತ್ತದೆ.

ಅದು ಪ್ರಕೃತಿ ನಿಯಮ ವಂಶ ರಕ್ಷಣೆಗಾಗಿ ಏರ್ಪಟ್ಟ ವಿಧಿ!

ಆದಿಮ ಕಾಲದೊಳಗೆ ಮನುಷ್ಯರೂ ಪಶುಗಳಂತೆಯೇ ಪ್ರವರ್ತಿಸುತ್ತಿದ್ದರು.

ಸ್ವಚ್ಛಂದವಾಗಿ ವಿಹರಿಸುವುದು, ಜೊತೆಗೂಡುವುದು ನಡೆಯುತಿತ್ತು. ಅವುಗಳ ಬಯಕೆಗೆ ನಿಷೇಧ, ಅಂಕೆ ಇಂತಹವುಗಳೇನೂ ಇರಲಿಲ್ಲ.ಅವನ್ನ ತಿಳಿದುಕೊಳ್ಳಬೇಕೆಂಬ ಇರಾದೆಯೂ ಇರಲಿಲ್ಲ.

ಕಾಮ ತೃಷೆಯಾದಾಗ ಜೊತೆಗೂಡುವುದೇ ಸಹಜ ಕಾರ್ಯವಾಗಿತ್ತು.

ಭಿನ್ನತೆಯೇನೆಂದರೆ ಪ್ರಾಣಿಗಳಿಗೆ ಅಶ್ಲೀಲತೆಗಳಿವೆ ಮನುಷ್ಯರಿಗಿಲ್ಲ! ಅಂದರೆ ಸ್ತ್ರೀ ಪುರುಷ ಸಂಬಂಧ ಪ್ರಕೃತಿಯೊಳಗೇ ಇದೆ.

ಮದುವೆ ಇರದಿದ್ದರೂ ಈ ಸಂಬಂಧ ಇರುತ್ತದೆ.ಪ್ರಕೃತಿ ಸಾಗುತ್ತದೆ. ಅಂದರೆ ಪ್ರಕೃತಿ ಚಲನಗೆ ಮದುವೆ ಅಪ್ರಧಾನ್ಯ ಮದುವೆಯಿರದಿದ್ದರೂ ಸೃಷ್ಟಿಗೆ ಅಂತಹ ನ್ಯೂನ್ಯತೆ ನಷ್ಟಗಳಿಲ್ಲ.

ಸ್ತ್ರೀ ಪುರುಷರಿಬ್ಬರಿಗೂ ಪ್ರಕೃತಿಯೊಳಗೆ ಇರುವ ಸಂಬಂಧವನ್ನ ಕೊಂಚ ವಿರೋಧಿಸುವುದೇ ಮದುವೆ ಅಂತಾರೆ ತಾಪಿ ಧರ್ಮರಾವ್. ರೂಪಾಂತರ ಕ್ರಮದೊಳಗೆ ಮದುವೆ ಹಿಂದಿನ ಕಾಲದೊಳಗೆ ಎಲ್ಲಾ ಒಂದೇ ವಂಶವಿತ್ತು. ಸಮೂಹವೆಲ್ಲಾ ಒಂದೇ ಕುಟುಂಬ. ಸಂತಾನ ಯಾರಿಗೆ ಹುಟ್ಟಿದರೂ ವಂಶಾಭಿವೃದ್ಧಿಯೇ. ಎಲ್ಲರಿಗೆ ಹತ್ತಿರವಾಗುವಂತೆ ಇರುವ ಒಬ್ಬ ಹೆಣ್ಣನ್ನ ಒಬ್ಬನಿಗೋ ಒಂದು ಗುಂಪಿಗೋ ಮಾತ್ರ ಇರುವಂತೆ ನಿಯೋಜಿಸಲಾಗಿತ್ತು.

ಹೆಣ್ಣು ಮಕ್ಕಳಿಗೆ ಉಪಯೋಗಕರವಾಗಿ ಇರೋ ಒಬ್ಬ ಗಂಡನ್ನ ಒಂದು ಬಂಧಕ್ಕೆ ಪರಿಮಿತಗೊಳಿಸಿತು ಮದುವೆ.



ತೆಲುಗು ಮೂಲ:
ಸಿಂಹ ಪ್ರಸಾದ್
ಕನ್ನಡಕ್ಕೆ:
ಡಾ.ಶಿವಕುಮಾರ್ ಕಂಪ್ಲಿ

ಅಂದರೆ ಸ್ತ್ರೀ ಪುರುಷರ ಮಧ್ಯದ ಸಂಬಂಧವನ್ನ ಮದುವೆ ನಿಯಂತ್ರಿಸಿದೆ. ನಿರ್ಭಂಧಿಸಿದೆ. ನಿಯಮಗಳನ್ನ ಕೈಗಳ ಮೂಲಕ ಬಿಗಿಸಿದೆ. ಬದಲಾಗುವ ಸಾಮಾಜಿಕ ಪರಿಸ್ಥಿಗಳಿಗೆ ನಿದರ್ಶನ ಮದುವೆ.ಅದು ಅನಿವಾರ್ಯವಾದುದು.

ಬೇಟೆ- ಪಶುಪಾಲನೆ-ವ್ಯವಸಾಯ-ಈ ಬದಲಾವಣೆಗಳೊಳಗೆ ಮನುಷ್ಯನಿಗೆ ಮತ್ತೊಬ್ಬರ ಜೊತೆ ಮತ್ತು ಸಹಾಯ ಅಗತ್ಯವಾಗಿತ್ತು. ಕೆಲಸಕಾರ್ಯದೊಳಗೆ ಸಹಾಯ ಮಾಡಲಿಕ್ಕೆ, ಬೇಟೆಯಾಡಿ ತಂದಿದ್ದನ್ನ ಹಂಚಿಕೊಳ್ಳಲಿಕ್ಕೆ, ಆಹಾರವನ್ನ ಜಾಗ್ರತೆಯಾಗಿ ಕಾಪಾಡಲಿಕ್ಕೆ ಹೆಣ್ಣಿನ ಜೊತೆಗಾರಿಕೆ ಅಗತ್ಯವಾಯಿತು.

ಒಬ್ಬರು ಒಬ್ಬರೊಂದಿಗೇ ಇರುವುದು, ಒಬ್ಬರನ್ನೇ ಸಂಗಾತಿಯನ್ನಾಗಿ ಇರಿಸಿಕೊಂಡಿರುವುದು ಪ್ರಾರಂಭವಾಯಿತು.ಬೇಕಾ ಬಿಟ್ಟಿ ವಿಹಾರಕ್ಕೆ ಅಂಕೆಗಳು ಏರ್ಪಟ್ಟವು.

ಸ್ವಯಂ ಆಯುಧಗಳು,ಸ್ವಯಂ ಆಸ್ತಿ, ನೆರವೇರುವ ವೇಳೆಗೆ ಆ ಬಂಧ ಮತ್ತಷ್ಟೂ ಗಟ್ಟಿಗೊಂಡಿತು.ಮದುವೆಯಾಗಿ ರೂಪ ಪಡೆದುಕೊಂಡಿತು.ಆಸ್ತಿ ಪಾಸ್ತಿಗಳನ್ನ, ಅಧಿಕಾರಗಳನ್ನ, ತಾನು ತನ್ನ ಸಂತಾನಗಳಿಗೂ ಸಿಗಬೇಕೆಂಬ ಕೋರಿಕೆ ಏಕಪತಿ ನಿಂಧನೆಗೆ ಮೂಲವಾಯಿತು.

ಮದುವೆ ಪ್ರಾರಂಭವಾದಮೇಲೆ ಸಮೂಹಗಳೊಳಗೆ ಹೊಸ ಹೊಸ ನಿಯಮಗಳು ನಿಬಂಧನೆಗಳು ಸ್ಥಳ ಪಡಕೊಂಡವು. ವ್ಯಕ್ತಿ,ಸಮಾಜ ವಿಕಾಸಗಳಿಗನುಗುಣವಾಗಿ ಬದಲಾವಣೆಗಳು ಬಂದವು.

ಪ್ಲೇಟೋ ಆದರ್ಶ ರಾಜ್ಯ

ಪ್ರಪಂಚದ ಪ್ರಖ್ಯಾತ ತತ್ವಜ್ಞಾನಿ ಪ್ಲೇಟೋ ಒಂದು ಆದರ್ಶ ರಾಜ್ಯವನ್ನ ಕಲ್ಪಿಸಿದರು. ಅದರೊಳಗೆ ಸ್ವಂತ ಆಸ್ತಿಗಳು, ಸ್ವಂತ ಕುಟುಂಬಗಳು, ಇರಬಾರದು.ಅವು ಸ್ವಾರ್ಥವನ್ನ ಬೆಳೆಸುತ್ತವೆ.ಸ್ತ್ರೀ ಪುರುಷರು ಯಾರು ಯಾರೊಂದಿಗಾದರೂ ಶಾರೀರಿಕ ವಾಂಛೆಗಳನ್ನ ತೀರಿಸಿಕೊಳ್ಳಬಹುದು. ಹುಟ್ಟಿದ ಮಕ್ಕಳಿಗೆ ರಾಜ್ಯ ವ್ಯವಸ್ಥೆಯು ನಡೆಸುವ ಶಿಶು ಸಂರಕ್ಷಣಾಲಯದೊಳಗೆ ಸೇರಿಸುತ್ತಾರೆ.

ಅವರನ್ನ ಪೌರರನ್ನಾಗಿ ತಿದ್ದಿ ತೋಡೋ ಜವಾಬ್ದಾರಿ ಮತ್ತು ಶಿಕ್ಷಣ ನೀಡುತ್ತಾರೆ.

ಕುಟುಂಬ ವ್ಯವಸ್ಥೆ ಸ್ತ್ರೀಯರ ಸ್ವತಂತ್ರ್ಯವನ್ನ ಪರಿಹರಿಸುತ್ತದೆಂದು ಪ್ಲೇಟೋ ತನ್ನ ರಿಪಬ್ಲಿಕ್ ಗ್ರಂಥದೊಳಗೆ ಅಭಿಪ್ರಾಯ ಪಟ್ಟರು. ವಿಚಿತ್ರವೆಂದರೆ ಆನಂತರ ಆ ನಂತರ ಪ್ರೇಟೋ ಈ ಅಭಿಪ್ರಾಯವನ್ನ ಬದಲಿಸಿದ್ದಾರೆ. 'ಖಿಊಇ ಐಂಘಖ' ನೊಳಗೆ ಏನೆಂದಿದ್ದಾರೆಂದರೆ-

"ಯಾರೂ ಮರಣಿಸಬೇಕೆಂದು ಕೋರಲಾರರು.ತಮ್ಮ ಸಂತಾನದ ಮೂಲಕ ಈ ಲೋಕದೊಳಗೆ ಕಾಲ ಕಾಲವು ಜೀವಿಸುತ್ತಾ ಅಮರತ್ವವನ್ನ ಸಾಧಿಸಬೇಕೆಂದು ಕೋರಿಕೊಳ್ಳುತ್ತಾರೆ" ವಿವಾಹ,ಕುಟುಂಬ ವ್ಯವಸ್ಥೆಗಳ ಅವಶ್ಯಕತೆಯನ್ನು ಗುರ್ತಿಸುವುದೇ ವಿನಃ ಪ್ರತಿಯೊಬ್ಬರೂ ವಿಧಿವತ್ತಾಗಿ ವಿವಾಹ ಮಾಡಿಕೊಳ್ಳಬೇಕೆನ್ನುತ್ತಾರೆ. ಪ್ಲೇಟೋ- ಅಲ್ಲಿಗೇ ನಿಲ್ಲದಂತೆ ಒಂದು ಹೆಜ್ಜೆ ಮುಂದುವರೆದು ಮೂವತ್ತೈದು ವಯಸ್ಸಾದರೂ ವಿವಾಹ ಮಾಡಿಕೊಳ್ಳದ ಪುರುಷನನ್ನ ಶಿಕ್ಷಿಸಬೇಕೆಂದರು.!

ಅರಿಸ್ಟಾಟಲ್ ದಾರ್ಶನಿಕತೆ

ಪ್ಲೇಟೋ ಶಿಷ್ಯ ಪ್ರಾಚೀನ ಗ್ರೀಕ್ ದಾರ್ಶನಿಕ ಅಸಾಧಾರಣ ಮೇಧಾವಿಯಾದ ಅರಿಸ್ಟಾಟಲ್ ಏನೆನ್ನುತ್ತಿದ್ದಾರೋ ನೋಡಿರಿ- " ಪ್ಲೇಟೋ ಆದರ್ಶ ರಾಜ್ಯದೊಳಗೆ ಪ್ರತಿಯೊಬ್ಬರಿಗೂ ನೂರು ಜನ ಮಕ್ಕಳಿರುತ್ತಾರೆ. ಆದರೆ ತನ್ನ ಮಗ ಯಾರೋ ತಿಳಿಯದು.ಹಾಗೇ ಪ್ರತಿ ಮಗುವಿಗೂ ನೂರು ಜನ ತಂದೆಯರಿರುತ್ತಾರೆ. ಆದರೆ ತನ್ನ ತಂದೆ ಯಾರೊ ತಿಳಿಯದು. ಹೀಗೆ ಯಾರು ಯಾರಿಗೂ ಸೇರದ ವ್ಯವಸ್ಥೆ ತುಂಬಾ ಹಾನಿಕರವಾದುದು.

ಸಾಮಾನ್ಯ ಪ್ರಜೆಗಳೇ ಅಲ್ಲ ಪಾಲಕರಿಗೂ ಕೂಡ ಸ್ವಂತ ಕುಟುಂಬಗಳಿರುವುದು ಅಗತ್ಯವೇ. ಕುಟುಂಬ ಜೀವನದೊಳಗೆ ಅನುರಾಗ ವಾತ್ಸಲ್ಯ ಅವರ ಅನುಭವದೊಳಗೆ ಬರಬೇಕು. ಮಕ್ಕಳು ವಯಸ್ಸು ಬರುವ ತನಕ ಅಪ್ಪ ಅಮ್ಮಂದಿರ ಅಂಕೆಯೊಳಗೇ ಇರುವುದು ಅಗತ್ಯ. ಮಕ್ಕಳು ಹುಟ್ಟುವ ಜೊತೆಗೆ ಆರೋಗ್ಯವಂತರಾಗಿ ಇರಬೇಕೆಂದರೆ ಶಾರೀರಿಕ ಮಾನಸಿಕ ಪರಿಪಕ್ವತೆ ಬಂದ ನಂತರವೇ ವಿವಾಹಗಳು ಜರುಗಬೇಕು."

ಮನುಷ್ಯ ಸಂಘಜೀವಿ ಯಾರೂ ನಾನು ಬೇರೆ ಸಮೂಹ ಬೇರೆ ಅಂತ ಅಂದುಕೊಳ್ಳಲಾರರು.ವ್ಯಕ್ತಿಗಳ ಸೇರುವಿಕೆಯೇ ಸಂಘ.ವ್ಯಕ್ತಿಗಳು ಸೇರಿದರೇ ವ್ಯಷ್ಟಿ ಸಮಷ್ಟಿಯಾಗುತ್ತದೆ. ಹುಟ್ಟಿದಂದಿನಿಂದ ಸಾಯುವತನಕ ಮನುಷ್ಯ ಒಂಟಿಯಾಗಿ ಇರಲಾರ.ಒಂಟಿಯಾಗೇ ಬದುಕಲಾರ.

ಆತನ ಶಾರೀರಿಕ ಮಾನಸಿಕ ಅವಸರಗಳನ್ನ ತೀರಿಸಲಿಕ್ಕಾಗಿ ಸಮಾಜದೊಳಗೆ ಇತರ ವ್ಯಕ್ತಿಗಳು ಅಷ್ಟೇ ಅಗತ್ಯ. ಮುಖ್ಯವಾಗಿ ಸುಖ ದುಃಖದೊಳಗೆ,ಶರೀರ ಅಸ್ವಸ್ಥತೆಗೆ ಒಳಗಾದಾಗ,ಮುಪ್ಪಾದಾಗ,ಚೈತನ್ಯ ಶಕ್ತಿ ಉಡುಗಿದಾಗ ಪ್ರತಿ ಮನುಷ್ಯನಿಗೆ ಇನ್ನೊಬ್ಬ ಮನುಷ್ಯನ ಸಾಂಗತ್ಯ ಅಗತ್ಯ.ತನ್ನ ಭಾವಗಳು ಅನುಭವಗಳು,ಅನುಭೂತಿಗಳು ಇತರರೊಂದಿಗೆ ಹಂಚಿಕೊಳ್ಳಬೇಕು.ಆಗಲೇ ಆತನ ಜೀವನ ತೃಪ್ತಿಯಾಗಿ,ಆನಂದವಾಗಿ ಸಾಗುತ್ತದೆ. ಆಹಾರ ಸಂಪಾದನೆಗೆ ಅಂದರೆ ಉದ್ಯೋಗಗಳಿಗೆ, ವಿಹಾರ ವಿನೋದಗಳಿಗೆ,ಆತ್ಮ ರಕ್ಷಣೆಗೆ, ಆಸ್ತಿ ರಕ್ಷಣೆಗೆ,ಮಕ್ಕಳ ಓದಿಗೆ,ಸಂರಕ್ಷಣೆಗೆ,ಆರೋಗ್ಯಕ್ಕೆ ಮನಶ್ಯಾಂತಿಗೆ- ಎಲ್ಲದಕ್ಕೂ ಕೂಡಾ- ಅಂದರೆ ಬದುಕಲಿಕ್ಕೆ ಮನುಷ್ಯ ಸಮಾಜದ ಮೇಲೆ ಆಧಾರಪಡದೆ ತಪ್ಪದು.

ಸಮೂಹದೊಳಗೆ ಏಕವಾಗಿ ಸೇರಿಹೋಗಲಿಕ್ಕಾಗಿಯೇ ಮದುವೆ ವಿಷಯದೊಳಗೂ ಸಹಿತ ಸಾಮಾಜಿಕ ನಿಯಮಗಳನ್ನ ಪಾಲಿಸಬೇಕು. ಅಚರಿಸಬೇಕು.

ಆಗಲೇ ಎಲ್ಲರೊಳಗೂ ತಾನು, ಎಲ್ಲರೊಂದಿಗೆ ತಾನು, ಎಲ್ಲರಿಗಾಗಿ ತಾನು. ತನಗಾಗಿ ಎಲ್ಲರೂ ಆಗುತ್ತಾರೆ.! ಮದುವೆ ಜವಾಬ್ದಾರಿಯೊಂದಿಗೆ ಕೂಡಿದ ದೈನಂದಿನ ಜೀವನ ಯಾನ. ಆ ಯಾತ್ರೆಯ ಸಫಲತೆ ಸಮಾಜದ ಮೇಲೆ, ಸಮಾಜಿಕ ಸಂಬಂಧಗಳ ಮೇಲೆ ಆಧಾರ ಪಟ್ಟಿರುತ್ತದೆ.

ಮದುವೆ ಕಾಮಕ್ಕಾಗಿಯೇ..

ವಿವಾಹ ನ್ಯಾಯಬದ್ಧವಾದ ವ್ಯಭಿಚಾರ ಎಂದಿದ್ದಾರೆ ಪಾಶ್ಚಾತ್ಯರು.

ಅವರ ದೃಷ್ಟಿಯೊಳಗೆ ಮದುವೆ ಸೆಕ್ಸಗಾಗಿಯೇ.ವಿವಾಹ ಪೂರ್ವದ ಲೈಂಗಿಕ ಸಂಬಂಧಗಳು ಜರುಗುವುದು ತಪ್ಪಲ್ಲ ವೆನ್ನುತ್ತವೆ ಅವರ ವ್ಯವಸ್ಥೆಗಳು. ಅವರು ಮದುವೆಯನ್ನ ಕಾಮದೃಷ್ಟಿಯಿಂದಲೇ ನೋಡುತ್ತಾರೆ. ಪ್ರೇಮ ಇರದೆನ್ನುವುದಲ್ಲ, ಇರುತ್ತದೆ ಆದರದು ಒಂದು ಆವೇಶದಂತದ್ದು,ಹಾಲುಕ್ಕಿದಂತೆ ಆ ಸಂಬಂಧ ಒಂದು ಗಂಟೆ ಇರಬಹುದು,ಒಂದು ದಿನ ಇರಬಹುದು ಒಂದು ವರ್ಷ ಇರಬಹುದು.

ಅವರು ತಮ್ಮ ಬದುಕಿನ ಭಾಗಸ್ವಾಮ್ಯದೊಳಗೆ ಪ್ರೇಮ ಇಲ್ಲವೇ ಆಕರ್ಷಣೆ ಕುಗ್ಗಿದ ಮರುಕ್ಷಣ ಮದುವೆಯನ್ನ ರದ್ದು ಪಡಿಸಿಕೊಳ್ಳುತ್ತಾರೆ.ವಿಚ್ಛೇದನ ಮಾಡಿಕೊಂಡು ಬೇರೆಯಾಗಿ ಬಿಡುತ್ತಾರೆ.ಬೇರೆ ಬೇರೆ ವಿವಾಹಗಳನ್ನ ಮಾಡಿಕೊಂಡು 'ಸುಖಗಳ' ಹಿಂದೆ ಓಡುತ್ತಾರೆ.

ಸಂತಾನದೊಳಗೂ ಅವರ ಅನುಬಂಧ ವಿಪರೀತವೇ. ಮಕ್ಕಳಿಗೆ ರೆಕ್ಕೆಗಳು ಬರುವತನಕವೇ ಇರುತ್ತವೆ. ವಯಸ್ಸು ಬಂದೊಡನೆ ಮಕ್ಕಳು ಸಹಿತ ತಮ್ಮ ಜೀವನಗಳನ್ನ ಇಲ್ಲಾ ಸುಖಗಳನ್ನ ಕೆಡಿಸಿಕೊಂಡು ಹೋಗಿಬಿಡುತ್ತಾರೆ.

ಅವರದು 'ನನ್ನ ಸುಖ',' ಸನ್ನ ಸಂತೋಷ' ಗಳ ಸುತ್ತ ತರುಗೋ ವ್ಯಕ್ತಿಗತ ಲಾಲಸೆ! ಭೌತಿಕ ಸುಖಗಳ ಹಿಂದಿನ ಪರದಾಟ!

ಲೆಕ್ಕವಿಲ್ಲದಷ್ಟು ಕಾರಣಗಳು

ಮದುವೆಯೇಕೆಂದು ಪ್ರಶ್ನಿಸಿದರೆ ಎಷ್ಟೋ ಉತ್ತರಗಳು ಎಷ್ಟೋ ಬಗೆಗಳಲ್ಲಿ ಬರುತ್ತವೆ. ಒಬ್ಬರು ಆಸರೆಗಾಗಿ ಅನ್ನುತ್ತಾರೆ.ಒಬ್ಬರು ವೃದ್ಧ ಅಪ್ಪ ಅಮ್ಮಂದಿರ ಒಳ್ಳೆಯ ಕೆಟ್ಟದ್ದನ್ನು ನೋಡಿಕೊಳ್ಳಲಿಕ್ಕೆ ಅಂತಾರೆ. ಮತ್ತೊಬ್ಬರು ಮನೆಯೊಳಗೆ ದಕ್ಷತೆ ಇಲ್ಲವೆಂದು,ಇನ್ನೊಬ್ಬರು ಪ್ರೇಮಕ್ಕಾಗಿ ಎನ್ನುತ್ತಾರೆ. ಒಬ್ಬರು ಕಾಮಕ್ಕಾಗಿ ಎಂದರೆ, ಮತ್ತೊಬ್ಬರು ಮಕ್ಕಳಿಗಾಗಿ ಎನ್ನುತ್ತಾರೆ.

ಒಂಟಿತನವನ್ನ ಜಯಿಸಲಿಕ್ಕೆ ಅಂತ ಒಬ್ಬರೆಂದರೆ, ಸಾಮಾಜಿಕ ಗುರುತಿಗಾಗಿ ಅಂತ ಇನ್ನೊಬ್ಬರು. ಒಬ್ಬರು ಸಮುದಾಯ ಗೌರವಕ್ಕೆ, ನ್ಯಾಯದ ಗುರ್ತಿಗೆ ಅಂತ,ಒಬ್ಬರು ಆರ್ಥಿಕ,ಭದ್ರತೆಗಾಗಿ ಅನ್ನುತ್ತಾರೆ. ಎಲ್ಲಾ ಸತ್ಯಗಳೇ,

ಏಕೆಂದರೆ ವಿವಾಹ ಒಂದು ಅದ್ಭುತ ಪ್ರಕ್ರಿಯೆ!

ಹೆಣ್ಣು ಗಂಡು ಇಬ್ಬರು ಹೊಸ ವ್ಯಕ್ತಿಗಳನ್ನ ಸೇರಿಸುತ್ತದೆ. ಎರಡು ಜೀವನಗಳನ್ನ ಸೆಣಸಾಡಿಸುತ್ತದೆ. ಒಬ್ಬರಿಗಾಗಿ ಒಬ್ಬರು ಅನ್ನುವ ಭಾವನೆ ಬೆಳಸುತ್ತದೆ.ಒಂದು ಸವಿಯಾದ ಆತ್ಮೀಯ ಭಾವ, ಅನುರಾಗ ಹೊಮ್ಮಿಸುತ್ತದೆ.ವಿಚಿತ್ರವಾದ ಅನುಭೂತಿಯೊಳಗೆ ಸಮೂಹ ಜವಾಬ್ದಾರಿ ಏರ್ಪಡಲಿಕ್ಕೆ ಕಾತರಿಸುತ್ತದೆ.

ಸ್ತ್ರೀ ಪುರುಷರ ಸಮಾಗಮ ಸ್ತ್ರೀ ಪುರುಷರ ಕಣಗಳ ಸೇರುವಿಕೆಗೆ ಪಿಂಡೋತ್ಪತ್ತಿಗೆ ಮಾತ್ರವೇ ಪರಿಮಿತವಾಗಿಲ್ಲ.ಅವರ ಭೌತಿಕ ಮಾನಸಿಕ ಆಧ್ಯಾತ್ಮಿಕ ಸಮೈಕ್ಯಕ್ಕೆ ಆಸರೆಯಾಗುತ್ತದೆ.

ಈ ಸಮೈಕ್ಯದೊಳಗೆ ಸಹಾನುಭೂತಿಯೊಳಗೆ,ಸಹಜೀವನದೊಳಗೆ ಪತಿ ಪತ್ನಿಯರ ಪ್ರೇಮಾನುಬಂಧಗಳನ್ನ ಸುಸ್ತಿರವಾಗಿಸುತ್ತದೆ.

ಹಿಂದೂ ಮನೋಭಾವ

ಜೀವನ ಗೃಹವಾದರೆ ಮದುವೆ ಎನ್ನುವುದು ಅದರ ಪರಿಪೂರ್ಣತೆಗೆ ತೆರೆದ ದ್ವಾರ.

ಜೀವನ ಪುಷಾರ್ಥಗಳ ನಿರ್ವಹಣೆಗಾಗಿ ಅನ್ನುತ್ತದೆ ಭಾರತೀಯ ಸಂಸ್ಕೃತಿ.

ಇಹಪರಗಳು ಎರಡೂ ಮುಖ್ಯವೆನ್ನುತ್ತದೆ.

ಧರ್ಮಾರ್ಥ, ಕಾಮ ,ಮೋಕ್ಷಗಳು ಮಾನವನಿಗೆ ಅನುಸರಣೀಯ. ಅಮರತ್ವ ಸಾಧನೆಗೆ ಮಾರ್ಗ ಅನ್ನುತ್ತಾರೆ ಮಹರ್ಷಿಗಳು.

ವಿವಾಹ ಒಂದು ಸಂಸ್ಕಾರವೆಂದು, ಋಣ ತ್ರಯಗಳನ್ನ ತೀರಿಸಿಕೊಳ್ಳಲಿಕ್ಕೆ ಮುಖ್ಯವೆನ್ನುತ್ತವೆ ವೇದಗಳು.

ಗೃಹಸ್ಥಾಶ್ರಮ ಧರ್ಮವೇ ಉನ್ನತವಾದುದು ಎನ್ನುತ್ತದೆ ಮನುಸ್ಮೃತಿ.

ಪತ್ನಿ ಸಮೇತ ನಡೆಸಿದರೇನೇ ಯಜ್ಞಯಾಗಗಳು, ವ್ರತ ಪೂಜೆಗಳು, ಕ್ಷೇತ್ರ ದರ್ಶನಗಳು, ನದಿಸ್ನಾನಗಳು ಪೂರ್ತಿ ಫಲಿತವನ್ನ ನೀಡುತ್ತವೆನ್ನುತ್ತವೆ ಇತಿಹಾಸಗಳು.

ದಾಂಪತ್ಯ ಜೀವನ ನಮ್ಮ ಸಮಾಜಕ್ಕೆ ಒಂದು ಪ್ರಾಕಾರದಂತೆ. ದಾಂಪತ್ಯ ಧರ್ಮದೊಳಗಿನ ಮನೋಭಾವಕ್ಕೆ ದುರ್ಭೇದ್ಯಕ್ಕೆ ಸೀತಾರಾಮರು ದೊಡ್ಡ ನಿದರ್ಶನ!

ಕುಟುಂಬ ವ್ಯವಸ್ಥೆಯ ಮೂಲಕ ನೈತಿಕ ಶ್ರೇಷ್ಟತೆಗಳನ್ನ ಕಾಪಾಡುತ್ತ ಸಾಮಾಜಿಕ ಆದರಣೆಯನ್ನ ಗೌರವವನ್ನ ಭದ್ರತೆಯನ್ನ ಹೊಂದಬೇಕೆನ್ನುತ್ತಾರೆ ಹಿರಿಯರು.

ಜೀವನಕ್ಕೆ ಸಾರ್ಥಕತೆ, ಸಂತೃಪ್ತಿ, ಪರಿಪೂರ್ಣತೆ, ಸ್ಥಿರೀಕರಿಸಬೇಕೆಂದರೆ ಮದುವೆ ಅಗತ್ಯವೆಂದು ವೇದಗಳು, ಇತಿಹಾಸಗಳು,ಧರ್ಮಶಾಸ್ತ್ರಗಳು, ಪುರಾಣಗಳು, ಸ್ಮೃತಿಗಳು ಘೋಷಿಸುತ್ತವೆ.!

ವ್ಯಕ್ತಿ ಕ್ಷೇಮಕ್ಕೆ, ಕುಟುಂಬ ವ್ಯವಸ್ಥೆಯ ರಕ್ಷಣೆಗೆ,ಸಾಮಾಜಿಕ ಶ್ರೇಯಸ್ಸಿಗೆ,ಜನೋನ್ನತಿಗೆ ಮದುವೆ ಒಂದು ಸುಳ್ಳೆನಿಸದ ಸತ್ಯ.

# ಆಮಿಷ, ಒತ್ತಡದ ಮತಾಂತರವನ್ನು ಇಸ್ಲಾಂ ಅನುಮತಿಸುವುದಿಲ್ಲ

● ಮಾನಸ, ಬೆಂಗಳೂರು

ಜನಪ್ರಿಯ ನಂಬಿಕೆಯ ಹೊರತಾಗಿಯೂ ಇಸ್ಲಾಮಿಕ್ ಸಾಹಿತ್ಯದಲ್ಲಿ ಮತಾಂತರಕ್ಕೆ ಯಾವುದೇ ಸ್ಪಷ್ಟವಾದ ತಾರ್ಕಿಕ ಕಾರಣವಿಲ್ಲ. ಸಂದೇಶವಾಹಕರು ತಮ್ಮ ಧಾರ್ಮಿಕ ನಂಬಿಕೆಗಳನ್ನು ಇತರರ ಮೇಲೆ ಯಾವುದೇ ರೀತಿಯಲ್ಲಿ ಹೇರುವುದನ್ನು ಸ್ಪಷ್ಟವಾಗಿ ನಿಷೇಧಿಸಲಾಗಿದೆ. ಹೆಚ್ಚುವರಿಯಾಗಿ, ವೈಯಕ್ತಿಕ ಉದ್ದೇಶಗಳು ಮತ್ತು ಅನುಕೂಲಗಳಿಗಾಗಿ ಯಾರನ್ನಾದರೂ ಪ್ರಲೋಭಿಸಲು ಅನುಮತಿಸಲಾಗುವುದಿಲ್ಲ. ತಮಿಳುನಾಡಿನ ಮಧುರೈ ಜಿಲ್ಲೆಯಲ್ಲಿ ನಾಗೂರ್ ಹನೀಫಾ ಎಂಬ ಮುಸ್ಲಿಂ ವ್ಯಕ್ತಿಯೊಂದಿಗೆ ಓಡಿಹೋಗಿ ಹದಿಹರೆಯದವಳು ಸಾವನ್ನಪ್ಪಿದ ನಂತರ ಧಾರ್ಮಿಕ ಮತಾಂತರದ ವಿಷಯ ಇತ್ತೀಚೆಗೆ ಬೆಳಕಿಗೆ ಬಂದಿದೆ. ಎಫ್‌ಐಆರ್‌ಎಸ್ ದಾಖಲಾಗಿದ್ದು, ಪ್ರಕರಣದ ತನಿಖೆ ನಡೆಯುತ್ತಿದೆ, ಆದಾಗ್ಯೂ, ಕೆಲವು ಉಗ್ರಗಾಮಿ ಅಂಶಗಳು ಈ ವಿಷಯವನ್ನು ಧಾರ್ಮಿಕ ಮತಾಂತರದ ಪ್ರಕರಣ ಎಂದು ಪ್ರಸಾರ ಮಾಡಲು ಪ್ರಾರಂಭಿಸಿವೆ. ಒಂದು ಸಾವು ಸಂಭವಿಸಿದೆ ಮತ್ತು ಪ್ರಕರಣವನ್ನು ಕೂಲಂಕುಷವಾಗಿ ತನಿಖೆ ಮಾಡಿ ಅಪರಾಧಿಗಳನ್ನು ನ್ಯಾಯದ ಕಟಕಟೆಗೆ ತರಬೇಕಾಗಿದೆ, ಆದಾಗ್ಯೂ, ಆಮಿಷ ಅಥವಾ ಒತ್ತಡದಲ್ಲಿ ಧಾರ್ಮಿಕ ಮತಾಂತರದ ಪ್ರಕರಣವನ್ನು ಇಸ್ಲಾಮಿಕ್ ಧರ್ಮಗ್ರಂಥಗಳ ಆಧಾರದ ಮೇಲೆ ಅರ್ಥಮಾಡಿಕೊಳ್ಳಬೇಕೇ ಹೊರತು ಸಾಮಾಜಿಕ ಮಾಧ್ಯಮ ಫಾರ್ವರ್ಡ್‌ಗಳ ಆಧಾರದ ಮೇಲೆ ಅಲ್ಲ.

ಇಸ್ಲಾಮಿಕ್ ಕಾನೂನಿನ ಪ್ರಕಾರ, ಯಾವುದೇ ರೀತಿಯ ಮತಾಂತರದ ಒತ್ತಡವನ್ನು ಯಾರಿಗಾದರೂ ಅನ್ವಯಿಸುವುದನ್ನು ಕುರಾನ್ ವ್ಯವಸ್ಥಿತ ಆಧಾರದ ಮೇಲೆ ನಿಷೇಧಿಸಿದೆ. ಕುರಾನ್ ಪ್ರಕಾರ, ಧರ್ಮದಲ್ಲಿ ಯಾವುದೇ ಬಲವಂತವಿಲ್ಲ (2:256). ಮುಸ್ಲಿಂ ಆಗಲು ಯಾರನ್ನಾದರೂ ಒತ್ತಾಯಿಸಬೇಡಿ, ಇಸ್ಮಾಯಿಲ್ ಇಬ್ನ್ ಕಥಿರ್ ಅವರು ಸಂದರ್ಭವನ್ನು ವಿವರಿಸುತ್ತಾರೆ: ಇಸ್ಲಾಂ ಸ್ಪಷ್ಟ ಮತ್ತು ಸ್ಪಷ್ಟವಾಗಿದೆ ಮತ್ತು ಅದರ ಕಾರಣಗಳು ಮತ್ತು ಪುರಾವೆಗಳು ಸಹ ಸರಳ ಮತ್ತು ಸ್ಪಷ್ಟವಾಗಿದೆ. ಪರಿಣಾಮವಾಗಿ, ಇಸ್ಲಾಂ ಧರ್ಮವನ್ನು ಸ್ವೀಕರಿಸಲು ಯಾರನ್ನಾದರೂ ಒತ್ತಾಯಿಸುವ ಅಗತ್ಯವಿಲ್ಲ. ಕುರಾನ್‌ನ ಇನ್ನೊಂದು ಪದ್ಯದಲ್ಲಿ ವಿವರಿಸಿದಂತೆ, ಜ್ಞಾನ ಮತ್ತು ಉತ್ತಮ ಸಲಹೆಯೊಂದಿಗೆ, (ಜನರನ್ನು) ನಿಮ್ಮ ಭಗವಂತನ ಹಾದಿಗೆ ಆಹ್ವಾನಿಸಿ. ಇದಲ್ಲದೆ, ಸಾಧ್ಯವಾದಷ್ಟು ಸಭ್ಯ ರೀತಿಯಲ್ಲಿ ಅವರೊಂದಿಗೆ ಚರ್ಚೆ ಮಾಡಿ (16:125). ಆದ್ದರಿಂದ, ಬಲ ಮತ್ತು ಆಮಿಷಕ್ಕೆ ಇಸ್ಲಾಂನಲ್ಲಿ ಯಾವುದೇ ಸ್ಥಾನವಿಲ್ಲ ಮತ್ತು ಇಸ್ಲಾಮಿಕ್ ಸಂದರ್ಭದಲ್ಲಿ ಅವು ಯಾವುದೇ ಅರ್ಥವಿಲ್ಲ. ಪ್ರವಾದಿ ಮುಹಮ್ಮದ್ ಅವರ ಪಾತ್ರ, ಸಾಮಾಜಿಕ ಸಂವಹನ ಮತ್ತು ಕೊಡುಗೆಗಳನ್ನು ಅನುಕರಿಸುವ ಮೂಲಕ ಸಂದೇಶವನ್ನು ಹರಡಲು ಮತ್ತು ಇಸ್ಲಾಂ ಧರ್ಮವು ತಮ್ಮ ಅತ್ಯುತ್ತಮ ಸಾಮರ್ಥ್ಯಗಳಿಗೆ ಬದ್ಧವಾಗಿರುವ ಜೀವನ ವಿಧಾನವನ್ನು ವ್ಯಕ್ತಪಡಿಸುವ ಮೂಲಕ ಅವರ ಮಾದರಿಯನ್ನು ಅನುಸರಿಸಲು ಮುಸ್ಲಿಮರಿಗೆ ಬಿಟ್ಟದ್ದು.

ಭಾರತಕ್ಕೆ ಆಗಮಿಸಿದಾಗಿನಿಂದ, ಸೂಫಿ ಸಂತರು ಈ ಧರ್ಮದ ಅಭ್ಯಾಸಕಾರರ ಗುಣ, ಪ್ರಾಮಾಣಿಕತೆ, ಸಹಾನುಭೂತಿ, ಉನ್ನತ ನೈತಿಕ ಮಾನದಂಡಗಳು ಮತ್ತು ಸೊಬಗುಗಳಿಂದಾಗಿ ಸುತ್ತಮುತ್ತಲಿನ ಪ್ರದೇಶಗಳ ಜನರು ಈ ಧರ್ಮವನ್ನು ಅಧ್ಯಯನ ಮಾಡಲು ಮತ್ತು ಅಭ್ಯಾಸ ಮಾಡಲು ಸೆಳೆಯಲ್ಪಟ್ಟಿದ್ದಾರೆ ಎಂದು ಖಚಿತಪಡಿಸಿದ್ದಾರೆ. ಪಶ್ಚಿಮ ಏಷ್ಯಾದ ಸೂಫಿಗಳು ಅರೇಬಿಯನ್ ಸಂಸ್ಕೃತಿಯನ್ನು ಹೇರಲು ಎಂದಿಗೂ ಪ್ರಯತ್ನಿಸಲಿಲ್ಲ; ಬದಲಿಗೆ, ಅವರು ತಮ್ಮನ್ನು ಮತ್ತು ತಮ್ಮ ಧರ್ಮವನ್ನು ಭಾರತೀಯಗೊಳಿಸಿದರು ಮತ್ತು ದೇಶದ ಸಂಯೋಜಿತ ಸಂಸ್ಕೃತಿಯ ಭಾಗವಾಯಿತು, ಇದು ಇನ್ನೂ ಮೆಚ್ಚುಗೆ ಪಡೆಯುತ್ತಿದೆ. ಸೂಫಿಸಂ ಭಾರತೀಯ ಉಪಖಂಡದಲ್ಲಿ ಭಕ್ತಿ ಚಳುವಳಿಯೊಂದಿಗೆ ಅದರ ಲಕ್ಷಣಗಳನ್ನು ಬೆರೆಸುವ ಮೂಲಕ ತನ್ನ ಸಮುದ್ರಯಾನವನ್ನು ಪ್ರಾರಂಭಿಸಿತು. ಇಂತಹ ಸಿಂಕ್ರೆಟಿಕ್ ಸನ್ನಿವೇಶದಲ್ಲಿ, ಬಲವಂತದ ಮತಾಂತರದ ಅಭ್ಯಾಸವು ಯಾವುದೇ ರೂಪದಲ್ಲಿ ಮುಂದುವರಿದರೆ, ಭವಿಷ್ಯದಲ್ಲಿ ಅದು ಸಂಭವಿಸದಂತೆ ತಡೆಯಲು ಮತ್ತು ಇಸ್ಲಾಂನ ಚಿತ್ರಣವನ್ನು ಶುದ್ಧೀಕರಿಸಲು ಮುಸ್ಲಿಂ ಸಮುದಾಯವು ಒಟ್ಟಾರೆಯಾಗಿ ಕಾರ್ಯನಿರ್ವಹಿಸುವ ಅವಶ್ಯಕತೆಯಿದೆ.

# ಭಾರತೀಯರ ಪ್ರಾಣ ಹಿಂಡುತ್ತಿರುವ ಲೈಂಗಿಕ ಸುಲಿಗೆಯೆಂಬ ಬ್ಲಾಕ್‌ಮೇಲ್ ಬಿಸಿನೆಸ್!

● 9ನೇ ಪುಟದಿಂದ...




ಸಚಿವರಿಗೆ ಮಾಡಿದ್ದ ಒಂದೇ ಕಾಲ್ ನಲ್ಲಿ ಮೂರು ಲಕ್ಷ ಬ್ಲಾಕ್ ಮೇಲ್ ಮಾಡಿಕೊಂಡಿದ್ದ ಸೈಬರ್ ಸುಲಿಗೆ ಕೋರ ಈ ಹಕೀಮುದ್ದೀನ್. ಇವೆಲ್ಲಾ ಭಾರತದಲ್ಲಿ ಇತ್ತೀಚೆಗೆ ಜರುಗುತ್ತಿರುವ ಲೈಂಗಿಕ ಸುಲಿಗೆಯ ಸ್ಯಾಂಪಲ್ ಗಳಷ್ಟೇ. ಈ ದುರುದ್ದೇಶ ಪೂರಿತ ಆನ್ ಲೈನ್ ಸೈಬರ್ ಅಪರಾಧಕ್ಕೆ ಈಗ ದೇಶದ ಜನ ತತ್ತರಿಸಿ ತರಗುಟ್ಟುತ್ತಿರುವುದು ನಿಜ. ಸಹಜ ಲೈಂಗಿಕತೆ ಬಗ್ಗೆ, ನೈತಿಕ ಮೌಲ್ಯ ಗಳ ಬಗ್ಗೆ, ಸರಿಯಾದ ಶಿಕ್ಷಣ–ತಿಳುವಳಿಕೆಯ ಕೊರತೆ ಇರುವುದರಿಂದ, ಭಾರತೀಯ ಸಮಾಜದಲ್ಲಿ ಇರುವ ಲೈಂಗಿಕತೆಯನ್ನು ನೋಡುವ ರೀತಿ, ಅದರ ಕಟ್ಟುಪಾಡು ನೀತಿಗಳಿಂದ,ಗೊಂದಲಗಳಿಂದ, ಲೈಂಗಿಕ ಸುಲಿಗೆ ಕೋರರಿಗೆ ವಂಚಿಸಲು ಸುಲಭ ಸಾಧ್ಯವಾಗುತ್ತಿದೆ. 70 ಕೋಟಿಗೂ ಹೆಚ್ಚಿರುವ ಮೊಬೈಲ್ ಸ್ಮಾರ್ಟ್ ಫೋನ್ ಗಳು ಭಾರತದಲ್ಲಿ ಸೆಕ್ಸ್ ಟಾರ್ಶನ್ ಮಾಫಿಯಾಕ್ಕೆ ವರದಾನವಾಗಿದೆ. ಸರಿಯಾಗಿ ಮೊಬೈಲ್ ಫೋನ್ ಬಳಸಲು ಬಾರದ ಅಮಾಯಕರು ಸ್ಕ್ರೀನ್ ರೆಕಾರ್ಡಿಂಗ್ ಅಪ್ಲಿಕೇಶನ್ಗಳನ್ನು ಗೊತ್ತಿಲ್ಲದೆ ಡೌನ್ಲೋಡ್ ಮಾಡಿಕೊಂಡು, ಹ್ಯಾಕರ್ಸ್ ಗಳ ತಂತ್ರ ಗಳಿಗೆ ಬಲಿಯಾಗಿ ನೇಕೆಡ್ ವೀಡಿಯೋ ಚಿತ್ರೀಕರಣಕ್ಕೆ ಒಳಗಾಗಿ ಎಷ್ಟೋ ಬಾರಿ ಬ್ಲಾಕ್ ಮೇಲ್ ಬಲಿಪಶುಗಳಾಗಿದ್ದಾರೆ! ಫೋಟೋ ಮಾರ್ಫಿಂಗ್, ಡೀಪ್–ನ್ಯೂಡ್ ಟೆಕ್ನಾಲಜಿ, ಢೀಪ್–ಫೇಕ್ ತಂತ್ರಜ್ಞಾನಗಳನ್ನು ಬಳಸಿಕೊಂಡು ಆನ್ ಲೈನ್ ಸೆಕ್ಸ್ ಚಾಟ್ ವೀಡಿಯೋ–ಫೋಟೋ ಸೃಷ್ಟಿಸಬಹುದೆನ್ನುವುದು ಎಷ್ಟೋ ಜನರಿಗೆ ಇನ್ನೂ ತಿಳಿದೇ ಇಲ್ಲ! ಅಸಲೀ ವೀಡಿಯೋ ಗಳಂತೆಯೆ ಕಾಣುವ ಇಂತಹ ಅತ್ಯಾಧುನಿಕ ತಂತ್ರಜ್ಞಾನ ಮಾರ್ಫಿಂಗ್ ವೀಡಿಯೋ ಗಳನ್ನಿಟ್ಟುಕೊಂಡೆ ಈಗ ಸೆಕ್ಸ್ ಟಾರ್ಶನ್ ಮಾಫಿಯಾ ಕಾರ್ಯಾಚರಣೆ ನಡೆಸುತ್ತಿದೆ! ಆದಕಾರಣದಿಂದ ಸುರಕ್ಷಿತ ಆನ್ ಲೈನ್ ಬಳಕೆ ನಮ್ಮ ಆದ್ಯತೆ ಆಗಬೇಕು. ಸಾಮಾಜಿಕ ಜಾಲತಾಣಗಳಲ್ಲಿ ಅಪರಿಚಿತರಿಂದ ಬರುವ ವೀಡಿಯೋ ಕಾಲ್ ಗಳಿಗೆ ಉತ್ತರಿಸದೇ ಇರುವುದು ಕ್ಷೇಮ. ನಮ್ಮ ಹೆಚ್ಚಿನ ವೀಡಿಯೋ– ಫೋಟೋ ಗಹನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳದಿರುವುದೇ ಉತ್ತಮ. ಸೆಕ್ಸ್ ಟಾರ್ಶನ್ ಕಿರುಕುಳಕ್ಕೆ ಅಂಜದೆ ತಕ್ಷಣವೇ ಪೊಲೀಸರಿಗೆ ದೂರು ನೀಡುವುದು ನಮ್ಮ ಕರ್ತವ್ಯ. ಈಗ ಸದ್ದಿಲ್ಲದೆ ಸದ್ದುಮಾಡುತ್ತಿರುವ ಸೆಕ್ಸ್ ಟಾರ್ಶನ್ ಮಾಫಿಯಾ ಜಾಲದ ಬಗ್ಗೆ ಗಂಡುಮಕ್ಕಳಿಗೂ–ಹೆಣ್ಣು ಮಕ್ಕಳಿಗೂ ಸೂಕ್ತ ತಿಳಿವಳಿಕೆ ನೀಡುವ ಜವಾಬ್ದಾರಿ ನಮ್ಮದಾಗಿದೆ.

# ಐಪಿಲ್ ಚಾಂಪಿಯನ್ ಯಾರಾಗಬಹುದು..?!

● ಮಲ್ಲಿಕಾರ್ಜುನ್ ಹಿರೇಮಠ್

ಈ ಬಾರಿಯ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಪಂದ್ಯಾವಳಿ ಆರಂಭವಾಗಲು ಇನ್ನೇನು ಕೆಲವೇ ದಿನಗಳು ಬಾಕಿ ಇದೆ. ಆದರೆ ಈಗಲೇ ಈ ಪಂದ್ಯಾವಳಿಯಲ್ಲಿ ಗೆಲ್ಲುವ ತಂಡ ಯಾವುದು ಎನ್ನುವ ಕುರಿತು ಚರ್ಚೆಗಳು ಆರಂಭವಾಗಿವೆ.

ಹೌದು ..ಈಗಾಗಲೇ ಐಪಿಎಲ್ ಜ್ವರ ಕ್ರಿಕೆಟ್ ಪ್ರೇಮಿಗಳಿಗೆ ಆರಂಭವಾಗಿದೆ ಈ ಐಪಿಎಲ್ ಪ್ರೇಮಿಗಳು ಈಗಾಗಲೇ ತುದಿಗಾಲಮೇಲೆ ಪಂದ್ಯಾವಳಿ ವೀಕ್ಷಿಸಲು ಕಾತುರರಾಗಿದ್ದಾರೆ. ಯಾವ ಯಾವ ತಂಡಗಳು ಬೆಸ್ಟ್ ಯಾವ ತಂಡ್ ಸೋಲುತ್ತದೆ ಯಾವ ನಾಯಕ ಇಷ್ಟ ಎನ್ನುವ ಕುರಿತು ಚರ್ಚೆಗಳು ಭರ್ಜರಿಯಾಗಿ ಆಗುತ್ತಿದೆ.

ಮೂರು ತಂಡಗಳು ಫೇವರೇಟ್ ಆಗಿದ್ದು ಆ ಮೂರು ತಂಡಗಳ ವಿಶೇಷತೆ ಏನು ಯಾವ ನಾಯಕ ತಂಡವನ್ನು ಸರಿದೂಗಿಸಕೊಂಡು ಹೋಗಬಲ್ಲ ಗೆಲುವಿಗೆ ಶ್ರಮಿಸಲಬಲ್ಲ..ಯಾರು ಬೋಲ್ ಏನಾಗಬಹುದು ಎನ್ನುವ ಎಲ್ಲಾ ವಿವರಗಳ ಚರ್ಚೆಗಳು ಕ್ರಿಕೆಟ್ ಪ್ರೇಮಿಗಳಲ್ಲ ಆರಂಭವಾಗಿದೆ ಹಾಗಾದರೆ ಆ ಮೂರು ತಂಡಗಳು ಯಾವುವು ಅದರ ವಿಶೇಷತೆಗಳೇನು ಆ ಗೆಲುವಿಗೆ ಇರುವ ಮಾನದಂಡಗಳೇನು ಎನ್ನುವ ಕುರಿತು ವಿವರ ಇಲ್ಲಿದೆ.

ಲೀಗ್ ಹಂತದ 70 ಪಂದ್ಯಗಳು ಮಹಾರಾಷ್ಟ್ರದಲ್ಲಿನ 4 ಸ್ಟೇಡಿಯಂನಲ್ಲಿ ನಡೆಯಲಿದೆ. ಈ ಬಾರಿ 10 ತಂಡಗಳು ಐಪಿಎಲ್ ಟ್ರೋಫಿಗಾಗಿ ಸೆಣಸಾಟ ನಡೆಸಲಿವೆ. ಈ ಹತ್ತು ತಂಡಗಳ ಪೈಕಿ ಈ ಮೂರು ತಂಡಗಳಲ್ಲಿ ಒಂದು ತಂಡವು




ಐಪಿಎಲ್ ಚಾಂಪಿಯನ್ ಆಗಬಹುದು. ಈ ಕುರಿತಾದ ಲೇಖನ ಇಲ್ಲಿದೆ..

## ಚೆನ್ನೈ ಸೂಪರ್ ಕಿಂಗ್ಸ್

ಮಹೇಂದ್ರ ಸಿಂಗ್ ಧೋನಿ ನೇತೃತ್ವದ ಹಾಲಿ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್ ತಂಡವು, ಮತ್ತೊಮ್ಮೆ ಚಾಂಪಿಯನ್ ಪಟ್ಟ ಅಲಂಕರಿಸಬಲ್ಲ ನೆಚ್ಚಿನ ತಂಡವಾಗಿ ಗುರುತಿಸಿಕೊಂಡಿದೆ. ಕಳೆದ ಆವೃತ್ತಿಯಂತೆ ಈ ಬಾರಿಯು ಸಿಎಸ್‌ಕೆ ತಂಡದಲ್ಲಿ 8 ತಜ್ಞ ಆಲ್‌ರೌಂಡರ್‌ಗಳಿದ್ದಾರೆ.

ಚೆನ್ನೈ ಸೂಪರ್ ಕಿಂಗ್ಸ್ ತಂಡದಲ್ಲಿ ಬ್ಯಾಟಿಂಗ್ ವಿಭಾಗದಲ್ಲಿ ಋತುರಾಜ್ ಗಾಯಕ್ವಾಡ್ ಜತೆಗೆ ಡೆವೊನ್ ಕಾನ್‌ವೇ, ಮೋಯಿನ್ ಅಲಿ, ಅಂಬಟಿ ರಾಯುಡು ಅವರಂತಹ ಆಟಗಾರದಿದ್ದರೆ, ರವೀಂದ್ರ ಜಡೇಜಾ, ಶಿವಂ ದುಬೆ, ಡ್ವೇನ್ ಬ್ರಾವೋ ಬ್ಯಾಟಿಂಗ್ ಹಾಗೂ ಬೌಲಿಂಗ್‌ನಲ್ಲಿ ತಂಡಕ್ಕೆ ಆಸರೆಯಾಗುವ ಕ್ಷಮತೆ ಹೊಂದಿದ್ದಾರೆ.

ಚೆನ್ನೈ ಬೌಲಿಂಗ್‌ನಲ್ಲೂ ಸಾಕಷ್ಟು ಬಲಿಷ್ಠವಾಗಿದ್ದು, ದೀಪಕ್ ಚಹರ್ ಜತೆಗೆ ಆಡಂ ಮಿಲ್ನೆ, ಕ್ರಿಸ್ ಜೋರ್ಡನ್, ಮಿಚೆಲ್ ಸ್ಯಾಂಟ್ನರ್, ಲಂಕಾದ ಮಿಸ್ಟ್ರಿ ಸ್ಪಿನ್ನರ್ ಮಹೇಶ್ ತೀಕ್ಷಣ ಸೇರಿದಂತೆ ಹಲವು ಟಿ20 ಸ್ಪೆಷಲಿಸ್ಟ್ ಆಟಗಾರರಿದ್ದು, ಧೋನಿ ನೇತೃತ್ವದ ಸಿಎಸ್‌ಕೆ ತಂಡವು ಮತ್ತೊಮ್ಮೆ ಚಾಂಪಿಯನ್ ಅದರೂ ಅಚ್ಚರಿಯಿಲ್ಲ.

## ರಾಜಸ್ಥಾನ ರಾಯಲ್ಸ್

ಚೊಚ್ಚಲ ಆವೃತ್ತಿಯ ಐಪಿಎಲ್ ಚಾಂಪಿಯನ್ ರಾಜಸ್ಥಾನ ರಾಯಲ್ಸ್ ತಂಡವು ಈ ಬಾರಿಯ ಹರಾಜಿನ ಬಳಿಕ ಸಾಕಷ್ಟು ಬಲಿಷ್ಠ ತಂಡವಾಗಿ ಗುರುತಿಸಿಕೊಂಡಿದೆ. ಎಲ್ಲಾ ವಿಭಾಗದಲ್ಲೂ ರಾಯಲ್ಸ್ ತಂಡವು ಸದೃಢವಾಗಿ ಕಾಣ ಸಿಗುತ್ತಿದೆ.

ಬ್ಯಾಟಿಂಗ್ ವಿಭಾಗದಲ್ಲಿ ದೇವದತ್ ಪಡಿಕ್ಕಲ್, ಯಶಸ್ವಿ ಜೈಸ್ವಾಲ್ ಜತೆಗೆ ಸೂಪರ್‌ಸ್ಟಾರ್ ಬ್ಯಾಟರ್‌ಗಳಾದ ಸಂಜು ಸ್ಯಾಮ್ಸನ್ ಹಾಗೂ ಜೋಸ್ ಬಟ್ಲರ್ ಬ್ಯಾಟಿಂಗ್‌ಗೆ ಮತ್ತಷ್ಟು ಬಲ ತುಂಬಲಿದ್ದಾರೆ. ಶಿಮ್ರೊನ್ ಹೆಟ್ಮೇಯರ್ ಕೂಡಾ ಫಿನಿಶರ್ ಪಾತ್ರ ನಿಭಾಯಿಸಲಿದ್ದಾರೆ.


ಇನ್ನು ಬೌಲಿಂಗ್ ವಿಭಾಗ ಕೂಡಾ ರಾಯಲ್ಸ್ ಪಾಳಯದಲ್ಲಿ ಸಾಕಷ್ಟು ಬಲಿಷ್ಠವಾಗಿದೆ. ಟ್ರೆಂಟ್ ಬೌಲ್ಟ್, ಪ್ರಸಿದ್ಧ್ ಕೃಷ್ಣ ಜತೆಗೆ ಚಾಣಾಕ್ಷ ಸ್ಪಿನ್ನರ್‌ಗಳಾದ ಯುಜುವೇಂದ್ರ ಚಹಲ್, ರವಿಚಂದ್ರನ್ ಅಶ್ವಿನ್ ಪಂದ್ಯದ ದಿಕ್ಕನ್ನೇ ಬದಲಿಸುವ ಸಾಮರ್ಥ್ಯ ಹೊಂದಿದ್ದು, ರಾಯಲ್ಸ್ ಈ ಬಾರಿ ಟ್ರೋಫಿಗೆ ಮುತ್ತಿಕ್ಕಿದರೆ ಅಚ್ಚರಿ ಪಡುವಂತಿಲ್ಲ

## ರಾಯಲ್ ಚಾಲೆಂಜರ್ಸ್ ಬೆಂಗಳೂರು

ಚೊಚ್ಚಲ ಐಪಿಎಲ್ ಟ್ರೋಫಿಯ ಕನವರಿಕೆಯಲ್ಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಹೊಸ ಹುರುಪಿನೊಂದಿಗೆ 15ನೇ ಆವೃತ್ತಿಯ ಐಪಿಎಲ್‌ಗೆ ಸಜ್ಜಾಗಿದೆ. ಫಾಫ್ ಡು ಪ್ಲೆಸಿಸ್ ನಾಯಕತ್ವದಲ್ಲಿ ಆರ್‌ಸಿಬಿ ಬಲಿಷ್ಠ ತಂಡವಾಗಿ ಗುರುತಿಸಿಕೊಂಡಿದೆ.

ಅಗ್ರಕ್ರಮಾಂಕದಲ್ಲಿ ವಿರಾಟ್ ಕೊಹ್ಲಿ, ಫಾಫ್ ಡು ಪ್ಲೆಸಿಸ್ ಜತೆಗೆ ಗ್ಲೆನ್ ಮ್ಯಾಕ್ಸ್‌ವೆಲ್, ದಿನೇಶ್ ಕಾರ್ತಿಕ್ ಅವರಂತಹ ತಜ್ಞ ಟಿ20 ಆಟಗಾರರಿದ್ದಾರೆ. ಇದರ ಜತೆಗೆ ಆಲ್‌ರೌಂಡರ್‌ಗಳಾದ ವನಿಂದು ಹಸರಂಗ ಕೂಡಾ ತಂಡಕ್ಕೆ ಆಸರೆಯಾಗುವ ಸಾಮರ್ಥ್ಯ ಹೊಂದಿದ್ದಾರೆ.

ಇದರ ಜತೆಗೆ ಬೌಲಿಂಗ್‌ನಲ್ಲಿ ಮೊಹಮ್ಮದ್ ಸಿರಾಜ್, ಹರ್ಷಲ್ ಪಟೇಲ್ ಜತೆಗೆ ಜೋಶ್ ಹೇಜಲ್‌ವುಡ್ ವೇಗದ ದಾಳಿ ನಡೆಸಿದರೆ, ಕರ್ಣ್ ಶರ್ಮಾ, ಗ್ಲೆನ್ ಮ್ಯಾಕ್ಸ್‌ವೆಲ್ ತಂಡಕ್ಕೆ ಚೊಚ್ಚಲ ಟ್ರೋಫಿ ಗೆಲ್ಲಿಸಿಕೊಡುವ ಕ್ಷಮತೆ ಹೊಂದಿದ್ದಾರೆ.



# ಲಂಡನ್‌ನಲ್ಲಿ ಪ್ರದರ್ಶನಗೊಂಡ ನಾಂದಿ

ತೆರೆಮರೆ

## ಕನ್ನಡ ಚಿತ್ರ ಇತಿಹಾಸ


ಭಾಗ–70



ಅ.ನಾ.ಪ್ರಹ್ಲಾದರಾವ್
ವಾರ್ತಾ ಇಲಾಖೆ, ನಿವೃತ್ತ ಅಧಿಕಾರಿ

ಶ್ರೀ ಭಾರತಿಚಿತ್ರ ಲಾಂಛನದಲ್ಲಿ ವಾದಿರಾಜ್ ಹಾಗೂ ಜವಹರ್ ಸೋದದರು ನಿರ್ಮಾಣ ಮಾಡಿದ ಕಪ್ಪುಬಿಳುಪು ಸಾಮಾಜಿಕಕಥಾ ಹಂದರದಚಿತ್ರ'ನಾಂದಿ' 1964ರಲ್ಲಿ ಬಿಡುಗಡೆಗೊಂಡಿತು. ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದ ನಿರ್ದೇಶಕಎನ್.ಲಕ್ಷ್ಮಿನಾರಾಯಣ್ ಮೊದಲ ಚಿತ್ರಇದಾಗಿತ್ತು. ಆರ್.ನಾಗೇಂದ್ರರಾವ್ ಸೇರಿದಂತೆ ಹಲವರ ಬಳಿ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದ ಲಕ್ಷ್ಮಿನಾರಾಯಣ್ 'ನಾಂದಿ'ಚಿತ್ರದ ಮೂಲಕ ಸ್ವತಂತ್ರ ನಿರ್ದೇಶಕರಾದರು.

ರಾಜಕುಮಾರ್, ಹರಿಣಿ, ಕಲ್ಪನಾ, ಬಾಲಕೃಷ್ಣ, ವಾದಿರಾಜ್, ದಿನೇಶ್, ಗಣಪತಿಭಟ್, ಶೈಲಶ್ರೀ, ಉದಯಕುಮಾರ್, ಸೋರಟ್‌ಅಶ್ವತ್ಥ್, ಹನುಮಂತಾಚಾರ್, ಜಯಶ್ರೀ ಮುಂತಾದವರು ಅಭಿನಯಿಸಿರುವ ಈ ಚಿತ್ರಕ್ಕೆಎನ್.ಲಕ್ಷ್ಮಿನಾರಾಯಣ್‌ಅವರೇಕಥೆ, ಹಾಗೂ ಚಿತ್ರಕಥೆ ರಚಿಸಿದರು. ಕೆ.ಎನ್.ನಾಗಭೂಷಣಚಿತ್ರದ ಸಹಾಯಕ





ನಿರ್ದೇಶಕರಾಗಿಕಾರ್ಯನಿರ್ವಹಿಸಿದರು. ಆರ್.ಎನ್.ಜಯಗೋಪಾಲ್ ಸಂಭಾಷಣೆ ಹಾಗೂ ಗೀತೆಗಳನ್ನು ರಚಿಸಿದ್ದಾರೆ.

ವಿಜಯಭಾಸ್ಕರ್ ಸಂಗೀತ ನೀಡಿರುವಚಿತ್ರದಲ್ಲಿ ನಿರ್ದೇಶನದಷ್ಟೇಜಾಣ್ಮೆ ಸಂಗೀತದಲ್ಲಿಇರುವುದೊಂದು ವೈಶಿಷ್ಟ್ಯ. 'ಉಡುಗೊರೆಯೊಂದಾತಂದಾ, ಎನ್ನಯ ಮನಕಾನಂದಾ, ಕೈ ಹಿಡಿದಾ, ಬರಸೆಳೆದಾ...; ಚಂದ್ರಮುಖೀ, ಪ್ರಾಣಸಖೀ, ಚತುರೆಯೇ ನೀಕೇಳೇ...; ನಮ್ಮತಾಯಿ ಭಾರತಿ, ನಮ್ಮ ನಾಡು ಭಾರತ...; ನಮ್ಮ ಪಾಪಾ, ನಮ್ಮ ಪಾಪ...; ಹಾಡೊಂದ ಹಾಡುವ ನೀಕೇಳು ಮಗುವೆ, ಬರಿದಾದ ಮನೆ ಬೆಳಗೆ ನೀ ಎಂದೂ ಬರುವೇ... ಈ ಚಿತ್ರದಲ್ಲಿ ಅಳವಡಿಸಲಾಗಿರುವ ಜನಪ್ರಿಯ ಗೀತೆಗಳು.ಗೋವಿನ ಹಾಡನ್ನು ಆಧರಿಸಿ ರಚಿಸಲಾಗಿರುವಗೀತೆಗೆ ಮಕ್ಕಳು ಪ್ರಾಣಿ–ಪಕ್ಷಿಗಳ ಪಾತ್ರವನ್ನು ಮನೋಜ್ಞವಾಗಿ ನಿರ್ವಹಿಸಿದ್ದಾರೆ.ಎಸ್. ಜಾನಕಿ, ಪಿ.ಬಿ.ಶ್ರೀನಿವಾಸ್, ಲತಾ, ಜಯದೇವ್ ಹಾಗೂ ಎಲ್.ಆರ್.ಈಶ್ವರಿ ಗೀತೆಗಳನ್ನು ಹಾಡಿದ್ದಾರೆ.ಶಾಲಾ ಮಕ್ಕಳನ್ನು ನಂದಿ ಬೆಟ್ಟಕ್ಕೆ ಪ್ರವಾಸಕರೆದೊಯ್ದಾಗ ನಂದಿ ಬೆಟ್ಟದ ಬಗ್ಗೆ ಸಮಗ್ರವಾಗಿ ಪರಿಚಯ ಮಾಡಿಕೊಡಲಾಗುತ್ತದೆ. ಉದಯಕುಮಾರ್‌ಗೆಒಂದೆರಡುಕ್ಷಣ ಬಂದು ಹೋಗುವ ಅತಿಥಿ ಪಾತ್ರವಿದೆ.ಶಾಲಾ ವಾರ್ಷಿಕೋತ್ಸವ ಸಂದರ್ಭದಲ್ಲಿ ಪ್ರೇಕ್ಷಕರ ಸಾಲಿನಲ್ಲಿ ಸಂಗೀತ ನಿರ್ದೇಶಕ ವಿಜಯಭಾಸ್ಕರ್ ಕಾಣಿಸಿಕೊಂಡಿದ್ದಾರೆ.

ಮಾತೇಇಲ್ಲದ 'ಬ್ಲಿಸ್' ಎಂಬ ಕಿರುಚಿತ್ರವನ್ನು ಮೊದಲು ತಯಾರಿಸಿದ್ದ ಲಕ್ಷ್ಮಿನಾರಾಯಣ್‌ಅವರಿಗೆಕಿವುಡು–ಮೂಗರ ಬಗ್ಗೆ ಬೆಳಕು ಚೆಲ್ಲುವಕಥೆಯೊಂದನ್ನು ರಚಿಸುವಯೋಚನೆ ಬಂದಿತು.ಹೀಗೆ ಬರೆದಕಥೆಯೇ 'ನಾಂದಿ'ಚಿತ್ರವಾಯಿತು.ರಾಜಕುಮಾರ್‌ಈ ಚಿತ್ರದಲ್ಲಿ ಮೈಸೂರು ಪೇಟಾ, ಕಚ್ಚೆಪಂಚೆ ಧರಿಸಿ ಶಾಲಾ ಉಪಾಧ್ಯಾಯರಾಗಿ ನೀಡಿದಅಭಿನಯ ಸ್ಮರಣೀಯವಾಯಿತು. ಮೂಕಿ ಪಾತ್ರದಲ್ಲಿ ಹರಿಣಿ ಸಹಜಅಭಿನಯ ನೀಡಿರುವುದೊಂದು ವಿಶೇಷ.ಈ ಚಿತ್ರತಯಾರಿಸುವಾಗ ಪಾತ್ರಧಾರಿಗಳು ಹಾಗೂ ತಂತ್ರಜ್ಞರು ಮೂಕ–ಕಿವುಡರ ಶೈಕ್ಷಣಿಕತಜ್ಞೆ ಬೆಲ್ಜಿಯಂನ ಮೇರಿ ಬಾಪುರವರ ಸಲಹೆಯನ್ನು ಪಡೆದುಕೊಂಡರು.ಮೂಕ ಪತ್ನಿಯಜೊತೆಅಭಿನಯಿಸಬೇಕಾಗಿದ್ದರಾಜಕುಮಾರ್‌ಕಿವುಡ–ಮೂಕರ ಶಾಲೆಗೆ ಹಲವಾರು ಬಾರಿ ಹಾಜರಾಗಿ, ಅವರ ನಡುವೆ ಕುಳಿತು ಅಭ್ಯಾಸ ಮಾಡಿದ ನಂತರವೇ ಅಭಿನಯಿಸಿದರು. ಹಾಡುಗಳನ್ನು ಹೊರಾಂಗಣದಲ್ಲಿ ಉಳಿದ ಎಲ್ಲಾಕಥಾ ಭಾಗವನ್ನು ಸ್ಟುಡಿಯೋ ಒಳಗೂ ಚಿತ್ರೀಕರಿಸುತ್ತಿದ್ದ ಆ ಕಾಲದಲ್ಲಿಅರ್ಧಕ್ಕೂ ಹೆಚ್ಚು ಭಾಗವನ್ನು ಹೊರಾಂಗಣದಲ್ಲಿಯೇಚಿತ್ರೀಕರಿಸಲಾಯಿತು. ಕಿವುಡು–ಮೂಗರ ಶಾಲೆ, ಸಂಭಾಂಗಣ, ಆಸ್ಪತ್ರೆ ಮುಂತಾದವುಗಳನ್ನು ಸಹಜವಾಗಿ ಚಿತ್ರೀಕರಿಸಿಕೊಳ್ಳಲಾಗಿದೆ.'ನಾಂದಿ' ಲಂಡನ್‌ನಲ್ಲಿ ನಡೆದಕಾಮನ್‌ವೆಲ್ತ್ ಚಲನಚಿತ್ರೋತ್ಸವದಲ್ಲಿ





ಪ್ರದರ್ಶಿತಗೊಂಡಿತು.ವಿದೇಶದಲ್ಲಿ ಪ್ರದರ್ಶನಗೊಂಡ ಮೊದಲ ಕನ್ನಡಚಿತ್ರಇದಾಯಿತು.ಕಿವುಡ–ಮೂಕರಿಗೆ ಪುನರ್ವಸತಿ ನೀಡುವ ಮೊದಲ ಭಾರತೀಯಚಿತ್ರವೂಇದಾಗಿತ್ತು.ಪಿ.ಎನ್.ಮೂರ್ತಿಚಿತ್ರಕ್ಕೆ ಸಂಕಲನ ಕೆಲಸ ಮಾಡಿದ್ದಾರೆ. ಚಿತ್ರ. ಎಲ್ಲಅರ್ಹತೆಯಿದ್ದೂರಾಷ್ಟ್ರಪ್ರಶಸ್ತಿಯಿಂದವಂಚಿತವಾದುದಕ್ಕೆಜನತೆಯೇ ಪ್ರತಿಭಟಿಸಿತ್ತು.

ಮೂರ್ತಿ ಶಾಲಾ ಉಪಾಧ್ಯಾಯ, ಉತ್ತಮ ನಡವಳಿಕೆ, ಸಜ್ಜನಿಕೆಯ ವ್ಯಕ್ತಿ, ನಿರ್ಮಲ ಮೆಚ್ಚಿನ ಮಡದಿ, ನಿರ್ಮಲ ಗಂಡು ಮಗುವಿಗೆ ತಾಯಿಯಾಗಿ ಹೆರಿಗೆ ಸಮಯದಲ್ಲಿ ಸಾಯುತ್ತಾಳೆ.ಮಗು ಒವ್ಮೆಜ್ವರಕ್ಕೆತುತ್ತಾದಾಗಕಿವುಡಾಗುತ್ತದೆ.ಮಾತಿನ ಶಕ್ತಿ ಕಳೆದುಕೊಳ್ಳುತ್ತದೆ.ಮೂರ್ತಿ ಕೊನೆಗೆ ಆ ಮಗುವಿಗೆ ತಾಯಾಗಲು ಮರು ವಿವಾಹ ಮಾಡಿಕೊಳ್ಳಲು ನಿರ್ಧರಿಸುತ್ತಾನೆ.ಕಿವುಡ ಮಗುವಿನ ತಂದೆಯನ್ನು ವಿವಾಹವಾಗಲು ಯಾರೂಒಪ್ಪದಿದ್ದಾಗಒಮ್ಮೆ ನಂದಿ ಬೆಟ್ಟದಲ್ಲಿಕಂಡಿದ್ದ ಮೂಕಿ ಗಂಗಾಳನ್ನೇ ಮೂರ್ತಿ ವಿವಾಹವಾಗುತ್ತಾನೆ.ಕಿವುಡು–ಮೂಗರ ಶಾಲೆಗೆ ಹೋಗಿ ಅಲ್ಲಿನ ಶಿಕ್ಷಣ ವೈಖರಿಕಲಿತು ಬಂದುತನ್ನ ಪತ್ನಿ ಹಾಗೂ ಮಗುವಿಗೆ ಮೂರ್ತಿ ಮಾತು–ಪಾಠ ಕಲಿಸುತ್ತಾನೆ.ಮಗು ಒಮ್ಮೆ ಬೆಂಕಿ ಆಘಾತಕ್ಕೆತುತ್ತಾಗಿಅತ್ತರೂ ಕೇಳಿಸದೇ ಹೋದ್ದರಿಂದ ಮಗು ಸಾಯುತ್ತದೆ.ಮೂರ್ತಿ ಹಾಗೂ ಗೋಪಾಲರಾಯ ಸೇರಿಕಿವುಡ–ಮೂಕರ ಶಾಲೆಯನ್ನೇಆರಂಭಿಸುತ್ತಾರೆ.ಗಂಗಾ ಗರ್ಭಿಣಿಯಾಗಿ ಹೆಣ್ಣು ಮಗುವಿನ ತಾಯಿಯಾಗುತ್ತಾಳೆ. ಆ ಮಗುವಿಗೆ ಮಾತು ಬರುವ ಮೂಲಕ ಚಿತ್ರ ಮುಗಿಯುತ್ತದೆ.



# ನಿಮ್ಮ ಮಾತು

### ದೇಶಪ್ರೇಮಿಗಳಾಗಿ ದೇಶದ್ರೋಹಿಗಳಾಗಬೇಡಿ

ದಿ ಕಾಶ್ಮೀರ ಪೈಲ್ ಕುರಿತು ನೀವು ಬರೆದ ಲೇಖನ ಮೂರ್ಖತನ ಅನಿಸುತ್ತದೆ. ಕೆಂಧೂಳಿ ಪತ್ರಿಕೆಯನ್ನು ಪ್ರತಿವಾರವೂ ಓದುತ್ತಿದ್ದೇನೆ ಒಂದು ರೀತಿ ಸೈದ್ಧಾಂತಿವಾಗಿದ್ದರೂ ಕೂಡ ಎಲ್ಲೋಒಂದು ಕಡೆ ಮೋದಿ ವಿರುದ್ಧವೇ ನಿಮ್ಮ ಪತ್ರಿಕೆ ನಿಲುವು ಇದ್ದಂತೆ ಕಾಣುತ್ತದೆ. ಈ ವಾರದ "ಹೀಗೂ ಮರಳು ಮಾಡಬಹುದು ಎನ್ನುವುದಕ್ಕೆ 'ದಿ ಕಾಶ್ಮೀರ ಫೈಲ್' ಸಾಕ್ಷಿ" ಎನ್ನುವ ಲೇಖನ ಏನನ್ನು ಸೂಚಿಸುತ್ತದೆ ಎನ್ನುವ ಕನಿಷ್ಠ ಪ್ರಜ್ಞೆಯೇನಿಮಗೆ ಇದ್ದಂತಿಲ್ಲ ಅಲ್ಲಿ ನಡೆದ ಘಟನಾವಳಿಗಳ ಕುರಿತ ಚಿತ್ರ ಅದು ಅಲ್ಲಿ ಹಿಂದೂಗಳ ಮಾರಣ ಹೋಮ ಆಗಿದೆ ಅಂತದ್ದರಲ್ಲಿ ನಿಮ್ಮಂತ ಮಾಧ್ಯಮದವರು ಎಡಬಿಡಂಗಿಗಳು ಈ ರೀತಿಯ ಲೇಖನಗಳನ್ನು ಬರೆಯುವ ಮೂಲಕ ಒಂದು ರೀತಿ ಸೈಕೋ ಗಳು ಎನಿಸುತ್ತದೆ. ಯಾವುದಕ್ಕೂ ಒಂದು ಮಿತಿಬೇಕು ಆ ಮಿತಿಯನ್ನು ಮೀರಿ ನಡೆಯಬೇಡಿ ಕೆಲವು ಮಾಧ್ಯಮಗಳು ಇಂತ ಅತಿರೇಕದ ಸುದ್ದಿಗಳನ್ನು ಬರೆದು ಖುಷಿಪಡುತ್ತಿವೆ ಅದನ್ನು ಬಿಟ್ಟು ದೇಶಪ್ರೇಮಿಗಳಾಗಿ ದೇಶದ್ರೋಹಿಗಳಾಗಬೇಡಿ.

● ಕೆ.ಟಿ.ವಿವೇಕಾನಂದ ಕೆಂಗೇರಿ, ಬೆಂಗಳೂರು.

### ಉತ್ತಮವಾಗಿ ಬರುತ್ತಿದೆ

ಕೆಂಧೂಳಿ ಪತ್ರಿಕೆ ವಾರ ವಾರವೂ ಉತ್ತಮವಾಗಿ ಬರುತ್ತಿದೆ. ಗುಣಮಟ್ಟದ ಪತ್ರಿಕೆಯಾಗಿ ಮೂಡುತ್ತಿದೆ. ಹಲವಾರು ಹಿರಿಯ ಪತ್ರಕರ್ತರು ಅಂಕಣಗಳನ್ನು ಬರೆಯುತ್ತಿರುವ ನಿಮ್ಮ ಪತ್ರಿಕೆ ಅ ಮೂಲಕ ರಾಜ್ಯದಲ್ಲಿ ಒಂದು ಸಿದ್ಧಾಂತದ ಅಡಿ ಪತ್ರಿಕೆ ಬರುತ್ತಿದೆ ಎನಿಸುತ್ತದೆ ನಾನು ಗಮನಿಸಿದಂತೆ ಸರ್ಕಾರಗಳ ವಿರುದ್ಧ ಗರ್ಜಿಸಿದ ಸುದ್ದಿಗಳು ಇವೆ. ಯಾವುದೇ ಪಕ್ಷವನ್ನು ನೀವು ಬಿಟ್ಟಿಲ್ಲ ಸತ್ಯದ ಹಾದಿಯಲ್ಲಿ ನಡೆಯುತ್ತಿದ್ದೀರಾ ಅನಿಸುತ್ತದೆ. ಈ ವಾರದಲ್ಲಿ ಹಿರಿಯ ಪತ್ರಕರ್ತರು ಬರೆದಿರುವ ನಮಗೂ ಬೇಕು ಆಪ್‌ತ್ಬಾಂದವ ಎನ್ನುವ ಸುದ್ದಿ ಆ ವಿಶ್ಲೇಷಣೆ ಭಾಷೆ ಶೈಲಿ ಖುಷಿ ನೀಡಿತು ಆದರೆ ರಾಜ್ಯದಲ್ಲಿ ಅಂತ ಆಪತ್ಬಾಂದವ ರಾಜಕೀಯ ಪಕ್ಷ ಎದ್ದೇಳುವುದು ಕಷ್ಟ ಅನಿಸುತ್ತದೆ. ನಿಮ್ಮ ಮನಮಿಡಿತದಲ್ಲಿ ಬರೆದ ಏಕಾಂತಯ್ಯ ಅವರ ರಾಜಕೀಯ ಸ್ವಚ್ಛತೆ ನಿಜಕ್ಕೂ ಚನ್ನಾಗಿದೆ ಅವರು ರಾಜಕಾರಣಕ್ಕೆ ಮಾದರಿಯೇ ಅಂತವರು ಇಂದು ಅಗತ್ಯವಿದೆ. ಆದರೆ ಸದ್ಯದ ರಾಜಕೀಯದಿಂದ ಬೇಸೆತ್ತು ರೈತಾಪಿ ಆಗಿರುವುದು ನೋಡಿದರೆ ಅವು ಸೈದ್ಧಾಂತಿಕ ನಿಲುವುಗಳು ಮತ್ತು ಬದ್ದತೆ ಎನ್ನುವುದು ಅವರಲ್ಲಿ ಇದೆ ಸ್ವಾಭಿಮಾನವೂ ಕೂಡ ಅವರಲ್ಲಿ ರಕ್ತಗತವಾದಂತಿದೆ. ಹಾಗೆಯೇ ಹಳೆಯ ಕನ್ನಡ ಚಿತ್ರಗಳ ಇತಿಹಾಸ ಕುರಿತು ಬರೆಯುತ್ತಿರುವ ಅ.ನಾ.ಪ್ರಹ್ಲಾದ್ ರಾವ್ ಅವರ ಲೇಖನಗಳು ಚನ್ನಾಗಿ ಬರುತ್ತಿವೆ ಹಳೆಯ ಸಿನಿಮಾಗಳ ಪರಿಚಯ ಸದ್ಯ ಎಲ್ಲಿಯೂಇಲ್ಲ ನಿಮ್ಮ ಪತ್ರಿಕೆ ಮೂಲಕ ಆ ಇತಿಹಾಸವನ್ನು ತಿಳಿಯುತ್ತಿದ್ದೇವೆ.

● ಅಮರೇಶ್ ಕುಂದುಗೋಳ ಧಾರವಾಡ

### ನಮಗೂ ಬೇಕು 'ಅಪ್'ತ್ಬಾಂದವ

ಈ ವಾರದ ' ಕಾಮನ್ ಮ್ಯಾನ್ ಸಿಎಂ ಚಿತ್ತ ಜನಸಾಮಾನ್ಯರತ್ತ' ಎಂಬ ಶೀರ್ಷಿಕೆಯಲ್ಲಿ ಬಂದ ಕೆಂಧೂಳಿ ಚನ್ನಾಗಿ ಬಂದಿದೆ. ಹಿರಿಯ ಪತ್ರಕರ್ತರಾದ ಅನಂತ ಚಿನಿವಾರ್ ಅವರು ಬರೆದ ನಮಗೂ ಬೇಕು ಒಬ್ಬ' ಆಪ 'ದ್ವಾಂದವ ಎನ್ನುವ ಲೇಖನ ನಿಜಕ್ಕೂ ಅದ್ಭುತವಾಗಿ ರಾಜ್ಯದಲ್ಲಿ ಇಂತ ಒಂದು ಪಕ್ಷದ ಅಗತ್ಯವಿದೆ ಆದರೆ ಜೆಡಿಎಸ್ ಎನ್ನುವ ಪಕ್ಷ ಪ್ರಾದೇಸಿಕ ಪಕ್ಷದ ಹೆಸರಿನಲ್ಲಿ ಕುಟುಂಬ ರಾಜಕಾರಣ ಮಾಡುತ್ತಾ ಹಲವಾರು ರಾಜಕಾರಣಿಗಳನ್ನು ಹೊರ ಹೋಗುವಂತೆ ಮಾಡಿದೆ. ಪ್ರಾದೇಶಿಕ ಪಕ್ಷಗಳ ಅಗತ್ಯತೆ ಮತ್ತು ರಾಷ್ಟ್ರೀಯ ಪಕ್ಷಗಳ ಕಸು ಗುಡಿಸುವ ಪಕ್ಷಗಳು ಅಗತ್ಯವಿದೆ ಆದರೆ ದುರ್ದೈವದ ಸಂಗತಿ ನಮ್ಮ ರಾಜ್ಯದಲ್ಲಿ ಅಂತ ಪಕ್ಷಗಳಿಗೆ ಅವಕಾಶವಿದ್ದರೂ ಕೂಡ ಪ್ರಾದೇಶಿಕ ಪಕ್ಷ ಕಟ್ಟುವವವರಿಲ್ಲ. ಈಗ ಅಪ್ ಇದೆ ಆ ಮೂಲಕವಾದರೂ ಯುವ ನಾಯಕರು ಅದರಲ್ಲಿ ಸೇರಿ ಹೊಸ ರಾಜಕಾರಣಕ್ಕೆ ಭಾಷ್ಯ ಬರೆಯಬೇಕು. ಉಳಿದಂತೆ ಎಂ.ಕೆ.ಭಾಸ್ಕರ್ ರಾವ್ ಅವರ ಲೇಖನವೂ ಕೂಡ ಚನ್ನಾಗಿದೆ.ಅ.ನಾ.ಪ್ರಹ್ಲಾದ್ ರಾವ್ ಅವರ ಹಳೆಯ ಸಿನಿಮಾ ಪಯಣ ನಿಜಕ್ಕೂ ಅತ್ಯುತ್ತಮವಾಗಿ ಮೂಡಿಬರುತ್ತಿದೆ.

● ದಿನೇಶ್‌ಕುಮಾರ್ ಎನ್. ವಿಜಯಪುರ

ಬೇಕಾಗಿದ್ದಾರೆ : 'ಕೆಂಧೂಳಿ' ವಾರ ಪತ್ರಿಕೆಗೆ ಜಿಲ್ಲಾ ವರದಿಗಾರರು/ಏಜೆಂಟರು ಬೇಕಾಗಿದ್ದಾರೆ. ಎಲ್ಲಾ ಜಿಲ್ಲೆಗಳಿಂದಲೂ ವರದಿಗಾರರನ್ನು ನೇಮಕ ಮಾಡಲಾಗುತ್ತಿದೆ ಆಸಕ್ತರು ಈ ದೂರವಾಣಿಗೆ ಸಂಪರ್ಕಿಸಬಹುದು. 9900633109

KENDHOOLI *Kannada Weekly*
ಸಂಪುಟ - 02 | ಸಂಚಿಕೆ - 71 | ಪುಟ - 16 | ರೂ. 16/- | ಮಾರ್ಚ್ 24 ರಿಂದ ಮಾರ್ಚ್ 30, 2022
kendhooli.com/e-paper/
RNI no KARKAN/2018/76310



# ಜೇಮ್ಸ್‌ಗೆ 'ಆರ್‌ಆರ್‌ಆರ್', 'ದಿ ಕಾಶ್ಮೀರ್ ಫೈಲ್' ಅಡ್ಡಿ

ರಾಜ್ಯದಲ್ಲಿ ಸದ್ಯಕ್ಕೆ ಅತೀ ಹೆಚ್ಚು ಚಿತ್ರಮಂದಿರಗಳಲ್ಲಿ ಜೇಮ್ಸ್ ಚಿತ್ರ ಪ್ರದರ್ಶನ ಕಾಣುವ ಮೂಲಕ ಇತಿಹಸ ದಾಖಲೆ ಸೃಷ್ಟಿಸಿದೆ ಈ ಮಧ್ಯೆ ಈಗ ಎರಡು ಚಿತ್ರಗಳು ಜೇಮ್ಸ್ ಚಿತ್ರಕ್ಕೆ ಅಡ್ಡಿಯಾಗುತ್ತಿವೆ.

ಒಂದು ದಿ ಕಾಶ್ಮೀರ್ ಫೈಲ್ ಚಿತ್ರವನ್ನು ಪಕ್ಷವೊಂದು ಉದ್ದೇಶಪೂರ್ವಕವಾಗಿಯೇ ಜೇಮ್ಸ್ ಚಿತ್ರವನ್ನು ತೆಗಿಸಿ ದಿ ಕಾಶ್ಮೀರ್ ಫೈಲ್ ಚಿತ್ರವನ್ನು ಪ್ರದರ್ಶನ ಮಾಡುವಂತೆ ಒತ್ತಡ ಹೇರುತ್ತಿದೆ ಈ ಮೂಲಕ ಈಗ ಕನ್ನಡ ಚಿತ್ರಕ್ಕೆ ಅಡ್ಡಿಪಡಿಸುತ್ತಿದ್ದಾರೆಪಕ್ಷವೊಂದರ ಕಾರ್ಯಕರ್ತರು.

ಇನ್ನೂ ಎರಡನೆಯದು ಬಹು ನಿರೀಕ್ಷಿತ ರಾಜಮೌಳಿ ನಿರ್ದೇಶನದ ಆರ್.ಆರ್.ಆರ್ ಸಿನಿಮಾ ವಿಶ್ವದಾದ್ಯಂತ 10 ಸಾವಿರಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ರಿಲೀಸ್ ಆಗಲು ಸಿದ್ಧತೆ ಮಾಡಿಕೊಂಡಿದೆ. ಕರ್ನಾಟಕವೊಂದರಲ್ಲೇ ಅಂದಾಜು 250ಕ್ಕೂ ಹೆಚ್ಚು ಸ್ಕ್ರೀನ್ ಗಳಲ್ಲಿ ಆರ್.ಆರ್.ಆರ್ ವೀಕ್ಷಣೆಗೆ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಕನ್ನಡ, ತೆಲುಗು, ತಮಿಳು ಮತ್ತು ಹಿಂದಿ ಸೇರಿದರೆ, ಈ ಸಂಖ್ಯೆ ಇನ್ನೂ ಹೆಚ್ಚಾದರೂ ಅಚ್ಚರಿ ಪಡಬೇಕಿಲ್ಲ. ಹಾಗಾಗಿ ಪುನೀತ್ ರಾಜ್ ಕುಮಾರ್ ನಟನೆಯ 'ಜೇಮ್ಸ್' ಸಿನಿಮಾಗೆ ಥಿಯೇಟರ್ ಕೊರತೆ ಎದುರಾಗಲಿದೆ.

ಮೊನ್ನೆಯಷ್ಟೇ ಕರ್ನಾಟಕದಲ್ಲಿ ಆರ್.ಆರ್.ಆರ್ ಪ್ರಿ ರಿಲೀಸ್ ಇವೆಂಟ್ ನಡೆದ ಸಂದರ್ಭದಲ್ಲಿ ರಾಜಮೌಳಿ ಅವರಿಗೆ ಪತ್ರಕರ್ತರು ಇಂಥದ್ದೊಂದು ಪ್ರಶ್ನೆ ಮುಂದಿಟ್ಟರು. 'ಜೇಮ್ಸ್ ಬಿಡುಗಡೆಯ ಹೊತ್ತಿನಲ್ಲೇ ನಿಮ್ಮ ಚಿತ್ರ ಬಿಡುಗಡೆ ಆಗುತ್ತಿದೆ. ಜೇಮ್ಸ್ಗ ತೊಂದರೆ ಆಗುವುದಿಲ್ಲವಾ?' ಎಂದಾಗ ಕ್ಷಣ ಹೊತ್ತು ರಾಜಮೌಳಿ ಉತ್ತರ ಕೊಡಲು ತಡಕಾಡಿದರು. ಆನಂತರ ಅಂಥದ್ದೇನೂ ಆಗುವುದಿಲ್ಲ. ಹಾಗೆ ಆಗದಂತೆ ವಿತರಕರು ನೋಡಿಕೊಳ್ಳುತ್ತಾರೆ ಎಂದಷ್ಟೇ ಜಾರಿದರು.

ಆದರೆ, ವಾಸ್ತವ ಹಾಗಿಲ್ಲ. ಗಾಂಧಿನಗರದ ಬಲ್ಲ ಮೂಲಗಳ ಪ್ರಕಾರ ಕೆವಿಎನ್ ಪ್ರೊಡಕ್ಷನ್ ಆರ್.ಆರ್.ಆರ್ ಚಿತ್ರಕ್ಕೆ ಬರೋಬ್ಬರಿ 52 ಕೋಟಿ ರೂಪಾಯಿ ಕೊಟ್ಟು ಕರ್ನಾಟಕದ ವಿತರಣಾ ಹಕ್ಕನ್ನು ಪಡೆದಿದೆ. ಕರ್ನಾಟಕದಲ್ಲೇ ಹಲವು ಭಾಗಗಳಲ್ಲಿ ಹಂಚಿಕೆದಾರರು ಕೋಟಿ ಕೋಟಿ ಹಿಡಿದುಕೊಂಡು ವಿತರಕರ ಆಫೀಸ್ ಮುಂದೆ ನಿಂತಿದ್ದಾರೆ. ಅನಿವಾರ್ಯವಾಗಿ ಅವರಿಗೂ ದುಡ್ಡು ಬರಲೇಬೇಕು. ಹಾಗಾಗಿ ಥಿಯೇಟರ್ ಕಿತ್ತುಕೊಳ್ಳದೇ ವಿಧಿಯಿಲ್ಲ.

ಸೋಮವಾರದಿಂದ 'ಜೇಮ್ಸ್' ಸಿನಿಮಾದ ಗಳಿಕೆಗೂ ಇಳಿದಿದೆ. ಮಲ್ಟಿಪ್ಲೆಕ್ಸ್ ನಲ್ಲಿ ಸ್ಕ್ರೀನ್ ಗಳ ಸಂಖ್ಯೆಯನ್ನೂ ಇಳಿಸಲಾಗಿದೆ. ಮಂಗಳವಾರವೂ ಹೇಳಿಕೊಳ್ಳುವಂತಹ ಹಣ ಬಾಕ್ಸ್ ಆಫೀಸಿಗೆ ಹರಿದು ಬಂದಿಲ್ಲ ಎನ್ನಲಾಗುತ್ತಿದೆ. ಹೀಗಾಗಿ ಒಂದಷ್ಟು ಚಿತ್ರಮಂದಿರಗಳನ್ನು ಆರ್.ಆರ್.ಆರ್ ಗೆ ಕೊಡುವ ಪ್ಲ್ಯಾನ್ ಕೂಡ ಜೇಮ್ಸ್ ನಿರ್ಮಾಪಕರು ಮಾಡುತ್ತಿದ್ದಾರೆ ಎನ್ನುವ ಮಾಹಿತಿ ಸಿಕ್ಕಿದೆ. ಇದನ್ನೂ ಓದಿ : ಕನ್ನಡದ ಹುಡುಗನ ಚಿತ್ರಕ್ಕೆ ಹನ್ಸಿಕಾ ಮೊಟ್ವಾನಿ ಹೀರೋಯಿನ್

ಈಗಾಗಲೇ ಜೇಮ್ಸ್ ಸಿನಿಮಾದಿಂದ ಟಿವಿ ರೈಟ್ಸ್, ಬೇರೆ ಬೇರೆ ಭಾಷೆಯ ಹಕ್ಕುಗಳು ಮತ್ತು ಥಿಯೇಟರ್ ನಿಂದ ಬಂದ ಗಳಿಕೆ ಒಟ್ಟು 125 ಕೋಟಿ ಎಂದು ಅಂದಾಜಿಸಲಾಗಿದೆ. ಹಾಕಿದ ಬಂಡವಾಳಕ್ಕಿಂತ ಐದಾರು ಪಟ್ಟು ಹಣವನ್ನು ನಿರ್ಮಾಪಕರ ಜೇಬಿಗೆ ತುಂಬಿಸಿದ್ದಾನೆ ಜೇಮ್ಸ್. ಹಾಗಾಗಿ ಭಯ ಪಡುವಂತಹ ಪ್ರಶ್ನೆ ನಿರ್ಮಾಪಕರಿಗೆ ಎದುರಾಗುವುದಿಲ್ಲ ಎನ್ನುತ್ತಾರೆ ವಿತರಕರು.

ಸದ್ಯಕ್ಕೆ ಜೇಮ್ಸ್ ಗೆ ಥಿಯೇಟರ್ ಕೊರತೆ ಎದುರಾಗಲಿದೆ ಎನ್ನುವ ಮಾಹಿತಿ ಸಿಕ್ಕಿದೆ. ಬಾಹುಬಲಿ 2 ನಂತರ ರಾಜಮೌಳಿ ಅವರ ಸಿನಿಮಾ ಬರುತ್ತಿರುವುದರಿಂದ ಮತ್ತು ಜೂನಿಯರ್ ಎನ್.ಟಿ.ಆರ್ ಹಾಗೂ ರಾಮ್ ಚರಣ್ ತೇಜ ಕಾಂಬಿನೇಷನ್ ನ ಮೊದಲ ಚಿತ್ರ ಇದಾಗಿದ್ದರಿಂದ ಈಗಿನಿಂದಲೇ ಟಿಕೆಟ್ ಬುಕ್ಕಿಂಗ್ ಶುರುವಾಗಿದೆ.








# ಸಾಮರ್ಥ್ಯ ಮೊದಲ ಪ್ರತಿ ಸಿದ್ಧ

ಕಾರ್ತಿಕ್ ಮೂವೀಸ್ ಲಾಂಛನದಲ್ಲಿ ರಾಜರಬಂಡಿ ಕಾರ್ತಿಕ್ ನಿರ್ಮಿಸುತ್ತಿರುವ 'ಸಾಮರ್ಥ್ಯ' ಚಿತ್ರಕ್ಕೆ ಮೊದಲ ಪ್ರತಿ ಸಿದ್ಧವಾಗಿದ್ದು ಮುಂದಿನ ತಿಂಗಳು ಬಿಡುಗಡೆಯಾಗಲಿರುವ ಈ ಚಿತ್ರದ ನಿರ್ದೇಶನ ಹೆಚ್.ವಾಸು. ಇದು ಇವರ 24ನೇ ಚಿತ್ರ ಈ ಹಿಂದೆ 'ಲಾಲಿಹಾಡು', 'ಇಂದ್ರ', 'ಕೋಬ್ರ', 'ವಿರಾಟ್' ಮುಂತಾದ ಚಿತ್ರಗಳನ್ನು ನಿರ್ದೇಶಿಸಿದ್ದರು. ಚಿತ್ರಕ್ಕೆ ಛಾಯಾಗ್ರಹಣ ಎ.ವಿ. ಕೃಷ್ಣಕುಮಾರ್(ಕೆ.ಕೆ), ಸಂಗೀತ-ಅರುಣ್ ಆಂಡ್ರ್ಯು, ಸಾಹಿತ್ಯ-ಕೆ. ಕಲ್ಯಾಣ್, ವಿ ನಾಗೇಂದ್ರ ಪ್ರಸಾದ್, ವಿಶ್ವಾ.ಜಿ, ಸಾಹಸ ಅರ್ಜುನ್, ಡ್ಯಾನಿ, ಕೌರವ ವೆಂಕಟೇಶ್, ವಿನೋದ್, ಸಂಕಲನ-ವೆಂಕಟೇಶ್-ಯುಡಿವಿ, ನೃತ್ಯ-ರಾಮು, ಸಹನಿರ್ದೇಶನ-ಎನ್ ಬಸವರಾಜು ಚೋರನಹಳ್ಳಿ, ನಿರ್ವಹಣೆ- ರಂಗಸ್ವಾಮಿ, ತಾರಾಗಣದಲ್ಲಿ – ಬಾಲಾಜಿ ಶರ್ಮ, ಗಗನ ಮಧು, ಶೋಭರಾಜ್, ಅವಿನಾಶ್, ದಶರತ್ ಅಭಿ, ರವೀಂದ್ರನಾಥ್, ಪೆಟ್ರೋಲ್ ಪ್ರಸನ್ನ, ಮಡೆನೂರು ಮನು, ಸ್ವಾತಿ, ಶಶಿಕುಮಾರ್, ಮುಂತಾದವರಿದ್ದಾರೆ. ಚಿತ್ರಕ್ಕೆ ಬೆಂಗಳೂರು, ಚಿಕ್ಕಮಗಳೂರು, ಸಕಲೇಶಪುರ ಮುಂತಾದೆಡೆಗಳಲ್ಲಿ ಚಿತ್ರೀಕರಣ ನಡೆಯಲಿದೆ. ಲವ್ & ಕ್ರೈಂ ಕಥಾ ವಸ್ತುವುಳ್ಳ ಈ ಕಥೆಯನ್ನು ಈಗಿನ ಕಾಲದ ಸಮಾಜಕ್ಕೆ ಹೊಂದಿಕೊಳ್ಳುವಂತಹ ಹಲವು ತಿರುವುಗಳು ಈ ಲವ್ ಸ್ಟೋರಿಯಲ್ಲಿದೆ.

# ಟಕೀಲಾ ಡಬ್ಬಿಂಗ್ ಮುಕ್ತಾಯ

ಶ್ರೀ ಸಿದ್ಧಿವಿನಾಯಕ ಫಿಲಂಸ್ ಲಾಂಛನದಲ್ಲಿ ನಿರ್ದೇಶಕ ಮರಡಿಹಳ್ಳಿ ನಾಗಚಂದ್ರ (ವಿದ್ಯಾರ್ಥಿ, ಮುನಿಯ, ಜನ್‌ಧನ್ ನಿರ್ದೇಶಕ) ನಿರ್ಮಿಸುತ್ತಿರುವ 'ಟಕೀಲಾ'ಕ್ಕೆ ಪ್ರಸಾದ್ ಲ್ಯಾಬ್‌ನ ಸ್ಟುಡಿಯೋವಿನಲ್ಲಿ ಡಬ್ಬಿಂಗ್ ಕಾರ್ಯ ಪೂರ್ಣಗೊಂಡಿತು. ಮುಂದಿನ ತಿಂಗಳು ಬಿಡುಗಡೆಯಾಗಲಿರುವ ಈ ಚಿತ್ರಕ್ಕೆ ಕಥೆ, ಚಿತ್ರಕಥೆ, ಸಂಭಾಷಣೆ, ಹಾಡುಗಳು, ನಿರ್ದೇಶನ, ಕೆ.ಪ್ರವೀಣ್ ನಾಯಕ್ ಇವರು ಹಿಂದೆ 'ಜಡ್' 'ಹೂಂ ಅಂತೀಯಾ ಉಹೂಂ ಅಂತೀಯಾ' 'ಮೀಸೆ ಚಿಗುರಿದಾಗ' ಚಿತ್ರಗಳನ್ನು ನಿರ್ದೇಶಿಸಿದ್ದರು. ಛಾಯಾಗ್ರಹಣ ಪಿ.ಕೆ. ಹೆಚ್. ದಾಸ್, ಸಂಗೀತ ಟಾಪ್‌ಸ್ಟಾರ್ ರೇಣು, ಸಂಕಲನ ಗಿರೀಶ್, ಕಲೆ–ಪ್ರಶಾಂತ್, ಸಹನಿರ್ಮಾಪಕರು ಆರ್.ತ್ಯಾಗರಾಜ್, ಗಿರೀಶ್ ಕಂಪ್ಲಾಪುರ್, ಕಾರ್ಯಕಾರಿ ನಿರ್ಮಾಪಕರಾಗಿರುವ ಈ ಚಿತ್ರದಲ್ಲಿ ಧರ್ಮ ಕೀರ್ತಿರಾಜ್, ನಿಖಿತಾ ಸ್ವಾಮಿ, ನಾಗೇಂದ್ರ ಅರಸ್, ಕೋಟೆ ಪ್ರಭಾಕರ್ ಸುಮನ್, ಜಯರಾಜ್, ಸುಷ್ಮಿತಾ, ಪ್ರವೀಣ್ ನಾಯಕ್, ಮುಂತಾದವರಿದ್ದಾರೆ. ಈ ಚಿತ್ರದ ಚಿತ್ರೀಕರಣ, ಬೆಂಗಳೂರು, ದೇವರಾಯನದುರ್ಗ, ಸಕಲೇಶಪುರದಲ್ಲಿ ನಡೆದಿದೆ.



KENDHOOLI, Kannada Weekly Printed by, Published by, Owned by & Edited by: T MANJUNATHA, DS MAX SAVVY APARTMENT, PLOT NO 202,2ND FLOOR, JP NAGARA 9TH PHASE, AMRUTHNAGARA MAIN ROAD, ANJANAPURA BANGALORE 560108
Printed at : Brundavan printers, 88/1 1st cross, sameerpura road, Kg nagara Bengaluru-560019
Mob: +91 99161 91222. email: kendhooli18@gmail.com
The Editor is Responsible for selection of news under the PRB Act